ಶ್ರೀ ಸಿ.ಟಿ. ರವಿ:– ಬಿಲ್ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಓ.ಕೆ. ನಾನು ತಯಾರು.

3. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕಬ್ಬು [ಖರೀದಿ ಮತ್ತು ಸರಬರಾಜು ನಿಯಂತ್ರಣ] [ತಿದ್ದುಪಡಿ] ವಿಧೇಯಕ, 2014

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ [ಸಹಕಾರ ಹಾಗೂ ಸಕ್ಕರೆ ಸಚಿವರು]:– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಕಬ್ಬು [ಖರೀದಿ ಮತ್ತು ಸರಬರಾಜು ನಿಯಂತ್ರಣ] [ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈ ಹಿಂದೆ 2013ರಲ್ಲಿ ಕರ್ನಾಟಕ ಕಬ್ಬು [ಖರೀದಿ ಮತ್ತು ಸರಬರಾಜು ನಿಯಂತ್ರಣ] ವಿಧೇಯಕವನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತಂದು ಅದರಡಿಯಲ್ಲಿ ಈ ಕಬ್ಬಿನ ಬೆಲೆ ನಿಗದಿಪಡಿಸುವುದು ಮತ್ತು ಕಬ್ಬು ಬೆಳೆ ಬೆಳೆಯುವ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಯಾವರೀತಿಯ ಕಾನೂನಿನ ಕ್ರಮಗಳನ್ನು ಜರುಗಿಸಬೇಕು ಹಾಗೂ ಹೇಗೆ ನಿರ್ವಹಣೆ ಮಾಡಬೇಕೆಂದು ತಿಳಿಸುವ ಒಂದು ವಿಧೇಯಕವನ್ನು ಈ ಹಿಂದೆ ತಂದು ಈ ವರ್ಷ ಆ ವಿಧೇಯಕದ ಅಡಿಯಲ್ಲಿ ಕಬ್ಬಿನ ಬೆಲೆ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಆದರೆ ಆ ಒಂದು ವಿಧೇಯಕದಲ್ಲಿ ಕೆಲವು ನ್ಯೂನ್ಯತೆಗಳಿದ್ದು, ಈಗೇನು ಕಳೆದ ಒಂದು ವರ್ಷದಿಂದ ಆ ವಿಧೆಯಕದಡಿಯಲ್ಲಿ ಕೆಲವು ಸೂಚನೆಗಳನ್ನು, ತೀರ್ಮಾನಗಳನ್ನು ಜಾರಿಗೆ ತರುತ್ತಿದ್ದೇವೆ, ಅದರಲ್ಲಿ ಸಾಕಷ್ಟು ಗೊಂದಲಗಳಾಗಿ

ಕೋರ್ಟಿನ ಮೆಟ್ಟಿಲೇರುವ ಒಂದು ಪ್ರಕರಣಗಳೂ ಕೂಡ ಆಗಿವೆ. ಈ ಕಾಯಿದೆಯನ್ನು ಇನ್ನೂ ಬಲಯುತವಾಗಿ ಮಾಡುವ ಮತ್ತು ಹೆಚ್ಚು ಬಲಶಾಲಿ ಮಾಡುವ ನಿಟ್ಟಿನಿಂದ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಇವತ್ತು ಈ ಸದನದಲ್ಲಿ ಮಂಡಿಸಿದ್ದೇವೆ. 2 ಕಬ್ಬಿನ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಪಡಿಸುವುದು ಪ್ರಮುಖವಾದ ಒಂದು ವಿಚಾರ ಈ ತಿದ್ದುಪಡಿಯಲ್ಲಿದೆ. ಹಾಗಾಗಿ ಜುಲೈ 1 ರಿಂದ 30 ವರೆಗೆ ಕಬ್ಬಿನ ವರ್ಷವೆಂದು ನಿಗದಿಪಡಿಸುವ ಒಂದು ವಿಚಾರ ಇದರಲ್ಲಿ ಪ್ರಮುಖವಾಗಿದೆ. ಮತ್ತು ಕಬ್ಬನ್ನು ಸರಬರಾಜು ಮಾಡಿದ ರೈತರಿಗೆ ಎರಡು ಹಂತದಲ್ಲಿ ಹಣ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಮೊದಲ ಹಂತ FRP ಪ್ರಕಾರ 14 ದಿವಸಗಳಲ್ಲಿ ಹಣವನ್ನು ಪಾವತಿ ಮಾಡಿಸುವುದು. ಎರಡನೆಯದು ಕಬ್ಬು ಅರೆಯುವ season ಮುಗಿದ ಮೇಲೆ ಕಬ್ಬಿನಿಂದ ಉತ್ಪಾದನೆಯಾಗುವ ಸಕ್ಕರೆ ಹಾಗು ಇತರೆ ಉತ್ಪನ್ನಗಳಿಂದ ಬರುವ ಆದಾಯ ಲೆಕ್ಕಾ ಹಾಕಿ ಕಾರ್ಖಾನೆ ಮತ್ತು ರೈತರ ನಡುವೆ ಹಂಚಿಕೆ ಮಾಡುವುದು. ಈ season ಮುಗಿದ ಮೇಲೆ ಎರಡನೆ payment ಮಾಡುವ ಈ ಒಂದು ವಿಚಾರ ಈ ತಿದ್ದುಪಡಿ ಕಾಯಿದೆಯಲ್ಲಿದೆ. ಮತ್ತು FRP (Fair Remunerative Price) ಏನಿದೆ ಅದನ್ನು ಪ್ರಸ್ತುತ ex-gate ಮತ್ತು ex-field ಎಂದು ನಾವು ನಿಗದಿಪಡಿಸಿಕೊಂಡು ತೀರ್ಮಾನ ಮಾಡಿದ್ದೇವೆ. ಆದರೆ ಈ ಒಂದು ತಿದ್ದುಪಡಿಯಲ್ಲಿ, Sugar Control Order ನಲ್ಲೂ ಕೂಡ ex-gate ಎಂದು ನಿಗದಿಯಾಗಿರುವುದರಿಂದ ಈ ನಮ್ಮ ವಿಧೇಯಕದಲ್ಲೂ ಕೂಡ FRP ಅನ್ನು ex-gate ಮೂಲಕ ತೀರ್ಮಾನ ಮಾಡಬೇಕು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಮತ್ತು ಪ್ರತಿ ಕಾರ್ಖಾನೆ ಕಬ್ಬಿನ ಬೆಲೆ, ಕಬ್ಬಿನ ಇಳುವರಿ ಹಾಗೂ ಉತ್ಪನ್ನಗಳು ಮತ್ತು ಸಕ್ಕರೆ ವಿಲೇ ಆಧಾರದ ಮೇಲೆ ಬೆಲೆ ನಿಗದಿಪಡಿಸುವುದನ್ನು ಸೂಚಿಸಿದ್ದೇವೆ ಹಾಗೂ ಮಂಡಳಿಗೆ ಸಹಾಯ ಮಾಡಲು ಒಂದು ತಜ್ಞರ ಸಮಿತಿಯನ್ನು ರಚನೆ ಮಾಡುವುದು, ಅದು ಕಾರ್ಖಾನೆಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವಾದ ಅಂಕಿಅಂಶಗಳನ್ನು ಕ್ರೋಡೀಕರಿಸತಕ್ಕಂತದ್ದು, ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಲು ಮಂಡಳಿಗೆ ವರದಿ ಮಾಡುವ, ಸಹಾಯ ಮಾಡುವ ನಿಟ್ಟಿನಲ್ಲಿ

ತಜ್ಞರ ಒಂದು ಸಮಿತಿಯನ್ನು ಈ ಒಂದು ತಿದ್ದುಪಡಿ ವಿಧೇಯಕದಲ್ಲಿ ತಂದಿದ್ದೇವೆ, ಮೊದಲು ಇರಲಿಲ್ಲ. ಈ ಕಬ್ಬಿನ ಬೆಲೆ ನಿಯಂತ್ರಣ ಸಮಿತಿಯಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಅಥವಾ ಬೆಂಗಳೂರು ಪ್ರಾಧ್ಯಾಪಕ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಒಬ್ಬ ಕೃಷಿ ಅರ್ಥಶಾಸ್ತ್ರ ತಜ್ಞರನ್ನು ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವುದಕ್ಕೆ provision ಮಾಡಿದ್ದೇವೆ. ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನಾ ಸಂಸ್ಥೆ ಬೆಳಗಾವಿ, ಅವರನ್ನೂ ಕೂಡ ಒಬ್ಬ ಸದಸ್ಯರನ್ನಾಗಿ ಮಾಡುವುದು. ಈ ರೀತಿ ಕೆಲವೊಂದು ತಿದ್ದುಪಡಿಗಳನ್ನು ಈ ಒಂದು ವಿಧೇಯಕದಲ್ಲಿ ತರುವುದಕ್ಕೆ ಮಂಡಿಸಿದ್ದೇವೆ, ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ [ವಿರೋಧಪಕ್ಷದ ನಾಯಕರು]:– ಮಾನ್ಯ ಅಧ್ಯಕ್ಷರೆ, ಇವತ್ತು ಈ ಒಂದು ವಿಧೇಯಕವನ್ನೇನು ತಂದಿದ್ದಾರೆ, ಹಿಂದ ನಾನು ಮುಖ್ಯಮಂತ್ರಿಯಾಗಿದ್ದಾಗ, ಈ ಕಾನೂನನ್ನು ತಂದೆವು. ಈ ಕಾನೂನನ್ನು ತರಬೇಕೆಂದು ನಮ್ಮ ಕಬ್ಬು ಬೆಳೆಗಾರರ ಬಹಳ ವರ್ಷಗಳ ಬೇಡಿಕೆ ಇತ್ತು, ನಾವು ಬೆಳಗಾಂ ಅಧಿವೇಶನದಲ್ಲಿ ಕಾನೂನನ್ನು ತಂದೇವು. ಅದರಲ್ಲಿ ಒಂದಿಷ್ಟು improvement ಮಾಡಬೇಕೆನ್ನುವುದಕ್ಕೆ ಇದನ್ನು ತರುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಆ improvement ರೈತರಿಗೆ strengthen ಮಾಡಬೇಕು, ರೈತರಿಗೆ ಅನುಕೂಲವಾಗಬೇಕೆನ್ನುವ ಉದ್ದೇಶ ಇದ್ದರೆ ಒಳ್ಳೆಯದು, ಆದರೆ ನಾವು ಇದರಲ್ಲಿ ಕೆಲವೊಂದು clauses ಗಳನ್ನು ನೋಡಿದಾಗ ರೈತರಿಗೂ ತೊಂದರೆಯಾಗುವುದನ್ನು ಕಾಣುತ್ತಿದ್ದೇವೆ. Particularly ಇಲ್ಲಿ ನೀವೇನು ಹೇಳಿದಿರಿ, Section-2 ನಲ್ಲಿ Sub-Clause-2(e) ನಲ್ಲಿ ಕಬ್ಬಿನ ನ್ಯಾಯ ಮತ್ತು ಪರಿಶ್ರಮ ಬೆಲೆ, FRP ಎಂದರೆ, ಕಾರ್ಖಾನೆಯ ದ್ವಾರದಲ್ಲಿ ಒಪ್ಪಿಸಲಾದ ಕಬ್ಬಿಗಾಗಿ ಆ ವರ್ಷಕ್ಕಾಗಿ ಕಬ್ಬಿ ನಿಯಂತ್ರಣ ಆದೇಶ 1963ರ 3ನೇ ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿದ ಬೆಲೆ, ಇಲ್ಲೇನು ಮಾಡಿದಿರಿ? ಹಿಂದಿನ ಕಾನೂನಿನ ಪ್ರಕಾರ ನಿಮ್ಮ ನಿರ್ದೇಶಕರೊಂದು ಆದೇಶ ಹೊರಡಿಸಿದರು. ದಕ್ಷಿಣ ಕರ್ನಾಟಕ ಭಾಗಕ್ಕೆ ex-gate ದರದಲ್ಲಿ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ` 2,500, ಉತ್ತರ ಕರ್ನಾಟಕ ex-field ದರದಲ್ಲಿ ಪ್ರತಿ

ಮೆಟ್ರಿಕ್ ಟನ್ ಕಬ್ಬಿಗೆ ` 2,500 ಎಂದು ನೀವೇ ದಿ:23.11.2013ಕ್ಕೆ ಆದೇಶ ಹೊರಡಿಸಿದ್ದೀರಿ. ಇದಕ್ಕೆ ವ್ಯತಿರಿಕ್ತವಾದುದು, ನೀವು ಹೇಳುತ್ತೀರಿ Central Government FRP ಏನಿದೆ ಆ ಅಡಿಯಲ್ಲಿ ಅದು ex-gate, ಅದಕ್ಕೆ ಪೂರಕವಾಗಿ ಇದನ್ನು ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಕರ್ನಾಟಕದ ಪರಿಸ್ಥಿತಿ ಹಾಗೆ ಇಲ್ಲ, ನೀವು ಕೇಂದ್ರದ ಆಧಾರವಿಟ್ಟುಕೊಂಡು ಮಾಡುವುದಾದರೆ ಇವತ್ತು ಕರ್ನಾಟಕದಲ್ಲಿ ಆ ಪರಿಸ್ಥಿತಿ ಇಲ್ಲ. ಏಕೆಂದರೆ, ದಕ್ಷಿಣ ಭಾಗದಲ್ಲಿರುವ ಕಬ್ಬಿನ ಬೆಳೆಯ ಮತ್ತು yield ಏನು ಬರುತ್ತದೆ, ಅದು ಬಹಳ ಕಡಿಮೆ ಬರುತ್ತದೆ. ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ yield ಜಾಸ್ತಿ ಬರುತ್ತದೆ. ಇವತ್ತು ಅವರು 9.5% average ಹೇಳಿಕೊಳ್ಳುತ್ತಾರೆ, ಆದರೆ ಇಲ್ಲಿ 10%–12% ವರೆವಿಗೂ ಹೋಗುತ್ತದೆ, ಜಾಸ್ತಿನೂ ಹೋಗುತ್ತದೆ. ಇವತ್ತು ನಾನು ಇನ್ನೊಂದು ಅಂಶವನ್ನು ಹೇಳುತ್ತೇನೆ, ಇವತ್ತು sugarcane ಬೆಳೆಯುವುದಿರಬಹುದು, production ಇರಬಹುದು 80% ಉತ್ತರ ಕರ್ನಾಟಕದ ಭಾಗದಲ್ಲಿರುವುದು. ಬೆಳಗಾಂ division ಮತ್ತು ಗುಲ್ಬರ್ಗಾ, ಇವೆರಡೂ division 80% sugar production ಮಾಡುತ್ತಾರೆ. ಹೀಗಾಗಿ ಈ ಭಾಗದಲ್ಲಿ ex-field ಗೆ ಫ್ಯಾಕ್ಟರಿ ಮಾಲೀಕರು ಕಬ್ಬನ್ನು ಕಟಾವು ಮಾಡಿಕೊಂಡು ತೆಗೆದುಕೊಂಡು ಹೋಗುತ್ತಿದ್ದರು. ಈಗ ನೀವು ಇದನ್ನು amendment ಮಾಡುವುದರಿಂದ ಆ ex-field ಹೋಗಿ ಇದೇ ಕಾನೂನು ಪ್ರಕಾರ ಎಲ್ಲಾ sugar factory ಮಾಲೀಕರು ರೈತರಿಗೆ ಕಬ್ಬನ್ನು ನೀವೇ ತಂದು ಹಾಕಬೇಕೆಂದು ಹೇಳುತ್ತಾರೆ. Factory ಗೆ ನೀವೇ ತಂದು ಹಾಕಬೇಕೆನ್ನುವಂತೆ ಕಾನೂನಿನಲ್ಲಿಯೇ ಹೇಳಿದೆ, ರಾಜ್ಯ ಸರ್ಕಾರ ಕಾನೂನು ಮಾಡಿದ್ದಾರೆ. ನೀವೇ ತಂದು ಹಾಕಿರಿ ಎನ್ನುತ್ತಾರೆ. ಇದುವರೆಗೂ ಆ ವ್ಯವಸ್ಥೆ ಇರಲಿಲ್ಲ, ವ್ಯತಿರಿಕ್ತವಾಗಿ ನೀವು ಒಂದು ಹೊಸ ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಕಬ್ಬು ಬೆಳೆಯುವ ರೈತರಿಗೆ ಬಹಳಷ್ಟು ತೊಂದರೆಯಾಗುತ್ತದೆ ಆಮೇಲೆ ಕಬ್ಬನ್ನು ಸಾಗಾಣಿಕೆ ಮಾಡುವಂಥ ಕೆಲಸ ರೈತರಿಂದ ಆಗುವುದಿಲ್ಲ. ರೈತರು ಇದುವರೆಗೆ ಕಬ್ಬನ್ನು ಬೆಳೆದುಕೊಂಡು ಬಂದಿರುವ ಪದ್ಧತಿಯಿದೆಯಷ್ಟೆ. ಆದುದರಿಂದ ಕಬ್ಬನ್ನು ಸಾಗಾಣಿಕೆ ಮಾಡಲು

ಅವರಿಂದ ಸಾಧ್ಯವೇ ಇಲ್ಲ. ಇನ್ನೊಂದು ವಿಚಾರವೆಂದರೆ ಕಬ್ಬನ್ನು ಕಟಾವು ಮಾಡಿಕೊಂಡು ಆ factory ಗೆ ಹಾಕಬೇಕೆಂದರೆ ಮೂರ್ನಾಲ್ಕು ದಿವಸಗಳು ಬೇಕಾಗುತ್ತದೆ. ಈಗ ಇರುವ ಪದ್ಧತಿಯಂತೆ factory ಮಾಲೀಕರು ಏನು ಮಾಡುತ್ತಿದ್ದಾರೆಂದರೆ ಕಬ್ಬನ್ನು ಅವರೇ ಕಟಾವು ಮಾಡಿಕೊಂಡು within 24 hours ಅದನ್ನು factory ಗೆ ತೆಗೆದುಕೊಂಡು ಹೋಗಿ ನುರಿಸುವಂಥ crushing ಕೆಲಸವನ್ನು ಮಾಡಿಸುತ್ತಿದ್ದರು. ಆ ರೀತಿ ಮಾಡುವುದರಿಂದ yield ಜಾಸ್ತಿ ಬರುತ್ತದೆ ಮತ್ತು sugar production ಜಾಸ್ತಿಯಾಗುತ್ತದೆ. ನೀವು 24 ತಾಸುಗಳಿಗಿಂತ ಜಾಸ್ತಿ ಸಮಯವನ್ನು ತೆಗೆದುಕೊಂಡು crush ಮಾಡಿದರೆ ಅದರಿಂದ ಶೇ.25 ರಷ್ಟು yield ಕಡಿಮೆಯಾಗುತ್ತದೆ ಮತ್ತು sugar production ಕೂಡ ಕಡಿಮೆಯಾಗುತ್ತದೆ. ನೀವು ಬೇಕಾದರೆ ಇದರ ಬಗ್ಗೆ scientific study ಮಾಡಿಸಿ. ಇದರಿಂದ yield ಕಡಿಮೆಯಾಗುತ್ತದೆ ಮತ್ತು sugar production ಕೂಡ ಕಡಿಮೆಯಾಗುತ್ತದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಎರಡೂಕಡೆಯಲ್ಲಿಯೂ ತೊಂದರೆಯಾಗುತ್ತದೆ. ಕಬ್ಬು ಬೆಳೆಗಾರರಿಗೂ ತೊಂದರೆ, ಅವರಿಗೆ ಅನಾನುಕೂಲತೆ ಮಾಡುವಂಥದ್ದು. ಇದರಿಂದಾಗಿ ಒಂದು ಕಡೆ ಇಂಥ ತೊಂದರೆಯಾಗುವುದನ್ನು ನೋಡುತ್ತಿದ್ದೇವೆ. ಇನ್ನೊಂದು ಕಟಾವು ಮಾಡಿದ 24 hours ನಂತರ ಕಬ್ಬನ್ನು ನುರಿಸುವುದಕ್ಕೆ ಹೋದರೆ recovery ಕೂಡ ಕಡಿಮೆಯಾಗುತ್ತದೆ. ಇದು basic ಆಗಿ ಇರುವಂಥ ಪ್ರಶ್ನೆ.

ಅಧ್ಯಕ್ಷರು:- Recovery ಗಿಂತ weight ಕಡಿಮೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಹೌದು ಮಾನ್ಯ ಅಧ್ಯಕ್ಷರೆ, weight ಕಡಿಮೆಯಾಗುತ್ತದೆ ಮತ್ತು sugar percentage ಕೂಡ ಕಡಿಮೆಯಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ್:- Sugar percentage ಹೇಗೆ ಕಡಿಮೆಯಾಗುತ್ತದೆಂದರೆ ಎಷ್ಟು damage ಆಗುತ್ತದೋ ಅಷ್ಟು ಕಬ್ಬಿನೊಳಗಿನ ರಸ ಕಡಿಮೆಯಾಗುತ್ತದೆ. ರಸ ಕಡಿಮೆಯಾದಷ್ಟು sugar percentage ಕಡಿಮೆಯಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಇದರ ಬಗ್ಗೆ experts scientific ಆಗಿ study ಮಾಡಿರುವಂಥದ್ದೂ ಕೂಡ ಇದೆ. ಹೀಗಾಗಿ ನೀವು ಅದನ್ನು ಅನುಕರಣೆ ಮಾಡಿದರೆ, ನೀವೊಂದು ಸಲ ex-gate ಎಂದು ಮಾಡಿಬಿಟ್ಟರೆ ಇವತ್ತು ಬಹುತೇಕ ಕಬ್ಬು ಬೆಳೆಗಾರರಿಗೆ ನೀವು ತೊಂದರೆಯನ್ನು ಮಾಡುತ್ತೀರಿ. ಇದೊಂದು ರೀತಿ ಕರಾಳವಾಗಿ ಪರಿಣಮಿಸುತ್ತದೆ. ಇದರ subsequent consequences ಏನಾಗುತ್ತದೆ ಎಂಬುದನ್ನು ನೀವು ಅರ್ಥವೇ ಮಾಡಿಕೊಂಡಿಲ್ಲ. strengthen ಮಾಡಿ, ಬೇಡವೆಂದು ಹೇಳುವುದಿಲ್ಲ. ಆದರೆ ಕಬ್ಬು ಬೆಳೆಗಾರರು strengthen ಆಗುವ ರೀತಿಯಲ್ಲಿ ಅವರ ಕೈಗಳನ್ನು ಬಲಗೊಳಿಸುವಂತೆ ಅವರಿಗೆ ಅನುಕೂಲ ಮಾಡಿಕೊಡುವಂಥ ಕೆಲಸವಾಗಬೇಕೇ ಹೊರತು ಮತ್ತೆ ವ್ಯತಿರಿಕ್ತವಾಗಿ ಇದ್ದಂಥ ಪದ್ಧತಿಯನ್ನು ತೆಗೆದು ಹಾಕಿ ನಾಳೆ sugar factory ಮಾಲೀಕರ ಕೈಗೆ ಇದೊಂದು ರೀತಿ ಅಸ್ತ್ರ ಕೊಟ್ಟಂತಾಗುತ್ತದೆ. Factory ಮಾಲೀಕರನ್ನು strengthen ಮಾಡಿದಂತಾಗುತ್ತದೆಯೇ ಹೊರತು ರೈತರಿಗೆ ಅನುಕೂಲವಾಗುವುದಿಲ್ಲ. ಇದರಲ್ಲಿ ಹೇಳುವ ಹಲವಾರು ವಿಚಾರಗಳು ಇನ್ನೂ ಇದೆ. ಅಳತೆ ಬಗ್ಗೆ ಇಲ್ಲಿ ಏನಿದೆಯಂದರೆ, ಕಬ್ಬಿನ ತೂಕ ಮತ್ತು ಸಕ್ಕರೆ, ಇದರ ಬಗ್ಗೆ ಗಣಕ ಯಂತ್ರದ ಮುಖಾಂತರ ಮಾಡುವಂಥದ್ದು ಎನ್ನಲಾಗಿದೆ. ಈಗೇನಾಗುತ್ತದೆ, ಅಲ್ಲಿ ಎಷ್ಟು ತೂಕ ಮಾಡುತ್ತಾರೆ ಎನ್ನುವ ವಿಚಾರದಲ್ಲಿ ಕಬ್ಬು ಬೆಳೆಯುವ ರೈತರ ಕಡೆಯಿಂದ ಯಾವ control ಕೂಡ ಅಲ್ಲಿ ಇರುವುದಿಲ್ಲ. Sugar factory ಮಾಲೀಕರು ಏನು ಅಳತೆ ಮಾಡುತ್ತಾರೋ ಅದೇ final. ಇದರಲ್ಲಿ ರೈತರ ಕಡೆಯಿಂದಲೂ participation ಬೇಕಲ್ಲವೆ? ರೈತರ ಪರವಾಗಿ participation ಇರಬೇಕಾಗುತ್ತದೆ. ಯಾರು ಕಬ್ಬು ಬೆಳೆಗಾರರಾದ ರೈತರು ಕಬ್ಬನ್ನು ತಂದುಕೊಡುತ್ತಾರೋ ಅದರ weight ಎಷ್ಟಾಗುತ್ತದೆ ಎಂಬುದನ್ನು ಬೇರೆ ಇನ್ಯಾರು ನೋಡುವವರಿದ್ದಾರೆ. ಅದಕ್ಕೊಂದು transparency ಏನಿದೆ? ಇದರ ಬಗ್ಗೆ ನಿಮ್ಮ Act ನಲ್ಲಿ silent ಇದೆ. ಅದರ ಬಗ್ಗೆ ಏನೂ ಹೇಳಿಲ್ಲ. ಆಮೇಲೆ ಮುಂದೆ ಇನ್ನೊಂದು ವಿಚಾರವೆಂದರೆ ನೀವು ಒಂದು period ಅನ್ನು fix ಮಾಡಬೇಕು. ಇವತ್ತು usually ಕಬ್ಬು ಕಟಾವು ಮಾಡಿಕೊಂಡು ನುರಿಸುವಂಥದ್ದು ಯಾವಾಗ ಚಾಲು ಆಗುತ್ತದೆಂದರೆ ಚಳಿಗಾಲದಲ್ಲಿ.

ಮಳೆಗಾಲದಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಚಳಿಗಾಲದಲ್ಲಿ ನೀವು ಮಾಡಬೇಕಾಗುತ್ತದೆ. ಈಗ ನೀವೇನು ಒಂದು date fix ಮಾಡಿದ್ದೀರಿ ಆ date ಪ್ರಕಾರವಾದರೆ ಅದು scientifically ಆಗುವುದಿಲ್ಲ ಅದರಿಂದಲೂ ಕೂಡ ಕಬ್ಬು ಬೆಳೆಗಾರರಿಗೆ ತೊಂದರೆಯಾಗುತ್ತದೆ. ಆ ಒಂದು ಕಟಾವು date ಇದೆಯಲ್ಲಾ ಮತ್ತು ನುರಿಸುವಂಥದ್ದು ಏನಿದೆಯಲ್ಲಾ ಅದು ಚಳಿಗಾಲದಲ್ಲಿ ನಡೆಯುವಂಥ process. ನವೆಂಬರ್ ತಿಂಗಳಿನಲ್ಲಿ ನಡೆಯುವಂಥದ್ದು. ಹೀಗಾಗಿ ಅದರ ಬಗ್ಗೆ ಕೂಡ ಇದರಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಇದರ ಜೊತೆಗೆ ಬೋರ್ಡ್‌ಗೆ ನಾಮಕರಣ ಮಾಡುವಂಥದ್ದರ ಬಗ್ಗೆ ಒಂದು ಕಡೆ ಇಲ್ಲಿ ಹೇಳಿದ್ದೀರಿ. ಯಾವೊಬ್ಬ ಕಬ್ಬು ಬೆಳೆಗಾರರ ಪೈಕಿಯಿಂದ ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡಿದ 5 ಕ್ಕೆ ಮೀರದಷ್ಟು, ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ ವಿಭಾಗದಿಂದ ಕನಿಷ್ಟ ಒಬ್ಬ ಸದಸ್ಯರು ಎಂದಿದ್ದೀರಿ. 80% ಎಲ್ಲಿ production ಆಗುತ್ತದೋ, ಎಲ್ಲಿ ಕಬ್ಬು ಬೆಳೆಗಾರರು ಹೆಚ್ಚಿದಾರೋ ಅದರ ಭಾಗದಿಂದ ಒಬ್ಬರೇ ಸದಸ್ಯರು. ಅದೇ ರೀತಿ 20% ಎಲ್ಲಿ ಕಬ್ಬು ಬೆಳೆಗಾರರು ಇದ್ದಾರೋ ಆ ಭಾಗದಿಂದಲೂ ಕೂಡ ಒಬ್ಬರೇ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕಾಗುತ್ತದೆ. ಹೀಗಾಗಿ ಈ ರೀತಿಯ representation ಕೂಡ ಸರಿಯಾಗುವುದಿಲ್ಲ. ಸಾಮಾನ್ಯವಾಗಿ ನೀವು ಇಡೀ ರಾಜ್ಯದಲ್ಲಿ ಎಲ್ಲಿ ಕಬ್ಬು ಬೆಳೆಗಾರರು ಹೆಚ್ಚಿದ್ದಾರೆ ಎಂಬುದನ್ನೂ ಕೂಡ ನೀವು ನೋಡಬೇಕಲ್ಲ? ನೀವು general ಆಗಿ General Act ಮಾಡಿದರೆ ಅದರಿಂದ proper representation ಮಾಡಿದಂತಾಗುವುದಿಲ್ಲ, proper voice ಇರುವುದಿಲ್ಲ. ಇದರಲ್ಲಿಯೂ ಕೂಡ ತೊಂದರೆಯಾಗುವಂಥದ್ದು ಇದೆ. ಹೀಗಾಗಿ ಇದರ ಬಗ್ಗೆ ಇನ್ನೂ ಹಲವಾರು ವಿಚಾರಗಳನ್ನು ನಮ್ಮ ಗೋವಿಂದ ಕಾರಜೋಳ್‌ರವರು ಮತ್ತು ಲಕ್ಷ್ಮಣ ಸವದಿಯವರು ಹೇಳುತ್ತಾರೆ. ಅದಕ್ಕಾಗಿ ನಾನು ಇಷ್ಟು ವಿಚಾರಗಳನ್ನು ಹೇಳಿ, ಇವತ್ತು ಈ ಕಾನೂನನ್ನು strengthen ಮಾಡುವುದಕ್ಕೆ ಹೋಗಿ ಕಬ್ಬು ಬೆಳೆಗಾರಿಗೆ ತೊಂದರೆ ಕೊಡುವಂಥದ್ದು ಆಗುತ್ತದೆ. ಅದಕ್ಕಾಗಿ ಇದನ್ನು ನೀವು ಮತ್ತೊಮ್ಮೆ ಮರುಪಶೀಲನೆ ಮಾಡಬೇಕಾಗುತ್ತದೆ. ರೈತರಿಗೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ಅವರ

ಹಿತಾಸಕ್ತಿಗೆ ವ್ಯತಿರಿಕ್ತವಾಗುತ್ತದೆ. ಅದಕ್ಕಾಗಿ ಇದನ್ನು ಮತ್ತೊಮ್ಮೆ ಮರುಪರಿಶೀಲನೆಯನ್ನು ಮಾಡಬೇಕು. ನೀವು ಬೇಕಾದರೆ ಇದರ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡಲು Joint Select Committee ಯನ್ನು ರಚನೆ ಮಾಡಿ ಅದರ ಬಗ್ಗೆ ಚಿಂತನೆಯನ್ನು ಮಾಡುವಂತೆ ಮಾಡಬಹುದು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿದರೆ ಇದನ್ನು strengthen ಮಾಡುವುದಕ್ಕೆ ಇನ್ನೂ ಏನೇನು ಸಲಹೆಗಳನ್ನು ಕೊಡಬಹುದು ಅದನ್ನು ನಾವು ಕೂಡ ಕೊಡುತ್ತೇವೆ. ಕಬ್ಬು ಬೆಳೆಗಾರರಾದ ರೈತರುಗಳಿಗೆ ಅನುಕೂಲ ಮಾಡಬೇಕೆನ್ನುವ ದಿಸೆಯಲ್ಲಿ ನೀವು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಇವತ್ತೇನು ಈ ಬೆಲೆ ನಿಗದಿ ಮಾಡುತ್ತೀರಿ, ಇವತ್ತು FRP ಎಂದು ಅವರು ಮಾಡುತ್ತಾರೆ. ಅದನ್ನು ಮೊದಲನೆಯ ಕಂತು ಎಂದು ಹೇಳಿದ್ದೀರಿ. ಎರಡನೆಯ ಕಂತು ಈ ಉಪ ಉತ್ಪಾದನೆ ಇವೆಲ್ಲಾ ಆದ ಮೇಲೆ ಆ ಲೆಕ್ಕಾಚಾರ ಮಾಡುವವರು ಯಾರು? ಯಾರು ಅದಕ್ಕೆ accountability? ಅದರ ಬಗ್ಗೆಯೂ ಕೂಡ ಇದರಲ್ಲಿ clarity ಇಲ್ಲ. ಯಾವ ರೀತಿಯಲ್ಲಿ ಇದನ್ನು ಲೆಕ್ಕಾಚಾರ ಮಾಡುತ್ತೀರಿ? ಆ ಫ್ಯಾಕ್ಟರಿಯವರು ಕೊಟ್ಟಿದ್ದೇ ಲೆಕ್ಕಾಚಾರವಾಗುತ್ತದಷ್ಟೆ. ಅದಕ್ಕೊಂದು ಬೇರೆ ರೀತಿಯಲ್ಲಿಯೂ mechanism ಬೇಕಲ್ಲವೆ? ಅದರ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಈಗ ಇರುವುದರಲ್ಲಿಯೂ ಅದರ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಅದಕ್ಕಾಗಿಯೇ ನೀವು strengthen ಮಾಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ್):- ಮಾನ್ಯ ಅಧ್ಯಕ್ಷರೆ, ಕಬ್ಬು ಖರೀದಿ ಮತ್ತು ನಿಯಂತ್ರಣ ಸರಬರಾಜು ತಿದ್ದುಪಡಿ ವಿಧೇಯಕ 2014ನ್ನು ಇದನ್ನು ಮಂಡಿಸುವಾಗಲೇ ಇದನ್ನು ಮಂಡಿಸಬಾರದೆಂದು ನಾನು ವಿರೋಧ ಮಾಡಿದ್ದೆ. ಆದರೂ ಕೂಡ ಸರ್ಕಾರದವರು ನಮಗೆ ಬಹುಮತವಿದೆಯೆಂದು ಮಂಡಿಸಿದ್ದಾರೆ. ನಾನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ನೀವು ಇದನ್ನು ಮಂಡಿಸುವುದಕ್ಕಿಂತಲೂ ಕಬ್ಬು ಬೆಳೆಗಾರರಿಗೆ ಟಿಕ್–20 ಯನ್ನು ಕೊಟ್ಟಿದ್ದರೆ ಚಲೋ ಇತ್ತು. ಟಿಕ್–20, ಟಿಕ್–20 ವಿಷ. ವಿಷ ಕೊಟ್ಟಿದ್ದರೆ ಚೆನ್ನಾಗಿತ್ತು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಹಾಗೂ ಸಕ್ಕರೆ ಸಚಿವರು):– ನೀವು ಕಾಯಿದೆ ಬಗ್ಗೆ ಮಾತನಾಡಿ ಎಂದರೆ ಟಿಕ್–20 ಎಂದು ಹೇಳುತ್ತೀರಲ್ಲ. ನೀವು ತಂದಿರುವಂಥ ವಿಧೇಯಕದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಅದನ್ನು ಸರಿಪಡಿಸುವಂಥ ನಿಟ್ಟಿನಲ್ಲಿ ಇದನ್ನು ತಂದಿರುವುದೇ ಹೊರತು ರೈತರಿಗೆ ಟಿಕ್–20 ಕೊಡುವುದಕ್ಕೆ ತಂದಿರುವಂಥ ವಿಧೇಯಕವಲ್ಲ. ಕಾರಜೋಳ್‌ರವರೆ ನೀವು ಮಾತನಾಡಬೇಕಾದರೆ ನೀವೊಬ್ಬರೆ ರೈತರ ಪರವಾಗಿದ್ದೀರಿ ಎನ್ನುವಂತೆ ಮಾಡನಾಡಬೇಡಿ. ನಾವೂ ಕೂಡ ರೈತರ ಪರವಾಗಿರುವವರೆ ಆಗಿದ್ದೇವೆ. ಮಾನ್ಯ ಅಧ್ಯಕ್ಷರೆ, ಅವರು ಆ ರೀತಿ ಹೇಳಿರುವುದನ್ನು ತೆಗೆದು ಹಾಕಿಸಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ರೈತರಿಗೆ ಟಿಕ್–20 ಕೊಡುವುದಕ್ಕೆ ಈ ತಿದ್ದುಪಡಿ ವಿಧೇಯಕವನ್ನು ತರುತ್ತಿದ್ದೇವೆಯೆ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಕ್ಕರೆ ಸಚಿವರನ್ನು ಕೇಳುತ್ತೇನೆ, Essential Commodities Act 1955, ಇದನ್ನು ಓದಿಕೊಂಡು ಈ ಬಿಲ್ ಅನ್ನು ತಂದಿದ್ದೀರೋ ಅಥವಾ ಹಾಗೆಯೇ ತಂದಿದ್ದೀರೋ? ಇದು ನನ್ನ ಮೊದಲನೆಯ ಪ್ರಶ್ನೆ. ಎರಡನೆಯದಾಗಿ, 2013–14 ನೇ ಸಾಲಿನ price policy for sugarcane ಓದಿದ್ದೀರಾ ಅಥವಾ ಹಾಗೆಯೇ ತಂದಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ. ನಾನು ಹೇಳಿದ್ದಕ್ಕೆ ಇವರಿಗೆಲ್ಲ ಬಹಳ ಸಿಟ್ಟು ಬಂತು. ರೈತರಿಗೆ ಕಬ್ಬು ಕಟಾವು ಮಾಡಿ ತರುವುದೆಂದರೆ ಅಸಾಧ್ಯವಾದ ಮಾತು ಎನ್ನುವುದು ತಮಗೆ ಗೊತ್ತಿದೆ. ಕಾರ್ಖಾನೆಯವರೆ ವ್ಯವಸ್ಥೆ ಮಾಡಬೇಕು. ಇವರು 1996ನಲ್ಲಿ sugarcane

policy ಮೇಲೆ ಒಂದು ಬಿಲ್ ತಂದಿದ್ದಾರೆ. Essential commodities Act 1995 ಏನು ಹೇಳುತ್ತದೆಂದರೆ, Manufacturing cost of sugar means the net cost incurred on conversion of sugarcane into sugar including on cost of transportation of sugarcane from the purchaser center. From the purchaser center ಎಂದರೆ ಏನು ಸಾರ್? ಹೊಲ. ರೈತನ ಹೊಲದಿಂದ ಫ್ಯಾಕ್ಟರಿಗೆ ಎಂದು ಬಹಳ ಸ್ಪಷ್ಟವಾಗಿ ಆಕ್ಟ್‌ನಲ್ಲಿ ಪ್ರಾವಿಜನ್ ಇರುವುದು. 2013–14ನೇ ಸಾಲಿನ ಪಾಲಿಸಿಯೊಳಗೆ ಬಹಳ clear cut ಆಗಿ ಕರ್ನಾಟಕ, ಉತ್ತರಖಂಡ, ತಮಿಳುನಾಡು, ಹರಿಯಾಣ, ಮಹಾರಾಷ್ಟ್ರ, ಉತ್ತರ ಪ್ರದೇಶ, ಆಂಧ್ರಪ್ರದೇಶ ಈ ಎಲ್ಲಾ ರಾಜ್ಯಗಳ comparative price mention ಮಾಡಿದ್ದಾರೆ. ಅದನ್ನು ಓದಿದ್ದೀರಾ? ದಯಮಾಡಿ ಓದಿ, ನೀವು ಗಡಿಬಿಡಿ ಮಾಡಿ ಬಿಲ್ ತರಬೇಡಿ. ನಾವು ಸರ್ಕಾರ ನಡೆಸಿರುವವರಿದ್ದೇವೆ. ನಾವು ಕಾರ್ಖಾನೆಯನ್ನು ಮುಚ್ಚಬೇಕೆನ್ನುವವರಲ್ಲ. ಕಾರ್ಖಾನೆ ಉಳಿದರೆ ನಮ್ಮ ರೈತ ಬದುಕುತ್ತಾನೆ, ನಮ್ಮ ರೈತನಿಗೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಸಿದ್ದು ಬಿ. ನ್ಯಾಮಗೌಡ:– ಕಾರಜೋಳರವರೆ, purchaser ಎಂದರೆ ಯಾರು?

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳು ಉಳಿಯಬೇಕು, ರೈತ ಬದುಕಬೇಕು ಎನ್ನುವ ಎರಡು ವಿಚಾರವನ್ನು ಹೊಂದಿರುವವರು ನಾವು. ನಮ್ಮ ನಾಯಕರಾದಂತಹ ಜಗದೀಶ್ ಶೆಟ್ಟರ್‌ರವರು gate cane ಎನ್ನುವುದನ್ನು delete ಮಾಡಿ ಎಂದು ಹೇಳಿದರು. ಆ clause ಬೇಡ. ಎರಡನೆಯದಾಗಿ ಇನ್ನೊಂದು ತಜ್ಞರ ಸಮಿತಿ ಎಂದು ಮಾಡುವುದಕ್ಕೆ ಹೊರಟಿದ್ದೀರಿ. ಆ ತಜ್ಞರ ಸಮಿತಿ ಏಕೆ ಬೇಕು? ಇದರಲ್ಲಿ ಯಾರು ತಜ್ಞರು ಎಂದರೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು. Sugar cane ಎಂದರೆ ಗೊತ್ತಿಲ್ಲದಿರುವವರು ಇಲ್ಲಿ ತಜ್ಞರಾಗಿದ್ದಾರೆ. ಇಲ್ಲಿ IAS officers Commissioner ಆಗುತ್ತಾರೆ. ನೀವು ಎಷ್ಟು

ಜನ ತಜ್ಞರು ಎಂದು ಕೊಟ್ಟಿದ್ದೀರಿ, ಅದರಲ್ಲಿರುವ (ಎಫ್)ವರೆಗೆ ನಾನು ಓದಿದ್ದೇನೆ. ಒಬ್ಬೊಬ್ಬರ ಬಗ್ಗೆಯೂ ಮಾತನಾಡುವುದಕ್ಕೆ ಸಮಯವಿರುವುದಿಲ್ಲ. ಅದಕ್ಕೆ ನಾನು ಮಾನ್ಯ ಅಧ್ಯಕ್ಷರಿಗೆ ವಿನಂತಿ ಮಾಡುತ್ತೇನೆ. ಈ ಸಮಿತಿಯ ಅವಶ್ಯಕತೆ ಇಲ್ಲ. ಮೊದಲು ಸಮಿತಿ ಏನು ಮಾಡಿದ್ದರು, 2013ರ ಆಕ್ಟ್‌ನಲ್ಲಿ provision ಮಾಡಿಕೊಂಡಿರುವಂತೆ ಸಕ್ಕರೆ ಸಚಿವರು ಅಧ್ಯಕ್ಷರು, ಅದು ಓಕೆ. ಕೃಷಿ ಸಚಿವರು, ಸಹಕಾರಿ ಸಚಿವರೆ ಇರಬೇಕು. ಏಕೆಂದರೆ ಸಹಕಾರ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಗಳು ಇವೆ. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆಯವರು ಇರಬೇಕು. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇದು ಇಂಡಸ್ಟ್ರೀ ಆಗಿರುವದರಿಂದ ಅವರೂ ಇರಬೇಕು. ಕೃಷಿ ಆಯುಕ್ತರೂ ಇರಬೇಕು. ನಿಯಂತ್ರಕರು ಕಾನೂನು ಮೌಲ್ಯಮಾಪನರವರೂ ಇರಬೇಕು. ಕಬ್ಬು ಬೆಳೆಗಾರರ ಪ್ರತಿನಿಧಿಗಳು ಎಂದು ಹೇಳಿದ್ದೀರಿ. ಅದೂ ಇರಬೇಕು. ಇದರಲ್ಲಿ ಐದು ಜನರನ್ನು ನೇಮಕ ಮಾಡಿಕೊಳ್ಳುವ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದು, ಯಾರನ್ನು ಮಾಡುತ್ತೀರೋ ಮಾಡಿ. (ಜೆ)ನಲ್ಲಿ ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಎಂದು ಹೇಳಿದ್ದೀರಿ. ಅಲ್ಲಿ ಕಸ ಗುಡಿಸುವವರೂ ಯಾರೂ ಇಲ್ಲವೇ ಇಲ್ಲ. ಅದನ್ನು ಸ್ಥಾಪನೆ ಮಾಡಿ ಹಾಗೇ ಬಿದ್ದಿದೆ. ಬೆಳಗಾವಿಯಲ್ಲಿ ಮಳೆ ಜಾಸ್ತಿಯಾಗುತ್ತದೆ, ಅಲ್ಲಿ ನಾಯಿ ನರಿ ಮಲಗಿಕೊಳ್ಳುವುದಕ್ಕೆ ಜಾಗವಾಗಿದೆ. (ಕೆ) ನಲ್ಲಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ ಒಬ್ಬ ಕೃಷಿ ಹಣಕಾಸು ತಜ್ಞ ಎಂದು ಹೇಳಿದ್ದೀರಿ. ಅವರೆಲ್ಲರೂ ಇರಲಿ, ಇದು ಸರಿಯಾಗಿದೆ. ಆದರೆ ರೈತರ ಪ್ರತಿನಿಧಿಯನ್ನು ಬೆಳಗಾವಿ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ಎಂದು ನಾಲ್ಕು ಕಂದಾಯ ವಿಭಾಗದಿಂದ ಮಾಡುವುದು ಎಂದು ಹೇಳಿದ್ದೀರಿ. ಎಲ್ಲಿ ಕಬ್ಬು ಬೆಳೆಯುವುದಿಲ್ಲ, ಅಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. Major ಆಗಿ ಈ ರಾಜ್ಯದಲ್ಲಿ 70% ಬೆಳಗಾವಿಯಲ್ಲಿ ಕಬ್ಬು ಬೆಳೆಯುತ್ತೇವೆ. ಅಲ್ಲಿಂದ ರೈತ ಪ್ರತಿನಿಧಿಯನ್ನು ತೆಗೆದುಕೊಳ್ಳಿ. ಬಿಜಾಪುರ, ಬಾಗಲಕೋಟೆ, ಮಂಡ್ಯ ಮತ್ತು ಉಳಿದ ಕಡೆಯಿಂದ ತೆಗೆದುಕೊಳ್ಳಿ. ನಾಲ್ಕು ಮಂದಿ ಹೆಚ್ಚು ರೈತ

ಪ್ರತಿನಿಧಿಗಳಿದ್ದರೆ ನಿಮಗೆ ಏನೂ ಕೆಟ್ಟದಾಗುವುದಿಲ್ಲ. ಸಕ್ಕರೆ ಕಾರ್ಖಾನೆಯೊಳಗೆ ಪ್ರೈವೇಟ್ ಕಾರ್ಖಾನೆಯವರನ್ನು, ಸಹಕಾರಿ ಕಾರ್ಖಾನೆಯವರನ್ನು, ಸರ್ಕಾರದ ನಿಯಂತ್ರಣದಲ್ಲಿರುವಂತಹ ಕಾರ್ಖಾನೆಗಳನ್ನು ತೆಗೆದುಕೊಳ್ಳಿ. ಯಾರನ್ನು ಬೇಕಾದರೂ ತೆಗೆದುಕೊಳ್ಳಲಿ, ಅದರ ಪ್ರಶ್ನೆ ಇಲ್ಲ. ನೀವು ಇನ್ನೊಂದು ವಿಚಾರದಲ್ಲಿ ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ವರ್ಷಕ್ಕಾಗಿ ನ್ಯಾಯ ಮತ್ತು ಪರಿಶ್ರಮ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ತೀರ್ಮಾನಿಸುವುದು. ಇದನ್ನು ಯಾರು ತೀರ್ಮಾನ ಮಾಡುವುದು? ಆದಾಯ ಸೂತ್ರ ಏನು? ಅದನ್ನು Clear ಮಾಡಿ. ನೀವು ಆದಾಯ ಸೂತ್ರಕ್ಕೆ ಯಾವಾಗ ಬರಬೇಕೆಂದರೆ ಕಬ್ಬಿನಿಂದ ಸಕ್ಕರೆ ತಯಾರಾದದ್ದು, ಕಾಕಂಬಿಯಿಂದ, ಪ್ರೆಸ್–ಮಡ್‌ನಿಂದ ಮತ್ತು by product distilleries ಇದ್ದರೆ, ಹೆಚ್ಚುವರಿ ಎಂದರೆ ಯಾವುದು ಎಂದು ಅದರ ಬಗ್ಗೆ clear ಆಗಿ ಮಾಡಿ. ಇದಲ್ಲದೆ 14 ದಿವಸದೊಳಗೆ ನಾವು ಬಿಲ್ ಕೊಡಿಸುತ್ತೇವೆಂದು ಹೇಳಿದಿರಿ. ನೀವು ಯಾರ ಕಡೆಯಿಂದ 14 ದಿವಸದೊಳಗೆ ಬಿಲ್ ಕೊಡಿಸುತ್ತೀರಿ? ನೋಡಿ ಅವರು ನಿಮಗೆ ಯಾವಾಗ ಲೆಕ್ಕ ಕೊಡುತ್ತಾರೆಂದರೆ ಅವರಲ್ಲಿತಕ್ಕಂಥ ಕಾಕಂಬಿ, ಪೂರ್ಣ ಸಕ್ಕರೆ ಮಾರಿದ ಮೇಲೆ, ಪ್ರೆಸ್–ಮಡ್, ಬಗಾಸ್ ಮಾರಿದ ಮೇಲೆ ಮತ್ತು ನಿಮಗೆ ಯಾರು ಪವರ್ ಜನರೇಟ್ ಮಾಡುತ್ತಾರೆ, ಅವರು export ಮಾಡಿ ನಿಮ್ಮ ಸರ್ಕಾರದಿಂದ ಬಿಲ್ ಬಂದಮೇಲೆ ನಿಮಗೆ ಲೆಕ್ಕ ಕೊಡುವವರು. ಅಷ್ಟೊತ್ತಿಗೆ ರೈತ ನಾ ಹೇಳಿದ ಹಾಗೆ ಟಿಕ್–20 ತೆಗೆದುಕೊಂಡು ಹೋಗಬೇಕಾಗುತ್ತದೆ. ಇದಲ್ಲ. ಮಂತ್ರಿಗಳೇ ಕುಳಿತುಕೊಳ್ಳಿ, ತಾವು ಉತ್ತರ ಹೇಳಿದರೆ ಸಾಕು, ನಾನು ಸಂತೋಷ ಪಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಎಂ.ಆರ್.ಪಿ ಪ್ರಕಾರ 14 ದಿವಸದಲ್ಲಿ.. ಆಯಿತು, ಕೊನೆಯಲ್ಲಿ ಹೇಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ನೀವು sugar year ಎಂದು ಹೇಳಿದಿರಿ. ಅದನ್ನು ಜುಲೈದಿಂದ ಜೂನ್‌ವರೆಗೆ ಮಾಡಿದಿರಿ. ಇಡೀ ದೇಶದಲ್ಲೇ

ಅಲ್ಲ, ಇಡೀ ವಿಶ್ವದಲ್ಲಿ sugar year 1st October to 30th September. ಆದರೆ ನೀವು ಈ ಬಿಲ್‌ನಲ್ಲಿ ಏನು ತಂದಿದ್ದೀರಿ?

ಶ್ರೀ ವೈ.ಎನ್. ಬಾಲಕೃಷ್ಣ:– ದಕ್ಷಿಣ ಕರ್ನಾಟಕದಲ್ಲಿ ಜೂನ್‌ನಿಂದ ಆಗುತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಇಲ್ಲಿ ದಕ್ಷಿಣ ಉತ್ತರ ಬೇಡ. ನಾನು ದಯವಿಟ್ಟು ಯೀಲ್ಡ್ ಆಗಿಲ್ಲ. ನಾವು ಕಾರ್ಖಾನೆಗೆ ಹೋಗಿ ಅವರ ಲೆಕ್ಕಪತ್ರ ಪರಿಶೋಧನೆ ಮಾಡಿ ಬರುತ್ತೇವೆ ಎಂದರೆ ಎಂದಾದರೂ ಸಾಧ್ಯವಿದೆಯೇ? ಕೃಷ್ಣನ ಲೆಕ್ಕವೇ ಬೇರೆ, ರಾಮನ ಲೆಕ್ಕವೇ ಬೇರೆ. ಇದನ್ನು ನೀವು ಪರಿಶೋಧನೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸಲಹೆ ಎಂದರೆ ನೀವು ಬಿಟ್ಟುಬಿಡಬೇಕಾಗಿಲ್ಲ. ಅದನ್ನು ಎಲ್ಲರೂ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಕೆಲವರು ಮಾಡುತ್ತಾರೆ, ಕೆಲವರು ಮಾಡುವುದಿಲ್ಲ. ಅದನ್ನು ನೀವೇನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆ? ಅದರಲ್ಲಿ ತೂಕ ಕಟ್ ಮಾಡುವುದು. ಕೆಲವರು 3% ಕೆಲವರು 5%, ಕೆಲವರು 7% ಮಾಡಿದರು. ರೈತನ ಕಬ್ಬು ಇವತ್ತು ಹತ್ತು ಟನ್ ಹೋಯಿತು ಎಂದರೆ 7% ಕಟ್ ಮಾಡಿದರೆ ಸಾಕು. ರೈತರ ಈ ವರ್ಷ ನೀರೂ ಇಲ್ಲ, ಕರೆಂಟ್ ಇಲ್ಲವೆಂದು ಹೇಳಿ ಕಂಗಾಲಾಗಿ ಎಷ್ಟಾದರೂ ಕೊಡಿ, ತೆಗೆದುಕೊಂಡು ಹೋಗಿ ಎನ್ನುವ ಪರಿಸ್ಥಿತಿಗೆ ಬಂದರು. ಮಂತ್ರಿಯವರೆ, ಈ ರೀತಿಯಾದಾಗ ಏನಾಗುತ್ತದೆ? ವಿಷ ತೆಗೆದುಕೊಳ್ಳುವುದೇ ಅಗುತ್ತದೆ. ಒಂದು ಟನ್ ಕಬ್ಬು ಬೆಳೆಯಬೇಕಾದರೆ 25 ಸಾವಿರ ಹಣ ಬೇಕಾಗುತ್ತದೆ. ರೈತ ಎಲ್ಲಿಂದ ತರುತ್ತಾನೆ? ನಾವು ಬೆಳೆ ಸಾಲ ಹತ್ತು ಸಾವರ ರೂಪಾಯಿ ಕೊಡುತ್ತೇವೆ. ಅವರು ಖಾಸಗಿಯವರಿಂದ 5%, 10% ಬಡ್ಡಿಯಂತೆ ತರುತ್ತಾರೆ. ಕಬ್ಬು ಬೆಳೆಯುವವರಿಗೆ ಕಣ್ಣಲ್ಲಿ ನೀರು ಬರುತ್ತದೆ. ನೀವು ಇಷ್ಟೆಲ್ಲಾ ಗೊಂದಲ ಹಾಕಿಕೊಳ್ಳಬೇಡಿ. ನಾವು ಏನು ಸಲಹೆ ಕೊಟ್ಟಿದ್ದೇವೆ, ಅದನ್ನು ಬದಲಾವಣೆ ಮಾಡಿ ಈ ಬಿಲ್ ಮಂಡನೆ ಮಾಡುವುದಕ್ಕೆ ಪ್ರಯತ್ನ ಮಾಡಿ. ನಾನು ತಮಗೆ ಹೇಳುವುದೇನೆಂದರೆ ಮೊದಲ ಹಂತದಲ್ಲಿ ಕಬ್ಬಿನ ಸರಬರಾಜಿಗೆ, ಹಿಂದಿನ ವರ್ಷದ ವಸೂಲಾತಿಯ ಆಧಾರದ ಮೇಲೆ ನ್ಯಾಯ ಮತ್ತು ಪರಿಶ್ರಮ ಬೆಲೆಯ ಪಾವತಿಸುವುದು

ಎಂದು ಇದೆ. ಅದು ಎಂದು ಬರುವುದು? ಅದಕ್ಕೆ ಇದೆಲ್ಲಾ ಬೇಡ. ತಾವು ನಾನು ಹೇಳುವುದನ್ನು ನೋಟ್ ಮಾಡಿಕೊಂಡು ಆಮೇಲೆ ಉತ್ತರ ಹೇಳಿ. ಇದು ಆಗಲಾರದ ಕೆಲಸ. ಒಂದು ವರ್ಷದ ತನಕ ರೈತರು ಕಾಯುವುದಕ್ಕೆ ಸಾಧ್ಯವಿಲ್ಲ. ಒಂದು ವರ್ಷದವರೆಗೆ ರೈತರು ಕಾಯವುದಕ್ಕೆ ಸಾಧ್ಯವಿದೆಯೇ? ದಯಮಾಡಿ ನೀವು ಲೆಕ್ಕ ಹಾಕಿ ಮಾಡಿ. ಎರಡನೆ ಹಂತದಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ವಾಸ್ತವಿಕ ಪ್ರಾಪ್ತಿಯ ಮೇಲೆ ನಿರ್ಧರಿಸಲಾದ ಅದಾಯ ಹಂಚಿಕೆ ಆಧಾರದ ಮೇಲೆ ಕಬ್ಬಿನ ಹೆಚ್ಚುವರಿಯನ್ನು ಪಾವತಿಸುವುದೆಂದು ಹೇಳುತ್ತೀರಿ. ಅದಾಯ ಹಂಚಿಕೆಯನ್ನು ಯಾವ ಪ್ರಮಾಣದಲ್ಲಿ ಮಾಡುತ್ತೀರೆಂಬುದನ್ನು ಹೇಳಿ, ಯಾವ ಆಧಾರದ ಮೇಲೆ ಅದಾಯ ಹಂಚಿಕೆ ಮಾಡುತ್ತೀರೆಂದು ಹೇಳಿ. ಈ ರೀತಿ ಎಲ್ಲಾ ಬೇಡ, ಇದು ಏನು ಅವಶ್ಯಕತೆ ಇಲ್ಲ, policy ಬಹಳ clear ಆಗಿದೆ. 2013–14ರ policy for cane price ಏನಿದೆ, ಅದು ಬಹಳ clear ಆಗಿದೆ. ತಾವು ಒಂಭತ್ತೂವರೆ ಪರ್ಸೆಂಟ್ ಯಾವುದು recovery ಬರುತ್ತದೆ, ಯಾವ ರೈತನ ಕಬ್ಬು recovery ಬರುತ್ತದೆ, ಅವನಿಗೆ 2,100 ರೂ.ಗಳನ್ನು ಕೊಡುವುದಕ್ಕೆ ಅವಕಾಶವಿದೆ. ಪರ್ಸೆಂಟ್‌ಗೆ 221 ರೂ.ಗಳನ್ನು ಹೆಚ್ಚು ಕೊಡಬೇಕಾಗುತ್ತದೆ. ನೀವು ಅದನ್ನು ಮಾಡಿ, ಅದನ್ನು ಬಿಟ್ಟು ಏನೇನೋ ಮಾಡುವುದಕ್ಕೆ ಹೋದರೆ, ಹಿಂದೆಲ್ಲಾ ಈ ಬಿಲ್‌ಗಳನ್ನು ಸರಿಯಾಗಿ ತರದೇ ಇದ್ದುದ್ದರಿಂದ indirect ಆಗಿ factory ಮಾಲೀಕರನ್ನು ಕೋರ್ಟ್‌ಗೆ ಕಳುಹಿಸಿ, ಕೋರ್ಟ್‌ನಲ್ಲಿ stay ಮಾಡಿಸಿ, ನಾವು ಏನು ಮಾಡೋಣವೆಂದು ಎರಡೂ ಕೈಗಳನ್ನು ಮೇಲೆತ್ತಿಕೊಂಡು ಕೂರುವಂಥ ಕೆಲಸವಾಗುತ್ತದೆ. ಅದಕ್ಕೆ ಇದು ಆಗಬಾರದೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದನ್ನು ಯಾರು prestige ಮಾಡಿಕೊಳ್ಳಬಾರದು, ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಿ. ತಾವು ನಮ್ಮನ್ನು ಸಭೆಗೆ ಕರೆಯಿರಿ, ನಾವೂ ಬರುತ್ತೇವೆ. ನಾವು ಕಾರ್ಖಾನೆಯನ್ನು ಮುಚ್ಚಬೇಕೆಂದು ಇಲ್ಲ, ಅದು ನಿಮ್ಮ ತಲೆಯಲ್ಲೂ ಇರಲಿ, ಕಾರ್ಖಾನೆ ಉಳಿದರೆ ನಮ್ಮ ರೈತ ಬದುಕುತ್ತಾನೆ. ನಾನು ಒಣ ಬೇಸಾಯದಿಂದ ಬಂದು, ನಂತರ ನಮ್ಮದು ನೀರಾವರಿಯಾಗಿರುವಂಥದ್ದು. ನಮಗೆ ಒಣ ಬೇಸಾಯವಿದ್ದಾಗ 3–4 ಚೀಲ

ಜೋಳವನ್ನು ಬೆಳೆಯುವುದಕ್ಕೆ ಆಗುತ್ತಿರಲಿಲ್ಲ. ನಾವು ಮೈ ಮೇಲೆ ಪೂರ್ಣ ಪ್ರಮಾಣದ ಬಟ್ಟೆ ಹಾಕಿಕೊಳ್ಳುವುದಕ್ಕೆ ಬಟ್ಟೆ ತೆಗೆದುಕೊಳ್ಳಲು ಹೆಚ್ಚು ಖರ್ಚು ಆಗುತ್ತದೆಂದು ನಮ್ಮ ಹಿರಿಯರೆಲ್ಲಾ ಮಂಡಿಚಾಟಿ ಹಾಕುತ್ತಿದ್ದರು. ಅದು ತಮಗೆಲ್ಲಾ ಗೊತ್ತಿದೆಯೋ, ಇಲ್ಲವೋ ಗೊತ್ತಿಲ್ಲ. ಅದು ಸಣ್ಣ ತೋಳಿನ ಅಂಗಿ. ಕಾಲಿಗೆ ಚಪ್ಪಲಿ ಇರುತ್ತಿರಲಿಲ್ಲ. ನಮ್ಮ ಪೂರ್ವಜರು, ಪಾಲಕರು, ರೈತರೆಲ್ಲಾ ಮೋಟರ್‌ಗಳ ಹಳೆಯ ಟೈರ್ ಅನ್ನು ಕಟ್ ಮಾಡಿ, ಚಪ್ಪಲಿ ಹಾಕಿಕೊಂಡು ತಿರುಗಾಡುತ್ತಿದ್ದರು. ರೈತರು ಅಂಥ ಪರಿಸ್ಥಿತಿಯಲ್ಲಿದ್ದರು. ಸಕ್ಕರೆ ಕಾರ್ಖಾನೆಗಳು ಬಂದಮೇಲೆ ರೈತರ ಸ್ಥಿತಿ–ಗತಿಗಳು ಚೆನ್ನಾಗಿದೆ. ಅದಕ್ಕೆ ರೈತರಿಗೂ ಅನುಕೂಲವಾಗಬೇಕು, ಕಾರ್ಖಾನೆಗಳು ಉಳಿಯಬೇಕು. ಆ ನಿಟ್ಟಿನಲ್ಲಿ ತಾವು prestige ಮಾಡಿಕೊಳ್ಳದೇ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಂಡು, ಮತ್ತೆ draft ಮಾಡಬೇಕೆಂದು ವಿನಂತಿ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ...

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು, ನಾನು ಭಾಷಣ ಮಾಡುವುದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ತಮಗೆ ಅನುಭವವಿದೆ, ಸಾಕಷ್ಟು ಸುದೀರ್ಘವಾಗಿ ಮಾತನಾಡುತ್ತೀರಿ. ನನ್ನನ್ನು ಅಧ್ಯಕ್ಷರು ಕರೆದಿದ್ದಾರೆ, ನಾನು ಮಾತನಾಡುತ್ತೇನೆ, ಆಮೇಲೆ ತಾವು ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಿಲ್ಲ, ನನನ್ನು ಕರೆದಿದ್ದಕ್ಕೆ ಮಾತನಾಡುತ್ತೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ಮಾನ್ಯ ಗೋವಿಂದ ಎಂ. ಕಾರಜೋಳರವರು ಏನು ಹೇಳಿದರು. ಆ ಒಂದು ಪಾಯಿಂಟ್ ಅನ್ನು ಒಪ್ಪುತ್ತೇನೆ. ತಾವು 9ನೇ ಪ್ರಕರಣದ ತಿದ್ದುಪಡಿಯ ಬಗ್ಗೆ ಸವಿಸ್ತಾರವಾಗಿ ಹೇಳಿದ್ದೀರಿ. ಇಲ್ಲಿ ರೈತರಿಗೆ ಹೆಚ್ಚು ಲಾಭವಾಗಬೇಕು, ಅದಕ್ಕೆ ತಾವು ದಯಮಾಡಿ ಸ್ವಲ್ಪ ಯೋಚನೆ ಮಾಡಿ, 1(ಎ) ಸೆಕ್ಷನ್‌ನಲ್ಲಿ ಮತ್ತೆ 1 ನಲ್ಲೂ ಸಮಸ್ಯೆಯಾಗುತ್ತದೆಂದು ನನಗೆ ಗೊತ್ತು.

ಹಿಂದಿನ ವರ್ಷದ ವಸೂಲಾತಿಯ ಆಧಾರದ ಮೇಲೆ ನ್ಯಾಯ ಮತ್ತು ಪರಿಶ್ರಮದ ಬೆಲೆಯನ್ನು ಪಾವತಿಸತಕ್ಕದ್ದು ಎಂದು, ಅದಕ್ಕೆ ಮಾನ್ಯ ಗೋವಿಂದ ಕಾರಜೋಳರವರು ಕೇಳಿದ್ದಾರೆ, ಅದಕ್ಕೆ clarification ಕೊಡಿ. ಇನ್ನು 2ನೇ ಹಂತದಲ್ಲಿ (4ಎ) ಪ್ರಕರಣದಡಿಯಲ್ಲಿ ಘೋಷಣೆಯಾದ ದಿನಾಂಕದಿಂದ 14 ದಿವಸಗಳೊಳಗೆ ಕಾರ್ಖಾನೆಯ ಅಧಿಭೋಗದಾರನು ಹೆಚ್ಚುವರಿ ಕಬ್ಬು ಬೆಲೆಯನ್ನು ಪಾವತಿ ಮಾಡತಕ್ಕದ್ದು. ಅವನು 14 ದಿವಸದೊಳಗೆ ಪಾವತಿಸಲಿಲ್ಲವೆಂದರೆ ಏನು ಮಾಡುತ್ತೀರಿ? ಅವನ ಮೇಲೆ ಏನು ಕ್ರಮವೆಂದು ಏನು ಹೇಳಲೇ ಇಲ್ಲ. ಅವನಿಂದ ಬಡ್ಡಿಯನ್ನು ಹಾಕಿಸಿ ಕೊಡಿಸುತ್ತಿರೋ, ಅವನು ಕೊಡದಿದ್ದರೆ, ಅವನ ಮೇಲೆ ಕೇಸ್ ಹಾಕುವುದಕ್ಕೆ ಅನುವು ಮಾಡಿ ಕೊಡುತ್ತಿರೋ, ಇವ್ಯಾವುದೂ ಕೂಡ ತಿದ್ದುಪಡಿ ವಿಧೇಯಕದಲ್ಲಿ ಇಲ್ಲದೇ ಇದ್ದರೆ ರೈತರಿಗೆ ಅನ್ಯಾಯವಾಗುವಂಥ .. .. .

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಅದು ಒರಿಜಿನಲ್ ಇದೆ.

ಶ್ರೀ ಬಸವರಾಜ ರಾಯರೆಡ್ಡಿ:- ತಾವು ಅದನ್ನು explain ಮಾಡಬೇಕಾಗಿತ್ತು, ನಿಮ್ಮ ಉದ್ದೇಶಗಳನ್ನೇಲ್ಲಾ ಹೇಳಬೇಕಾಗಿತ್ತು. ಅದು ಇಲ್ಲದೇ ಇರುವುದರಿಂದ ತಾನೇ ನಾವು ಕೇಳುತ್ತಿರುವುದು, ತಾವು original ನಲ್ಲಿದೆಯೆಂದರೆ, ಬಡ್ಡಿಯನ್ನು ಹಾಕಿಸಿ ಕೊಡುಸುತ್ತಿರಾ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅದು ಕೇಂದ್ರಸರ್ಕಾರದ ಕಾನೂನು .. ..

ಶ್ರೀ ಬಸವರಾಜ ರಾಯರೆಡ್ಡಿ:- ಅದನ್ನು explain ಮಾಡುವಾಗ ಹೇಳಬೇಕು ತಾನೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವು ಇದನ್ನು ಏನು ಮಾಡವುದಕ್ಕೆ ಆಗುವುದಿಲ್ಲ, ಕೇಂದ್ರಸರ್ಕಾರವೇ ಮಾಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಅದಕ್ಕೆ explain ಮಾಡಿ, ಇಲ್ಲದಿದ್ದರೆ ಅವನ ಪರಿಸ್ಥಿತಿ ಏನಾಗುತ್ತದೆ? ಅವನು 14 ದಿವಸಗಳಲ್ಲಿ

ಕೊಡುವುದಿಲ್ಲವೆಂದರೆ ಏನೆಂಬ ಬಗ್ಗೆ ದಯಮಾಡಿ ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಕ್ಕರೆ ಸಚಿವರು ಕರ್ನಾಟಕ ಕಬ್ಬು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ನಾನು ಮೊದಲನೆಯದಾಗಿ, ಮಾನ್ಯ ಸಕ್ಕರೆ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ವಿಧೇಯಕವನ್ನು ಮಂಡನೆ ಮಾಡುವ ಪೂರ್ವದಲ್ಲಿ ರೈತರು ಮತ್ತು ಕಾರ್ಖಾನೆಗಳ ಮಧ್ಯೆ ಇರುವಂಥ ಸಂಘರ್ಷದ ಬಗ್ಗೆ ತಾವು ಸ್ವಲ್ಪ ಅಲೋಚನೆ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಇದು ಕಬ್ಬಿಗೂ ಸಮೀಪವಿಲ್ಲ, ಕಾರ್ಖಾನೆಗೂ ಸಮೀಪವಿಲ್ಲ, ಯಾರೋ ಮಾಡಿದ ಪಾಪದ ಕೊಡ ನಿಮ್ಮ ಮೇಲೆ ಹೊಡಿಸುವುದಕ್ಕೆ ನಿಂತಿದೆ. ನನಗೆ ತಮ್ಮ ಬಗ್ಗೆ ಕಳಕಳಿ ಇದೆ, ಒಬ್ಬ ಅತ್ಯಂತ ಕಳಕಳಿ ಇರುವಂಥ ಮಂತ್ರಿಗಳಲ್ಲಿ ತಾವೂ ಒಬ್ಬರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಏಕೆ ಈ ಪಾಪದ ಕೊಡವನ್ನು ಹೊರುವುದಕ್ಕೆ ಹೊರಟಿದ್ದೀರಿ? ಇಡೀ ಕಬ್ಬು ಬೆಳೆಗಾರರ ಶಾಪಕ್ಕೆ ನೀವು ಏಕೆ ಗುರಿಯಾಗುತ್ತೀರಿ? ನಿಮಗೆ ಅದರ ಅವಶ್ಯಕತೆ ಏನು ಇದೆ? ಬಹುಶಃ ನನಗೆ ಅನಿಸುವುದೇನೆಂದರೆ, ಅಧಿಕಾರಿಗಳು ನಿಮ್ಮನ್ನು ತಪ್ಪು ದಾರಿಗೆ ಎಳೆಯುವಂಥದ್ದನ್ನು ಈ ವಿಧೇಯಕದಲ್ಲಿ ಸೇರಿಸಿದ್ದಾರೆನ್ನುವ ಮಾತನ್ನು ಇಲ್ಲಿ ನಾನು ಹೇಳಲೇಬೇಕಾಗಿದೆ. ಕಬ್ಬು ನಿಗದಿ ಮಾಡುವಂಥ ಒಂದು ಕಮಿಟಿಯನ್ನು ರಚನೆ ಮಾಡುತ್ತೀರಿ, ಪರವಾಗಿಲ್ಲ. ಆದು ಉತ್ತರ ಕರ್ನಾಟಕವೂ, ದಕ್ಷಿಣ ಕರ್ನಾಟಕವೊ, ರೈತರನ್ನು ಹಾಕುವಂಥ ಸಂದರ್ಭದಲ್ಲಿ ಯಾವ ಕಬ್ಬು ಬೆಳೆಗಾರರು ಇದ್ದಾರೆ, ಅವರಲ್ಲಿ ಅನುಭವ ಇರುವವರನ್ನು ಅವಲೋಕನೆ ಮಾಡಿ ಅದರಲ್ಲಿ ಹಾಕಿಕೊಳ್ಳಿ. ನನಗೆ ಅತ್ಯಂತ ದುಃಖದ ಸಂಗತಿ ಏನೆಂದರೆ, ತಾವು ಏನು FRP ಯನ್ನು ಆಧಾರವಾಗಿಟ್ಟುಕೊಂಡು, ನಾವು ಇವತ್ತಿಗೂ FRPಯನ್ನು ಒಪ್ಪಿಕೊಂಡಿಲ್ಲ. ಅದನ್ನು ನಾವು ರೈತರಿಗೆ, ಬೆಳೆಗಾರರಿಗೆ ಅವೈಜ್ಞಾನಿಕ ಕಾನೂನೆಂದೇ ಹೇಳಿಕೊಂಡು ಬಂದಿದ್ದೇವೆ. ತಾವು ಆ ಈಖಿಕ ಕಾನೂನನ್ನು ಆಧಾರವಾಗಿಟ್ಟುಕೊಂಡು ಈ ಕಾನೂನನ್ನು ತರುವುದಕ್ಕೆ ಏನು ಹೊರಟಿದ್ದೀರಿ ಇದನ್ನು ದಯಮಾಡಿ ತರುವುದಕ್ಕೆ

ಹೋಗಬೇಡಿ. ಇವರು ex-gate ಮತ್ತು ex-field ಎನ್ನುವಂಥದ್ದನ್ನು ಇದರಲ್ಲಿ ತೋರಿಸುತ್ತಿದ್ದಾರೆ. ಅದರ ಜೊತೆಗೆ revenue share base ಮೇಲೂ ದರವನ್ನು ನಿಗದಿ ಮಾಡುತ್ತೇವೆ. ಆ ಕಾರ್ಖಾನೆಯಲ್ಲಿ ಏನು ಸಂಪೂರ್ಣ ಲಾಭ ಬರುತ್ತದೆ, ಅದು ಸಕ್ಕರೆಯಿಂದ ಇರಬಹುದು, ಕಾಕಂಬಿಯಿಂದ ಬರಬಹುದು, ಬಯಾಸ್‌ನಿಂದ ಇರಬಹುದು, press mud ಯಿಂದ ಇರಬಹುದು, ವಿದ್ಯುತ್‌ನಿಂದ ಬರತಕ್ಕಂಥ ಅದಾಯ, ಇವೆಲ್ಲವನ್ನು ಆಧಾರವಾಗಿಟ್ಟುಕೊಂಡು ಆ ಸಮಿತಿ ಅವಗಾಹನೆಗೆ ತೆಗೆದುಕೊಂಡು ಆ ಕಬ್ಬಿಗೆ ಬೆಲೆಯನ್ನು ನಿಗದಿ ಮಾಡುವಂಥ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತೇವೆಂದು ಇಲ್ಲಿ ತೋರಿಸಿದ್ದಾರೆ. ತಮ್ಮ ಉದ್ದೇಶ ಒಳ್ಳೆಯದಿರಬಹುದು, ಈ ಖಾಸಗಿ ಕಾರ್ಖಾನೆಯವರಿದ್ದಾರಲ್ಲಾ, ಇವರಂಥ ಕಳ್ಳರನ್ನು ಈ ದೇಶದಲ್ಲಿ ಎಲ್ಲಿ ಹುಡುಕಿದರೂ ಸಿಗುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನೀವು ಕಬ್ಬು ಸರಬರಾಜು ಮಾಡಿದ ಮೇಲೆ recovery base ಎಂದು ಹೇಳುತ್ತೀರಿ. ಅದನ್ನು ಸಕ್ಕರೆ ಇಳುವರಿಯ ಮೇಲೆ ನಿಗದಿ ಮಾಡುತ್ತೇವೆ. ಈ recovery ಕಾರ್ಖಾನೆಗಳಲ್ಲಿ ಹೇಗೆ ಬರುತ್ತಿದೆ. ಮಾನ್ಯ ಸಚಿವರಿಗೆ ಅಧಿಕಾರಿಗಳು brief ಮಾಡಿರಬಹುದು. ಉತ್ತರ ಕರ್ನಾಟಕದಲ್ಲಿ ಹವಾಮಾನ, ಭೂಮಿ, ನೀರು ಇದೆಲ್ಲಾ ಉತ್ತಮವಾಗಿದೆ, ಅಲ್ಲಿ ತಳಿ ಚೆನ್ನಾಗಿ ಬರುತ್ತದೆ. ಮೈಸೂರು ಭಾಗದಲ್ಲಿ ಹವಾಮಾನ, ಭೂಮಿ, ನೀರು ಇಲ್ಲಿ ಇದ್ಯಾವುದೂ ಸರಿಯಾಗಿಲ್ಲ. ಇಲ್ಲಿ ತಳಿ ಕಡಿಮೆ ಬರುತ್ತದೆನ್ನುವಂಥ ವಾದವನ್ನು ಹೇಳುತ್ತಾರೆ. ಕಾರ್ಖಾನೆಗಳಿಗೆ variety ತಳಿಗಳ ಕಬ್ಬುಗಳು ಬರುತ್ತವೆ, 671 ತಳಿಗಳಿರುವ ಕಬ್ಬು ಏನಿವೆ, ಎಲ್ಲಾ ತಳಿಗಳಿಗಿಂತಲೂ ಹೆಚ್ಚು ಸಕ್ಕರೆ ಪ್ರಮಾಣ ಇರುವಂಥ ತಳಿ. 265 ಎನ್ನುವ ಇನ್ನೊಂದು ಹೊಸ ತಳಿ ಬಂದಿದೆ, ಇತರೆ ಕಬ್ಬು ಎಕರೆಗೆ 50–60 ಟನ್ ಕಬ್ಬು ಬೆಳೆದರೆ, ಈ 265 ತಳಿ ಕಬ್ಬು ಏನಿದೆ, ಇದು ಎಕರೆಗೆ ಸುಮಾರು 90–100 ಟನ್ ಬೆಳೆಯುತ್ತದೆ. ಇದರ ಇಳುವರಿ 671 ತಳಿ, ಇದರ recovery 12–13 ವರೆಗೆ ಬರುತ್ತದೆ. 265 ತಳಿ ಏನು ಇದೆ, ಇದು 8–9 ವರೆಗೆ recovery ಬರುತ್ತದೆ. ನಾವು ಒಂದು ಕಡೆ ಕಬ್ಬಿನ ತಳಿ ಬಗ್ಗೆ recoveryಯನ್ನು ಅವಲೋಕನ ಮಾಡಬೇಕಾಗುತ್ತದೆ. ಇನ್ನೊಂದು ಆ

ಕಾರ್ಖಾನೆಗಳನ್ನು ನಡೆಸುವಂಥ ಆಡಳಿತ ಮಂಡಳಿಯಲ್ಲೂ ಕೂಡ ಈ recovery ಬಗ್ಗೆ ಗಮನ ಹರಿಸದಿದರೆ recovery ಬರುವುದಿಲ್ಲ. ಅದು ಖಾಸಗಿ ಸಕ್ಕರೆ ಕಾರ್ಖಾನೆಗಳಿರಬಹುದು, ಸರ್ಕಾರಿ ಸಕ್ಕರೆ ಕಾರ್ಖಾನೆಗಳಿರಬಹುದು. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಆನೇಕ ಸಕ್ಕರೆ ಕಾರ್ಖಾನೆಗಳಿವೆ. ಒಂದು ಸಕ್ಕರೆ ಕಾರ್ಖಾನೆ 12% recovery ಬರುತ್ತದೆ, ಒಂದು ಕಾರ್ಖಾನೆ 13% recovery ಬರುತ್ತದೆ. ಅದೇ ನಾವು ಮಹಾರಾಷ್ಟ್ರದ ಗಡಿ ಭಾಗದಲ್ಲಿ ಹೋದಾಗ ಕೆಲವೊಂದು Sugar Factoryಗಳಿವೆ, ಇಲ್ಲಿ 14% recovery ಬರುತ್ತದೆ. 14% recovery ಹೇಗೆ ಬರುತ್ತದೆ? 13% recovery ಹೇಗೆ ಬರುತ್ತದೆ? 10% ಹೇಗೆ ಬರುತ್ತದೆ? 8% ಹೇಗೆ ಬರುತ್ತದೆಂಬುದನ್ನು ನಾವು ಅವಲೋಕನ ಮಾಡಬೇಕಾಗುತ್ತದೆ. ತಜ್ಞರ ಕರ್ತವ್ಯ ಇಲ್ಲಿದೆ. ಈ ಬಗ್ಗೆ ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಹಾರಾಷ್ಟ್ರದೊಳಗೆ ಹುತಾತ್ಮ ಕಿಸಾನ್ ಆಹೀರ್ ಎಂದು ಸಹಕಾರಿ ಸಕ್ಕರೆ ಕಾರ್ಖಾನೆ ಇದೆ. ಒಬ್ಬ ಸ್ವತಂತ್ರ್ಯ ಹೋರಾಟಗಾರ ನಾಯಕ್‌ವಾಡಿ ಎಂಬವವರು ಆ ಕಾರ್ಖಾನೆಯನ್ನು ಕಟ್ಟಿದರು. ಅವರು ಪರಿಶಿಷ್ಟ ಜಾತಿಗೆ ಸೇರಿದ ನಾಯಕರಾಗಿದ್ದರು. ನಮ್ಮ Co-operativeನಲ್ಲಿ ವರ್ಷಕ್ಕೆ ಒಂದು ಸಾರಿ general body meeting ಮಾಡಬೇಕೆಂದರೆ ಕಷ್ಟವಾಗುತ್ತದೆ. ಆ ಆಡಳಿತ ಮಂಡಳಿಯವರು ಆ ನಾಯಕ ಸರ್ವಸಾಧಾರಣ ಸಭೆ ನಡೆಸುತ್ತಿದ್ದ, ಅವರ ರೆಕವರಿ ಪ್ರತಿಶತ 14% ಇತ್ತು. 14% ಏಕೆ ಬರುತ್ತಿತ್ತು ಎಂದರೆ, ನೀವು ಏನು ಕಮಿಟಿ ಮಾಡಿದಿರಿ ಅವರು ಅದನ್ನು ಅವಲೋಕನ ಮಾಡಬೇಕಾಗುತ್ತದೆ.

ಅಧ್ಯಕ್ಷರು:– ಆ recovery ಅನ್ನ ಯಾರು detain ಮಾಡಬೇಕು? ಎಲ್ಲಿ ಮಾಡಬೇಕು?

ಶ್ರೀ ಬಸವರಾಜ ರಾಯರೆಡ್ಡಿ:– ಆ ಕಮಿಟಿಯಲ್ಲಿ ನಿಮ್ಮನ್ನು ಹಾಕಬೇಕಾ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನನ್ನನ್ನು ಬೇಡ ನಿಮ್ಮನ್ನು ಹಾಕಲಿ. ಹೆಚ್ಚು defend ಮಾಡಲಿಕ್ಕೆ, ಹೆಚ್ಚು ವಾದ ಮಾಡಲಿಕ್ಕೆ ಕಾನೂನು ಅರಿತವರು

ಮತ್ತು ಎಲ್ಲರಿಗಿಂತಲೂ ಹೆಚ್ಚು ಮಾತನಾಡತಕ್ಕಂಥ capacity ನಿಮಗೆ ಇರುವುದರಿಂದ ನಿಮ್ಮನ್ನು ಹಾಕಲಿ. ಏಕೆಂದರೆ ನಿಮ್ಮನ್ನು ಮಂತ್ರಿ ಮಾಡಿಲ್ಲ, ಬೇರೆ ಕೆಲಸ ಅದನ್ನಾದರೂ ಮಾಡ್ರಿ. ಪಾಪ ನೀವು ಮಂತ್ರಿಯಾಗಲಿ ಮಂತ್ರಿಯಾಗಲಿ ಎಷ್ಟು ಬಡಕೊಂಡರು ಅವರು ಮಾಡುವುದಿಲ್ಲ, ನೀವು ಹೆಚ್ಚು ಮಾತನಾಡುವುದರಿಂದ ನಿಮ್ಮನ್ನು ಹಿಂದಕ್ಕೆ ಸರಿಸುತ್ತಿದ್ದಾರೆ. Aleast ಅಲ್ಲಿಗೆ ನೀವು ಹೋಗಿ. ಅಲ್ಲಿ 14% ಏಕೆ ಬರುತ್ತದೆಂದರೆ, ಈ harvesting ಏನು ಇದೆಯಲ್ಲಾ ಕಬ್ಬನ್ನು ಕಟಾವು ಮಾಡತಕ್ಕಂಥ ವ್ಯವಸ್ಥೆ ಮೂರು ಹಂತದಲ್ಲಿ 8 ತಾಸಿಗೆ ಒಂದರಂತೆ ಒಂದು ಟೀಮ್ ಮಾಡಿ ಮಾಡುತ್ತಾರೆ. ಬೇಕಾದರೆ ನಿಮ್ಮ ಒಬ್ಬ ಅಧಿಕಾರಿಯನ್ನು ಮಹಾರಾಷ್ಟ್ರದ ವಾಳ್ವಾದಲ್ಲಿರತಕ್ಕಂಥ ಹುತಾತ್ಮ ಕಿಸಾನ್ ಆಹೀರ್ ಸಕ್ಕರೆ ಕಾರ್ಖಾನೆಗೆ ಕಳುಹಿಸಿ. ಇಳುವರಿ ಹೇಗೆ ತೆಗೆಯಬೇಕು ಎನ್ನುವುದು ಗೊತ್ತಾಗುತ್ತದೆ. ಮೂರು ಹಂತದಲ್ಲಿ ಬೆಳಗ್ಗೆ 8.00 ಗಂಟೆಯಿಂದ 4.00 ಗಂಟೆಯವರೆಗೆ ಒಂದು ಟೀಮ್, ಸಾಯಂಕಾಲ 4.00 ರಿಂದ ರಾತ್ರಿ 12.00 ಗಂಟೆಯವರೆಗೆ ಒಂದು ಟೀಮ್, ರಾತ್ರಿ 12.00 ಗಂಟೆಯಿಂದ ಬೆಳಗ್ಗೆ 8.00 ಗಂಟೆಯವರೆಗೆ ಒಂದು ಟೀಮ್. ರಾತ್ರಿ ಹೇಗೆ ಕಟಾವು ಮಾಡುತ್ತಾರೆಂದು ಇವರು ಅವಲೋಕನ ಮಾಡಬಹುದು. 50 ಬಯಲುಗಾಡಿಗಳ ಒಂದು ಟೀಮ್ ಮಾಡಿ ಶ್ರೀರಾಮ್ ಹೋಂಡಾ ಎನ್ನುವಂಥ ಒಂದು ಜನರೇಟರಿಯನ್ನು ಕೊಟ್ಟು ಕಟಾವು ಮಾಡುವಂಥ ಒಂದು ವ್ಯವಸ್ಥೆ ಅಲ್ಲಿ ಪ್ರಾರಂಭ ಇದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ತಾವು ಬಹಳ ಅನುಭವ ಶಾಲಿಗಳು, ಸಹಕಾರಿ ಸಚಿವರು ಆಗಿದ್ದವರು, ಸಹಕಾರಿ ಸಕ್ಕರೆ ಕಾರ್ಖಾನೆ ನೇತ್ರತ್ವ ವಹಿಸಿಕೊಂಡು ರಾಜ್ಯದಲ್ಲಿ ಅತೀ ಹೆಚ್ಚು ಇಳುವರಿ ಕೊಡುವಂಥ ಕಾರ್ಖಾನೆಯನ್ನು ನಡೆಸುತ್ತಿರುವವರಾಗಿದ್ದೀರಿ. ಸರ್ಕಾರ ನಿಗದಿ ಪಡಿಸುವ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕೊಡುವಂಥ ಸಾಮರ್ಥ್ಯ ಹೊಂದಿರುವ ಸಕ್ಕರೆ ಕಾರ್ಖಾನೆ ನಿರ್ವಹಣೆ ಮಾಡುತ್ತಿದ್ದಾರೆ. ಅವರ ಸಲಹೆಗಳು ಮತ್ತು ಅವರ ಹೇಳತಕ್ಕಂಥದ್ದು ಸೂಕ್ತವಾಗಿವೆ. ಈ ತಿದ್ದುಪಡಿ ಏನು ತಂದಿದ್ದೇವೆ ಅದಕ್ಕೆ ಸಾಧಕ ಬಾಧಕ ಅದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದರೆ

ಅನುಕೂಲ.. ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಅದರ ಬಗ್ಗೆ ಅವರು ಸಲಹೆ ಕೊಡಲಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಸಕ್ಕರೆ ಸಚಿವರು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಮನಸ್ಸು ಪರಿವರ್ತನೆಯಾಗಿ ಈ ಬಿಲ್‌ಅನ್ನು ವಾಪಸ್ಸು ತೆಗೆದುಕೊಂಡು ಒಂದು ಸಲಹಾ ಸಮಿತಿಯಲ್ಲಿ ಪೂರಕವಾಗಿ ಮೊದಲೇ ಚರ್ಚೆ ಮಾಡಿಕೊಂಡು ಈ ಬಿಲ್ ಮಾಡಲಿ ಎನ್ನತಕ್ಕಂಥ ಒಂದು ಪೂರಕವಾದ ವಾತಾವರಣ ಬರಲಿ, ನೀವು ಪರಿವರ್ತನೆ ಆಗಲಿ ಎಂದು ನಾನು ಈ ಪೀಠಿಕೆಯನ್ನು ಹಾಕುತ್ತಿದ್ದೇನೆ. ನೇರವಾಗಿ ಹೇಳಬೇಕೆಂದರೆ, ಈ ಬೆಲೆ ನಿಗದಿ ಮಾಡತಕ್ಕಂಥ ಕಮಿಟಿ ಏನಿದೆ ಅದನ್ನು ಮಾಡಿ. ಆದರೆ ರೆಕವರಿ ಬೇಸ್ ಮೇಲೆ ಏನು ಮಾಡುವುದಕ್ಕೆ ಹೊರಟಿದ್ದೀರಲ್ಲಾ ಬಹುಶಃ ನಾವು ಎಲ್ಲೋ ಎಡವುತ್ತೇವೆ.

ಅಧ್ಯಕ್ಷರು:– ಯಾವುದರ ಮೇಲೆ ಮಾಡಬೇಕು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಅದನ್ನು ಹೇಳುವುದಕ್ಕೆ ಬರುತ್ತೇನೆ. ರೆಕವರಿ ಬೇಸ್ ನೀವು ಒಂದೇ ಆಧಾರವಾಗಿ ಇಟ್ಟುಕೊಂಡರೆ ಇಲ್ಲಿ ರೆಕವರಿ ಹೊಡೆಯುವಂಥದ್ದು ಇದೆ. ರೆಕವರಿಯನ್ನು ನೀವು ಮೂಲವಾಗಿ ಇಟ್ಟುಕೊಂಡು ಹೋದದ್ದೇ ಆದರೆ 100 ಟನ್ crush ಮಾಡಿದಾಗ 120 ಕೆ.ಜಿ. ಸಕ್ಕರೆ ಬರುವ ಸಂದರ್ಭ ಇದ್ದದ್ದು, ಆದರೆ ಆಮೇಲೆ ಬರತಕ್ಕಂಥ ರೆಕವರಿ ಕಬ್ಬನ್ನು ಕಾಳಸಂತೆಯಲ್ಲಿ ಮಾರಾಟ ಮಾಡತಕ್ಕಂಥ ವ್ಯವಸ್ಥೆ ಕೂಡ ಕಾರ್ಖಾನೆಯವರು ಮಾಡತಕ್ಕಂಥ ಸನ್ನಿವೇಶಗಳನ್ನು ನಾವು ಕಂಡಿದ್ದೇವೆ. ಅದಕ್ಕೆ ನೀವು ಗಮನ ಹರಿಸಬೇಕಾಗುತ್ತದೆ. ಅದರ ಜೊತೆಗೆ ನೀವು ರೈತರಿಗೆ ತೊಂದರೆಯಾಗತಕ್ಕಂಥದ್ದು ವಿಧೇಯಕದಲ್ಲಿ ನೀವು ಕಾರ್ಖಾನೆಯ ಬಾಗಿಲಿಗೆ ರೈತ ಕಬ್ಬನ್ನು ಕಟಾವು ಮಾಡಿಕೊಂಡು ತಂದು ಕೊಡಬೇಕೆಂದು ಏನು ಇದೆ.

ಅಧ್ಯಕ್ಷರು:– ನಮ್ಮ ಕಡೆ ಹಾಗೇ ಇದೆಯಲ್ಲಾ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಿಮ್ಮ ಕಡೆ ಅಷ್ಟೆ ಇದೆ. ಉತ್ತರ ಕರ್ನಾಟಕದಲ್ಲಿ ಕಾರ್ಖಾನೆ ಮಾಲೀಕರು ಕಟಾವು ಮತ್ತು ಸಾರಿಗೆ

ಮಾಡತಕ್ಕಂಥದ್ದು ಇದೆ. ದಯಮಾಡಿ ನಿಮ್ಮ ಭಾಗಕ್ಕೆ ಅನ್ಯಾಯವಾಗುತ್ತಿರುವುದನ್ನು ಇವತ್ತು ನಾನು ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಿಮ್ಮ ಭಾಗದಲ್ಲಿ ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆಯಲ್ಲಿ ಕಬ್ಬು ಬೆಳೆಯುತ್ತೀರಿ. ನಮ್ಮ ಕಡೆ 40 ಎಕರೆಯಿಂದ 120 ಎಕರೆಯವರೆಗೆ ಕಬ್ಬು ಬೆಳೆಯುವವರು ಇದ್ದಾರೆ. ಆ ಕಬ್ಬು ಕಟಾವು ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ? ಅದು ಸಾರ್ ಇಲ್ಲಿ ಇರುವ ಪ್ರಶ್ನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಉತ್ತರ ಕರ್ನಾಟಕದಲ್ಲಿರುವ ಎಲ್ಲಾ ಕಾರ್ಖಾನೆಯವರು ಸಾರಿಗೆ ಮತ್ತು ಕಟಾವು ಮಾಡುತ್ತಾರೆ.

ಅಧ್ಯಕ್ಷರು:– ನಾನೂ ಕಬ್ಬು ಬೆಳೆದಿದ್ದೇನೆ. ಅದನ್ನು ಕಟಾವು ಮಾಡಿ ತೆಗೆದುಕೊಂಡು ಹೋಗಿ ಅವರಿಗೆ ಕೊಡುವುದು. ನೀವು ಅವರು ಒಪ್ಪಂದ ಮಾಡಿಕೊಂಡು ಕಟಾವು ಮಾಡಿ ತೆಗೆದುಕೊಂಡು ಹೋಗಲಿ ಅಥವಾ ಸಾರಿಗೆ ಮಾಡಿಕೊಂಡು ಹೋಗುವುದು ಅದು ಬೇರೆ ಮಾತು. ನನ್ನ ಕಬ್ಬನ್ನು ನಾನು ಕಟಾವು ಮಾಡಿ ಡೀಲೇ ಆಗದ ರೀತಿಯಲ್ಲಿ ಅವರು ಖರೀದಿ ಮಾಡಬೇಕು.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಮೂರು ಕಾರ್ಖಾನೆಗಳು ಇವೆ. ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಿಮಗೆ ಸ್ವಾತಂತ್ರ್ಯ ಇದೆ ನೀವು ಮಾತನಾಡಿ. ನೀವು ಮಂಡನೆ ಮಾಡಿರುವ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ. ಕಬ್ಬನ್ನು ಕಾರ್ಖಾನೆಯ ಬಾಗಿಲಿಗೆ ಸರಬರಾಜು ಮಾಡಬೇಕೆಂದು ಏನು ಇದೆಯಲ್ಲಾ ಅದು ಅತ್ಯಂತ ರೈತರಿಗೆ ಕಷ್ಟಕರವಾಗಿರುವಂಥದ್ದು. ಉತ್ತರ ಕರ್ನಾಟಕದಲ್ಲಿರುವಂಥ ಎಲ್ಲಾ ರೈತರು ನಿಮಗೆ ಶಾಪ ಹಾಕುವಂಥ ಕಾಲ ಬರುತ್ತದೆ. ದಯವಿಟ್ಟು ಕಾರ್ಖಾನೆಯ ಮಾಲೀಕರ ಮತ್ತು ಅಧಿಕಾರಿಗಳ ಮಾತನ್ನು ಈ ಬಿಲ್‌ನ್ನು ತರುವುದಕ್ಕೆ ಹೋಗಬೇಡಿ. ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಕಬ್ಬು

ಬೆಳೆಗಾರರಿಗೆ ಸಹಾಯ ಮಾಡಬೇಕೆನ್ನುವ ನಿಮ್ಮ ಕಲ್ಪನೆ ಇದ್ದರೆ ಈ ಕಬ್ಬು ಬೆಳೆಗಾರರು ಜೀವಂತವಾಗಿ ಈ ರಾಜ್ಯದಲ್ಲಿ ಇರಬೇಕು ಎನ್ನುವಂಥದ್ದು ನಿಮ್ಮ ದೂರದೃಷ್ಟಿ ಇದ್ದರೆ ..

ಅಧ್ಯಕ್ಷರು:– ಬೀದರ್‌ದವರು ಏನು ಹೇಳುತ್ತಾರೆ ಹೇಳಿ ನೋಡೋಣ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಈಗಾಗಲೇ ಬಹಳಷ್ಟು ಹೇಳಿದ್ದಾರೆ. ಅನುಭವಸ್ಥರು ಇದ್ದಾರೆ ಅವರು ಮಾತನಾಡಿದ್ದಾರೆ. ನಮ್ಮ ಕೆಲವೊಂದು ವಿಚಾರಗಳನ್ನು ಕೇಳಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಮಾತನಾಡಿ ಮುಗಿಸುತ್ತೇನೆ. ದಯಮಾಡಿ ಇದು ಬೇಕಾ ಎನ್ನುವಂಥದ್ದು? ಅದನ್ನು ತೆಗೆದು ಹಾಕಬೇಕು, ಇಲ್ಲಾ ಅಂದರೆ ಈ ಬಿಲ್ ವಾಪಸ್ಸು ತೆಗೆದುಕೊಳ್ಳಿ. ಇದರ ಜೊತೆಯಲ್ಲಿಯೇ ತಿದ್ದುಪಡಿ ಮಾಡಿಕೊಳ್ಳುವುದು ಇದ್ದರೆ ಮಾಡಿಕೊಳ್ಳಿ. Ex-field ಎನ್ನತಕ್ಕಂಥದ್ದನ್ನು ನೀವು ಮಾಡಿ. ಏಕೆಂದರೆ ಕಾರ್ಖಾನೆಯ ಮಾಲೀಕರದು ವಾತುಕ ಇರುತ್ತದೆ, ಪೋಡಣಿ ಇರುತ್ತದೆ, ಎಲ್ಲಾ ಇರುತ್ತವೆ. ಆದರೆ ಒಬ್ಬ ರೈತನ ಹತ್ತಿರ 5 ಎಕರೆ ಕಬ್ಬು ಇದೆ. ರೈತರಿಗೆ ಏನು ತೊಂದರೆ ಆಗುತ್ತದೆಂದರೆ, 5 ಎಕರೆ ಕಬ್ಬು ಸರಬರಾಜು ಮಾಡುವುದಕ್ಕೆ ಇವತ್ತು ಆ ರೈತ ಟ್ರಾಕ್ಟರ್ ಮಾಡಿಕೊಳ್ಳಬೇಕು, ಲಾರಿ ಮಾಡಿಕೊಳ್ಳಬೇಕು ಮತ್ತು ಕಬ್ಬು ಕಟಾವು ಮಾಡುವಂಥ ಜನರನ್ನು ಹಿಡಿದುಕೊಳ್ಳಬೇಕಾಗುತ್ತದೆ. ಆವತ್ತು ಮಾರ್ಕೆಟ್‌ನಲ್ಲಿ ಏನಾಗುತ್ತದೆಂದರೆ, ಅತೀ ಹೆಚ್ಚು ತೊಂದರೆ ಅನುಭವಿಸತಕ್ಕಂಥವನು ಆ ರೈತ. ದಯಮಾಡಿ ಉಳಿದಿದ್ದನ್ನು ನಾನು ಒಪ್ಪುತ್ತೇನೆ. ಇವತ್ತು ನಿಯಂತ್ರಣ ಮಂಡಳಿ ಮಾಡತಕ್ಕಂಥ ಪೂರ್ವಾಪರತೆಯನ್ನು ನೀವು ಅವಲೋಕನ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿ ನೀವು ಏನು ವಿಧೇಯಕ ಮಂಡನೆ ಮಾಡುತ್ತಿದ್ದೀರಿ ಈ ಮಂಡನೆ ಮಾಡಿರತಕ್ಕಂಥದ್ದು, ಸಹಕಾರ ಸಚಿವರೆ, ದಯಮಾಡಿ ಇದನ್ನು ನೀವು ಪ್ರತಿಷ್ಠೆಯಾಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಸಾಕಷ್ಟು ಉದಾಹರಣೆಗಳು ಇವೆ. ಸಾಕಷ್ಟು ಸಂದರ್ಭದಲ್ಲಿ ಹಿಂದೆ ವಾಪಸ್ ತೆಗೆದುಕೊಂಡಿರುವುದು ಇದೆ.

ಅಧ್ಯಕ್ಷರು:– ಮಾನ್ಯ ಸಚಿವರೆ Sugar Factory ಇದೆಯಾ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅವರದು ಇಲ್ಲಾ, ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಯಾರದೋ ಪಾಪದ ಕೊಡವನ್ನು ಇವರು ಹೊರುವುದಕ್ಕೆ ಬಂದಿದ್ದಾರೆ. ನಾನು ಹೇಳತಕ್ಕಂಥದ್ದು ಅದೇ. ಅವರದು ಸಕ್ಕರೆ ಕಾರ್ಖಾನೆ ಇಲ್ಲ, ಅವರದು ಕಬ್ಬೂ ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾತನಾಡುತ್ತಿರುವವರೆಲ್ಲರೂ ಒಂದೊಂದು ಫ್ಯಾಕ್ಟರಿ ಇರುವವರೇ ಮಾತನಾಡುತ್ತಿರುವುದು. ಆದರೆ ರೈತರ ಪರವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ ಅವರನ್ನುಯ ನಾನು ಅಭಿನಂದಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಇಲ್ಲಿ ಪ್ರಮುಖವಾಗಿರತಕ್ಕಂಥದು, ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕು ಅಥವಾ ಇದರಲ್ಲಿಯೇ ತಿದ್ದುಪಡಿ ಮಾಡಿ ex-field ಎನ್ನುವಂಥ ಕೆಲಸವನ್ನು ನೀವು ಮಾಡಿದರೆ ಸಾಕು.

ಶ್ರೀ ಗೋವಿಂದ ಎಂ. ಕಾರಜೋಳ:– ತಜ್ಞರ ಸಮಿತಿ ಬೇಡ ಅದನ್ನು ತೆಗೆಯಬೇಕು. ಈಗಾಗಲೇ ಒಂದು ಸಮಿತಿ ಇದೆ ಸಾಕು, ಎರಡನೆಯ ಸಮಿತಿ ಬೇಡ.

ಅಧ್ಯಕ್ಷರೆ:– Ex-field ಎಂದರೆ ಆ ಗದ್ದಗೆ weighing machine ತೆಗೆದುಕೊಂಡು ಹೋಗಿ ತೆಗೆದುಕೊಳ್ಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ:– ಅದು ಕಾರ್ಖಾನೆಗೆ ಹೋಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಮ್ಮ ಹತ್ತಿರ 50 ವರ್ಷದಿಂದ ಅದೆ procedure ಇದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಮಾಹಿತಿಗೆ ಇರಲಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ನೀವು ಏನು ರೇಟ್ ಫಿಕ್ಸ್ ಮಾಡುವುದಕ್ಕೆ ಈ

ಸಮಿತಿಯವರನ್ನು ಒಪ್ಪಿಸುತ್ತೀರಲ್ಲಾ ಈ ಸಮಿತಿಯವರ ಕಣ್ಣು ಕಟ್ಟುವಂಥ ಕೆಲಸವನ್ನು ಮಾಡುತ್ತಾರೆ. ಏನು ಮಾಡುತ್ತಾರೆನ್ನುವುದಕ್ಕೆ ಉದಾಹರಣೆ ಹೇಳುತ್ತೇನೆ. ಖಾಸಗಿ ಕಾರ್ಖಾನೆಯವರು ಎಂತಹ ದುರಂತದ ಕೆಲಸ ಮಾಡುತ್ತಾರೆಂದರೆ, 5–6 ಲಕ್ಷ ಟನ್ ಕಬ್ಬು ನುರಿಸಿದರೆ ಅದರಲ್ಲಿ ಸುಮಾರು 25 ಸಾವಿರದಿಂದ 50 ಸಾವಿರ ಕಬ್ಬನ್ನು ನಂಬರ್–2 ದಲ್ಲಿ ತೆಗೆದುಕೊಂಡು ಸೇಲ್ ಮಾಡುತ್ತಾರೆ. ಇದು ಯಾವುದರಲ್ಲಿಯೂ ಬರುವುದಿಲ್ಲ. ಅದಕ್ಕಾಗಿ ನೀವು ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಬೇಕಾಗುತ್ತದೆ. ಅಲ್ಲಿ ವಾಚ್ ಮಾಡತಕ್ಕಂಥ ಆಫೀಸರ್ಸ್ ಏನಿದ್ದಾರೆ, ಅವರನ್ನು ನಿಯಂತ್ರಣದಲ್ಲಿಡುವುದಕ್ಕೆ ಏನು ಕಾನೂನು ತರುತ್ತೀರಿ ಹೇಳಿ? ನೀವು 14 ದಿವಸದಲ್ಲಿ ಬಿಲ್ ಪೇಮೆಂಟ್ ಮಾಡಿಸುತ್ತೇನೆಂದು ಮಾನ್ಯ ಸಚಿವರು ಹೇಳುತ್ತಾರೆ. ನೀವು ಕಾರ್ಖಾನೆಯವರನ್ನು ಇಲ್ಲಿ ನೋಡಬೇಕಾಗುತ್ತದೆ. ಬರೀ ರೈತರನ್ನು ನೋಡತಕ್ಕಂಥದ್ದು ಅಲ್ಲ. ಕಾರ್ಖಾನೆ ಉಳಿದಾಗ ರೈತ ಉಳಿಯುತ್ತಾನೆ. 14 ದಿವಸದಲ್ಲಿ ಹೇಗೆ ಕೊಡುವುದಕ್ಕಾಗುತ್ತದೆ. ಅವನು crushing ಪ್ರಾರಂಭ ಮಾಡುತ್ತಾನೆ. ದುಡಿಯುವ ಬಂಡವಾಳ ಯಾವಾಗ ತೆಗೆದುಕೊಳ್ಳುತ್ತಾರೆ? ಅವನು crush ಮಾಡಿ ಗೋಡೌನ್‌ದಲ್ಲಿ ಸಕ್ಕರೆ ಇಟ್ಟಮೇಲೆ ಅದರ ಮೇಲೆ ಒತ್ತಿ ಇಟ್ಟು ಹಣ ತೆಗೆದುಕೊಳ್ಳುತ್ತಾನೆ. ನೀವು 14 ದಿವಸದ ಬದಲಾಗಿ ಅದರ ಮೇಲೆ ಒತ್ತಿ ಇಟ್ಟು ಹಣ ತೆಗೆದುಕೊಳ್ಳುತ್ತಾನೆ. ನೀವು 14 ದಿವಸದ ಬದಲಾಗಿ ನಿಮ್ಮ ಕಾನೂನಿನಲ್ಲಿ ತಿದ್ದುಪಡಿ ಮಾಡಿಕೊಂಡು 25 ದಿವಸ ಮಾಡಿಕೊಳ್ಳಿ. ಈಗ ಇರುವ ಕಾನೂನು ಪ್ರಕಾರ 14 ದಿವಸದಲ್ಲಿ ಯಾವ ಕಾರ್ಖಾನೆಯವರೂ ಕೊಟ್ಟಿಲ್ಲ. 6 ತಿಂಗಳಾದರೂ ಕೆಲವೊಬ್ಬರು ಮೊದಲನೇ ಅಡ್ವಾನ್ಸ್ ಕೊಟ್ಟಿಲ್ಲ. ಅದಕ್ಕಾಗಿ ಇವರು 14 ದಿವಸದಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದು ಆಗಲಾರದ ಮಾತು. ಅದಕ್ಕಾಗಿ 25 ರಿಂದ 30 ದಿವಸಕ್ಕೆಂದು ಇಟ್ಟುಕೊಳ್ಳಿ. ಕನಿಷ್ಠ 30 ದಿವಸದಲ್ಲಿ ಕೊಡದೇ ಹೋದರೆ ನೀವು ಅವರಿಗೆ ಏನು ಶಿಕ್ಷೆ ಕೊಡುತ್ತೀರಿ ಎನ್ನುವುದರ ಬಗ್ಗೆ ನೀವು ಉಲ್ಲೇಖ ಮಾಡಿ. 15%, 18%, 20% ಬಡ್ಡಿ ಹಾಕುತ್ತೇವೆನ್ನುವ ಉಲ್ಲೇಖ ಮಾಡಿ. ಹಾಗಾಗಿ ಈ ಬಿಲ್ ಅನ್ನು ತರಾತುರಿಯಲ್ಲಿ ತರುವ ಅವಶ್ಯಕತೆ ಇಲ್ಲ. ಇನ್ನೂ ಸಮಯವಿದೆ. ಬೇಕಾದರೆ

ಬೆಳಗಾಂ ಅಧಿವೇಶನದಲ್ಲಿ ಚರ್ಚೆ ಮಾಡೋಣ. ಬೆಳಗಾಂ ಅಧಿವೇಶನದಲ್ಲಿ ಚರ್ಚೆ ಮಾಡಿಕೊಂಡು ಆವತ್ತು ಉಪಯುಕ್ತವಾದ ಒಂದು ವಿಧೇಯಕವನ್ನು ತರೋಣ. ನೀವು ಏಕೆ ಪ್ರತಿಷ್ಠೆಗೆ ಬೀಳುತ್ತೀರಿ? ಯಾರೋ ಅಧಿಕಾರಿಗಳು ಹೇಳುತ್ತಾರೆಂದು ಮಾಡಬೇಡಿ. ಮಾನ್ಯ ಸಹಕಾರ ಸಚಿವರು ಬಹಳ ಒಳ್ಳೆಯವರಿದ್ದಾರೆ. ಅವರ ಮೇಲೆ ತಪ್ಪು ಹೊರಿಸತಕ್ಕಂಥದ್ದು ಅಲ್ಲ. ಉತ್ತರ ಕರ್ನಾಟಕದಲ್ಲಿ ಇದರಿಂದ ಅನ್ಯಾಯವಾದಾಗ ಬೆಳಗಾಂನಲ್ಲಿ ನವೆಂಬರ್‌ನಲ್ಲಿ ಅಧಿವೇಶನ ಮಾಡುತ್ತೇವೆಂದು ಹೇಳುತ್ತೀರಿ. ಮತ್ತೆ ಅಲ್ಲಿಗೆ ರೈತರು ಒಂದು ಗಲಾಟೆ ಮಾಡುತ್ತಾರೆ, ಮತ್ತೆ ವಿಷ ಕುಡಿಯುವಂಥ ಸನ್ನಿವೇಶ ನಿರ್ಮಾಣವಾಗಬಾರದು. ನಿಮ್ಮ ಮೇಲೆ ಕೆಟ್ಟ ಹೆಸರು ಬರಬಾರದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ನೀವು ಜನರಿಗೆ ವಿಷ ಕುಡಿಯುವುದನ್ನು ಏಕೆ ಜ್ಞಾಪಿಸುವುದಕ್ಕೆ ಹೋಗುತ್ತೀರಿ? ನೀವು ಜನರಿಗೆ ಪ್ರಚೋದನೆ ಮಾಡಿದ ಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ದಯವಿಟ್ಟು ಅದು ಆಗಬಾರದು. ದಯಮಾಡಿ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಿ. ಇನ್ನೂ ಕೆಲವು ಸಲಹೆಗಳನ್ನು ಕೊಡುತ್ತೇವೆ. ಬೇಕಾದರೆ ಸದನ ಸಮಿತಿ ಮಾಡಿ. 15-20 ದಿವಸಗಳೊಳಗೆ report ಕೊಡುತ್ತೇವೆ.

ಶ್ರೀ ಈಶ್ವರ ಖಂಡ್ರೆ (ಭಾಲ್ಕಿ):- ಮಾನ್ಯ ಅಧ್ಯಕ್ಷರೆ, ಕಬ್ಬು ಖರೀದಿ ಮತ್ತು ಸರಬರಾಜು ನಿಯಂತ್ರಣ ಕಾಯಿದೆ ಏನು ಜಾರಿಗೆ ತಂದಿತ್ತು, ಅದರಲ್ಲಿ ಕೆಲವು ನ್ಯೂನತೆಗಳಿವೆ. ಆ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ನಮ್ಮ ಸರ್ಕಾರ ಈ ವಿಧೇಯಕ ತಂದಿದೆ. ಅದರಲ್ಲಿ ವಿಶೇಷವಾಗಿ gate cane ಮತ್ತು field cane ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ತಮ್ಮ ಮುಖಾಂತರ ಸದನದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಹಿಂದಿನ ವಿಧೇಯಕದಲ್ಲಿ ಏನು ಮಾಡಿದ್ದಾರೆ, ಉತ್ತರ ಕರ್ನಾಟಕದಲ್ಲಿರುವಂಥ ಕಾರ್ಖಾನೆಗಳಿಗೆ ನೀವು field cane ಪ್ರಕಾರ ಹಣ ಪಾವತಿ ಮಾಡಬೇಕು ಎಂದು ದರ ನಿಗದಿ ಮಾಡಿದ್ದಾರೆ. ದಕ್ಷಿಣ

ಕರ್ನಾಟದಲ್ಲಿರುವಂಥ ಕಾರ್ಖಾನೆಗಳು ಇವತ್ತು gate cane ಪ್ರಕಾರ ಸಕ್ಕರೆ ಕಬ್ಬಿನ ಬೆಲೆ ನಿಗದಿ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ 3 ಸಹಕಾರಿ ಸಕ್ಕರೆ ಕಾರ್ಖಾನೆಗಳು ಸರ್ಕಾರ ಮತ್ತು ರೈತರ ಕಾರ್ಖಾನೆಗಳಿವೆ. ರೈತರ share ಹಣದಲ್ಲಿ ನಡೆಯುತ್ತಿದೆ, ಇದೇನೂ ಖಾಸಗಿ ಕಾರ್ಖಾನೆಗಳಲ್ಲ. ನಮ್ಮ ಜಿಲ್ಲೆಯಲ್ಲಿ ಇವತ್ತು no recovery zone ಬರುತ್ತದೆ. ಈಗ ಮಾನ್ಯ ಹಿಂದಿನ ಸಚಿವರು ಒಂದು ಕಡೆ 14% ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ನಾವು 20 ವರ್ಷದ ಸರಾಸರಿ ಇಳುವರಿ ತೆಗೆದರೆ ಅದು 10%, 10.2% ಬರುತ್ತದೆ. ಬೆಳಗಾಂ ಭಾಗದಲ್ಲಿ 12%, 13%, 14% ಬರಬಹುದು. ಇಳುವರಿ ಕೇವಲ ಇದರ ಮೇಲೆಯೇ ಆಧಾರಿತ ಇಲ್ಲ. ಹವಾಮಾನದ ಮೇಲೆ, ಭೂಮಿಯ ಫಲವತ್ತತೆಯ ಮೇಲೂ ಇದೆ. ಕಬ್ಬಿನ ತಳಿಗಳ ಮೇಲೂ ಇದೆ. ರೈತರು 10, 20, 40 ತಳಿಗಳನ್ನು ಬೆಳೆಯುತ್ತಾರೆ. ಇವತ್ತು ಕಾರ್ಖಾನೆಗಳೂ ಉಳಿಯಬೇಕು, ರೈತರಿಗೆ ಹೆಚ್ಚಿನ ಬೆಲೆಯನ್ನೂ ಕೊಡಬೇಕು. ಇದರಲ್ಲಿ ರಾಜಕೀಯ ತರಬಾರದು. ಮೈಸೂರಿನಲ್ಲಿ ಅಂದರೆ ದಕ್ಷಿಣ ಕರ್ನಾಟಕದಲ್ಲಿರುವಂಥ ಬನ್ನಾರಿ ಅಮ್ಮ ಎನ್ನುವ ಒಂದು ಖಾಸಗಿ ಕಾರ್ಖಾನೆ. ಅದರ ಇಳುವರಿ 10.1%. ಬೀದರ್ ಜಿಲ್ಲೆಯಲ್ಲಿರುವಂಥ ಮೂರೂ ಸಹಕಾರಿ ಸಕ್ಕರೆ ಕಾರ್ಖಾನೆಗಳ ಇಳುವರಿ 10%. ಬನ್ನಾರಿ ಅಮ್ಮನ ಕಾರ್ಖಾನೆಗೆ ನೀವು gate cane ಎಂದು 2500 ರೂ.ಗಳನ್ನು ನಿಗದಿ ಮಾಡಿದ್ದೀರಿ. ಬೀದರ್ ಜಿಲ್ಲೆಯಲ್ಲಿರುವಂಥ ಕಾರ್ಖಾನೆಗಳಿಗೆ field cane ಎಂದು ನೀವು 2200 ರೂ.ಗಳೆಂದು ನಿಗದಿ ಮಾಡಿದ್ದೀರಿ. ಇವತ್ತು field cane, gate caneಗೆ ವ್ಯತ್ಯಾಸವೇನಿದೆ? ಕಟಾವು ಕೂಲಿಗಳಿಗೆ 250-00, 260-00 ರೂ.ಗಳನ್ನು ಕೊಡಬೇಕಾಗುತ್ತದೆ. ಸರಬರಾಜು, transportation ಗೆ 250-00 ರೂ. ಕೊಡಬೇಕಾಗುತ್ತದೆ. ಒಂದು ಟನ್ ಕಬ್ಬಿಗೆ field ನಿಂದ ನಿಮ್ಮ ಕಾರ್ಖಾನೆಗೆ ತರಬೇಕೆಂದರೆ ಸುಮಾರು 500 ರಿಂದ 550 ರೂಪಾಯಿ ಖರ್ಚಾಗುತ್ತದೆ. ಒಂದು ಖಾಸಗಿ ಖಾರ್ಕಾನೆಗೆ ನೀವು 2500 ರೂಪಾಯಿಗಳನ್ನು fix ಮಾಡುತ್ತೀರಿ. ಸಹಕಾರಿ ಕ್ಷೇತ್ರದಲ್ಲಿರುವಂಥ ಬೀದರ್ ಜಿಲ್ಲೆಯ ಕಾರ್ಖಾನೆಗಳಿಗೆ 3000 ರೂಪಾಯಿಗಳನ್ನು fix ಮಾಡುತ್ತೀರಿ. ಒಂದೇ ರಾಜ್ಯದಲ್ಲಿ ಒಂದು ಕಡೆ

2500 ರೂ.ಕೊಟ್ಟರೆ ಇನ್ನೊಂದು ಕಡೆ 3000 ರೂ.ಗಳನ್ನು ಕೊಡುತ್ತೀರಿ. ಟನ್ ಒಂದಕ್ಕೆ 500 ರೂ. ನಂತೆ 5 ಲಕ್ಷ ಟನ್‌ಗೆ 25 ರಿಂದ 30 ಕೋಟಿ ರೂಪಾಯಿಗಳಷ್ಟು ರೈತರಿಗೆ ಕಾರ್ಖಾನೆಗೆ ನಷ್ಟವಾಗುತ್ತದೆ. ಇದನ್ನು ಯಾರು ಭರಿಸುತ್ತಾರೆ? ಇದು ನೀವು ಮಾಡಿದಂಥ ತಪ್ಪಲ್ಲವೇ? ಕಾರ್ಖಾನೆಗೆ ನೀತಿ ಮಾಡುತ್ತೀರಿ, ಒಂದು ಕಾನೂನು ಮಾಡುತ್ತೀರಿ, ಕಾಯಿದೆ ಮಾಡುತ್ತೀರಿ ಎಂದರೆ ದಕ್ಷಿಣ ಕರ್ನಾಟಕಕ್ಕೂ ಒಂದೇ ಮಾಡಿ, field cane ಎಂದು field cane ಎಂದೇ ಮಾಡಿ. ಇಲ್ಲಿಯೂ field cane ಎಂದರೆ field cane ಎಂದೇ ಮಾಡಿ. ಈಗ FRP ಪ್ರಕಾರ ಕೊಡುವಂಥದ್ದು. ಇದು ಕೇಂದ್ರ ಸರ್ಕಾರ ನಿಗದಿ ಮಾಡಿರುವಂಥದ್ದು. ಈಗ ಸರ್ಕಾರ ಇದೆ, ಹೋರಾಟ ಮಾಡಿ ಕೇಂದ್ರ ಸರ್ಕಾರದಲ್ಲಿ FRP ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಿ. ಇವತ್ತು ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಹೆಚ್ಚಳ ಮಾಡಲಿಕ್ಕೆ ಪ್ರಯತ್ನ ಮಾಡಿ. ಸಹಕಾರಿ ಕ್ಷೇತ್ರದಲ್ಲಿರುವಂಥ ಕಾರ್ಖಾನೆಗಳಲ್ಲಿ ಸಹ ಉತ್ಪಾದನೆ, co-generation ಇದೆ. ಸಹಕಾರಿ ಕ್ಷೇತ್ರದಲ್ಲಿ PPP agreement ಆಗಿದೆ. ಇವರು per unit ಗೆ 3 ರೂ. 60 ಪೈಸೆಯಂತೆ ಮಾರಾಟ ಮಾಡುತ್ತಾರೆ. ಖಾಸಗಿಯಲ್ಲಿ per unit ಗೆ 5 ರೂ. 50 ಪೈಸೆ ಇದೆ. ಆ ನ್ಯೂನತೆಯನ್ನು ಸರಿಪಡಿಸಿ. ಇವತ್ತು ಹೆಚ್ಚಿನ ಬೆಲೆ ಕೊಡಬೇಕು. ಅದು ಯಾವ ರೀತಿಯಲ್ಲಿ? ನಾವಿಲ್ಲಿ ಕೇವಲ ಚರ್ಚೆ ಮಾಡುತ್ತೇವೆ. ಹಿಂದಿನ ಸರ್ಕಾರದವರು ಕಾಯಿದೆ ತಂದರು. ಆದರೆ, ಅನುಷ್ಠಾನಕ್ಕೆ ಬಂದಿದೆಯೇ? ಇವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಕಾನೂನನ್ನು ತಂದ ನಂತರ ಒಂದು ವರ್ಷದವರೆಗೆ ರೈತರಿಗೆ ಹಣ ಪಾವತಿ ಮಾಡಿಲ್ಲ. ಇದನ್ನು ದಾಖಲೆ ಪ್ರಕಾರ ನಾನು ಹೇಳುತ್ತಿದ್ದೇನೆ. ಅನುಷ್ಠಾನಕ್ಕೆ ತರದೆ ಏನೂ ಮಾಡದೆ ಇವತ್ತು ಈ ಸರ್ಕಾರ ಬಂದ ಮೇಲೆ ಅನುಷ್ಠಾನಕ್ಕೆ ತರಲಿಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಇವತ್ತಿನದಿವಸ ಸಕ್ಕರೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇವತ್ತಿನ ದಿವಸ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇವತ್ತು ಏನು ಈ ವಿಧೇಯಕ ಮಂಡನೆ ಮಾಡಿದೆ, export ನಲ್ಲಿ ಇನ್ನೂ ಹೆಚ್ಚಿನ, ಸರ್ಕಾರದ್ದು ಹೇಗೆ ಬೆಲೆ ಹೆಚ್ಚಿಗೆ ಆಗುತ್ತಿದೆ, 14

ದಿವಸಗಳಲ್ಲಿ payment ಮಾಡಬೇಕು. FRP ಮಾಡಲಿಕ್ಕೆ ಸಾಧ್ಯವಿಲ್ಲ ಅಂತಲ್ಲ. Fair Remunerative Price ಮಾಡಬೇಕೆಂದರೆ ಮುಕ್ತ ಮಾರುಕಟ್ಟೆಯಲ್ಲಿ...

(ಗೊಂದಲ)

ಶ್ರೀ ಈಶ್ವರ ಖಂಡ್ರೆ:– ಇವತ್ತು ಸಕ್ಕರೆ ಇದ್ದಂಥದ್ದನ್ನು ಮಾರಾಟ ಮಾಡಲೂಬಹುದು, ಅಥವಾ ಬ್ಯಾಂಕುಗಳಿಗೆ...

ಅಧ್ಯಕ್ಷರು:– ಇಲ್ಲಿ ಸ್ವಲ್ಪ ಕೇಳಿರಿ. ಇಲ್ಲಿ ಒಂದು ಕಾನೂನಿಗೆ ತಿದ್ದುಪಡಿ ತಂದಿದ್ದಾರೆ. ಅದರಲ್ಲಿ ಮುಖ್ಯವಾಗಿ Section-2 ಕ್ಕೆ ತಿದ್ದುಪಡಿ ತಂದಿದ್ದಾರೆ. ಒಂದು committee ಯನ್ನು ಮಾಡಿದ್ದಾರೆ. ಇನ್ನೊಂದು, ನಿರ್ಧಾರ ಮಾಡುವಾಗ ಏನೇನೆಲ್ಲ ಅನುಸರಿಸಬೇಕೆಂದು ಹೇಳಿ, 'ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ ಮಂಡಲಿಯು ಪರಿಗಣಿಸಬೇಕಾದ ಅಂಶಗಳು' ಎಂದು 4 ಆ ಯಲ್ಲಿ ತಂದಿದ್ದಾರೆ. ಇದೇ ವಿಶೇಷವಾದಂಥ ಮುಖ್ಯ ಅಂಶಗಳು. ಇದರ ಬಗ್ಗೆ ಹೇಳಿ.

ಶ್ರೀ ಈಶ್ವರ ಖಂಡ್ರೆ:– Gate cane ಮತ್ತು field cane ಏನಿದೆ, ಅದರಲ್ಲಿ ಯಾವುದೇ ತಾರತಮ್ಯ ಆಗದ ರೀತಿಯಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಿದ್ದಾರೆ.

ಅಧ್ಯಕ್ಷರು:– ಈ ವಿಧೇಯಕವನ್ನು ಸ್ವಾಗತ ಮಾಡುತ್ತೀರಾ ಅಥವಾ ವಿರೋಧ ಮಾಡುತ್ತೀರಾ?

ಶ್ರೀ ಈಶ್ವರ ಖಂಡ್ರೆ:– ಇದಕ್ಕೆ ನಾನು ಬೆಂಬಲ ಕೊಡುತ್ತೇನೆ. ಈ ಒಂದು ವಿಧೇಯಕಕ್ಕೆ ನನ್ನ ಬೆಂಬಲವಿದೆ. Correct ಆಗಿ ವಿಧೇಯಕ ತಂದಿದ್ದಾರೆ. ಹೆಚ್ಚಿನ ಕಬ್ಬಿನ ಬೆಲೆ ರೈತರಿಗೆ ಕೊಡುವ ನಿಟ್ಟಿನಲ್ಲಿ ಸಲಹೆಗಳನ್ನು ಕೊಟ್ಟು ಇನ್ನೂ ಉತ್ತಮ ರೀತಿಯಲ್ಲಿ ಹೆಚ್ಚಿಗೆ ಕೊಡುವಂತೆ, ಇವತ್ತು ಕೇಂದ್ರ ಸರ್ಕಾರದಲ್ಲಿದೆ, FRP ಜಾಸ್ತಿ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ಅದು ಬಿಟ್ಟು ಇಲ್ಲಿಂದಲೇ ಹೋರಾಟ ಮಾಡಿ ಕುಲಬಾನ್ ಸುತ್ತ ಕುಳ್ಳ ಇದ್ದ ಹಾಗೆ ಇಲ್ಲಿ ರೈತರು, ನಾವೆಲ್ಲಾ ಒಂದೇ. ಅವರ ಮಧ್ಯೆ ಬಿರುಕು ಹುಟ್ಟಿಸಿ

ಇವತ್ತು ಮತ್ತೆ ತಡವಾದರೆ, ವಿಳಂಬವಾದರೆ ಪುನಃ ರೈತರೇ suffer ಆಗುವುದು ಹೊರತು ಬೇರೆ ಯಾರೂ suffer ಆಗುವುದಿಲ್ಲ. ಕಾರ್ಖಾನೆಗಳಲ್ಲಿ ಅವ್ಯವಹಾರವಾದರೆ, ಅಕ್ರಮವಾದರೆ ಎಂದು ಇವರು ಹೇಳುತ್ತಿದ್ದಾರೆ. ಹೌದು, ಸರ್ಕಾರವಿದೆ, ಕಟ್ಟುನಿಟ್ಟಿನ ಕ್ರಮ ಜರುಗಿಸಿ, ತಪ್ಪು ಮಾಡಿದ್ದರೆ ಗಲ್ಲಿಗೇರಿಸಿ, 7 ವರ್ಷಗಳ ಕಾಲ ಜೈಲಿನಲ್ಲಿರುವಂಥ ಶಿಕ್ಷೆ ತರುವಂಥದ್ದನ್ನು ಮಾಡಿ. ಅಕ್ರಮ ಆಗುತ್ತದೆಂದು ಅಲ್ಲೂ ಇಲ್ಲೂ ಒಂದೇ ಎಂದು ಈ ತರಹ ಸಬೂಬು ಹೇಳುವುದು ಸರಿಯಲ್ಲ. ಈ ವಿಧೇಯಕಕ್ಕೆ ನನ್ನ ಸಂಪೂರ್ಣವಾದ ಬೆಂಬಲವಿದೆ. ಇದರಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಯಾರು ತಜ್ಞರಿದ್ದಾರೆ, ಅವರೇನಾದರೂ ಸಲಹೆಗಳನ್ನು ಕೊಟ್ಟರೆ ಅದನ್ನೂ ಇದರಲ್ಲಿ ಅಳವಡಿಸಿಕೊಂಡು ಜಾರಿಗೆ ತರಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಏನು ತಂದಿದ್ದಾರೆ ಅದರಲ್ಲಿ ಕೆಲವೊಂದನ್ನು ಬದಲಾವಣೆ ಮಾಡಬೇಕಾಗಿದೆ. ಕಳೆದ ಅಧಿವೇಶನದಲ್ಲಿ ಈ ವಿಧೇಯಕವನ್ನು ತಂದಿದ್ದರು. ಅದರಲ್ಲಿ ಸಾಕಷ್ಟು ತಪ್ಪು ತಡೆಗಳಿವೆ. Rate fix ಮಾಡುವುದು ಏನಿದೆ, ಕಳೆದ ಸಲ ಒಂದೇ ಸಲ fix ಮಾಡಿದ್ದರು. ಇನ್ನೂ ನಾವು ಕಬ್ಬು ಹಾಕಿಲ್ಲ. ಇನ್ನೂ ಸಕ್ಕರೆ ಯಾವ rate ಗೆ ಮಾರುತ್ತಾರೆ? ಎಲ್ಲಿ ಮಾರುತ್ತಾರೆ? ಅದೇನೂ ಗೊತ್ತಿಲ್ಲ. 2500 ರೂ. ಕೊಡಿ ಎಂದು ಹೇಳಿದರು. ಅದು ತಪ್ಪು. ಹಾಗಾಗಿ ಇವತ್ತು ಸರ್ಕಾರಕ್ಕೆ ಮತ್ತು ಕಾರ್ಖಾನೆಯವರಿಗೆ, ರೈತರಿಗೆ ಸಂಘರ್ಷ ನಡೆದಿದೆ. ಕಳೆದ ಸಲ ಏನು ಕಾನೂನು ತಂದರು, ಇದು ಚರ್ಚೆಯಾಗಿಲ್ಲ. ಚರ್ಚೆಯಾಗದೇ ಬಿಲ್ ಪಾಸ್ ಆಗಿದೆ. ತರಾತುರಿಯಲ್ಲಿ ಬಿಲ್ ಪಾಸ್ ಮಾಡಿದಿರಿ. ಇವಾಗ ಏನು ಸರ್ಕಾರ ಬಿಲ್ ತರುತ್ತಿದೆ ಇದರಲ್ಲಿ ಎರಡು ಹಂತದಲ್ಲಿ ಹಣ ಕೊಡುವಂಥದ್ದು ಇದೆ. ಮೊದಲು ಕಬ್ಬು ಹಾಕಿದ ತಕ್ಷಣ 14 ದಿವಸಗಳಲ್ಲಿ ಒಂದಿಷ್ಟು advance ಕೊಡಬೇಕು. ಆಮೇಲೆ 2–3 ತಿಂಗಳಾದಮೇಲೆ ಸಕ್ಕರೆ ಮಾರಾಟ ಆದ ಬಳಿಕ, molasses ಮಾರಾಟವಾದ ಬಳಿಕ, Bagasse ಮಾರಾಟವಾದ ಬಳಿಕ press mud ಮಾರಾಟವಾಗಬೇಕು. ಅದರಿಂದ ಏನು ಹಣ ಬರುತ್ತದೆ ಆ ಹಣವನ್ನು ಕೊನೆಯ ಕಂತು ಎಂದು

ಕೊಡಬೇಕು. ಮಹಾರಾಷ್ಟ್ರದಲ್ಲಿ ಇನ್ನೂ ಕಂತು ಇದೆ. ಆದರೆ, ಇವರು ಈಖಿಕ ಪ್ರಕಾರ ಮೊದಲು advance ಕೊಡಬೇಕು, ಆನಂತರ remaining 2ನೇ ಬಿಲ್ ಸಕ್ಕರೆ ಮಾರಾಟವಾಗಿ ದುಡ್ಡು ಬರುತ್ತದಲ್ಲ. ಅದರಲ್ಲಿ ಲೆಕ್ಕ ಮಾಡಿಕೊಡಬೇಕೆನ್ನುವ ದಿಶೆಯಿಂದ ಇದು ಮಾಡಿದ್ದಾರೆ. ಇದು ಸರಿ ಇದೆ. ಮೊದಲು ಸರ್ಕಾರ ಏನು ಮಾಡಿದೆ, ಒಂದೇ ಸಲ 2500 ರೂ.ನಂತೆ ಕೊಡಬೇಕೆಂದು ಹೇಳಿಬಿಟ್ಟರು. ಎಲ್ಲಿ ಕೊಡುವುದಕ್ಕಾಗುತ್ತದೆ?

ಅಧ್ಯಕ್ಷರು:– ಏಕೆ ಕೊಡುವುದಕ್ಕಾಗುವುದಿಲ್ಲ? ಮಾರುಕಟ್ಟೆಗೆ ಹೋಗಿ ಒಂದು ಕಿತ್ತಲೆ ಹಣ್ಣನ್ನು ತರುತ್ತೇನೆ, ನಾನು ಅಲ್ಲಿ ದುಡ್ಡು ಕೊಟ್ಟು ತೆಗೆದುಕೊಂಡು ಬರುವುದಿಲ್ಲವೇ?

ಶ್ರೀ ಸಿದ್ದು ಬಿ. ನ್ಯಾಮಗೌಡ:– ಅಲ್ಲಾ ಸರ್, sgar rate ಸಕ್ಕರೆ ಕಾರ್ಖಾನೆ ಪ್ರಾರಂಭವಾಗುವಾಗ ` 2600 ಇತ್ತು. ಇವತ್ತು 2900 ರೂ.ಇದೆ.

ಅಧ್ಯಕ್ಷರು:– ಅದು ಬೇರೆ ಮಾತು ರೀ. ಈಗ ಅಡಿಕೆ rate ಏರಿಕೆ ಆಗಿದೆ. ಕಾರ್ಖಾನೆ ಪ್ರಾರಂಭ ಮಾಡಿದ ಮೇಲೆ ಕಚ್ಚಾ ಸಾಮಾನನ್ನು ಖರೀದಿ ಮಾಡಿಕೊಳ್ಳಬೇಕು. ವ್ಯಾಪಾರ ಆಗುತ್ತದೋ, ಆಗುವುದಿಲ್ಲವೋ, ಲಾಭ ಬರುತ್ತದೋ ಇಲ್ಲವೋ ಅದು ಅವನ ಹಣೆಬರಹ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಅದಲ್ಲ ಸರ್. ನಾವು ಹೇಳುವುದು 2 ಹಂತದಲ್ಲಿ ಬಿಲ್ ಹೋಗಬೇಕು.

ಅಧ್ಯಕ್ಷರು:– ನೀವು ರೈತರು ಪರ, ಈ ಕಡೆಗೆ ಕಾರ್ಖಾನೆಯ ಪರವೂ ಇದ್ದ ಹಾಗೆ ಮಾತನಾಡುತ್ತಿದ್ದೀರಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಹೌದು, ಹಾಗೇ ಆಗಿದೆ ಸರ್.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಅಧ್ಯಕ್ಷರೇ ಇಲ್ಲಿ interested parties ಬಹಳ ಇದ್ದಾರೆ. ಇವರೆಲ್ಲ ಮಾತನಾಡುವವರು ಯಾರೆಂದರೆ interested ಪಾರ್ಟಿಗಳೇ. ಅದನ್ನು ಅರ್ಥಮಾಡಿಕೊಳ್ಳಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಇದು 2 ಹಂತದಲ್ಲಿ bill payment ಆಗಬೇಕು.

ಅಧ್ಯಕ್ಷರು:– ಈ bill ಬಗ್ಗೆ ಹೇಳಿ. ಈ bill ಅನ್ನು ಸ್ವಾಗತ ಮಾಡುವವರೋ, ವಿರೋಧ ಮಾಡುವವರೋ ಗೊತ್ತಾಗುತ್ತಿಲ್ಲ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಇದರಲ್ಲಿ ಏನು membership ಮಾಡಿದ್ದಾರೆ, 5 ಮಂದಿ ರೈತರು, 5 ಮಂದಿ ಕಾರ್ಖಾನೆಯವರು, 5 ಮಂದಿ Ministers ಎಂದು ಮಾಡಿದ್ದಾರೆ. ಮಹರಾಷ್ಟ್ರದಲ್ಲಿ ಏನು ಮಾಡಿದ್ದಾರೆಂದರೆ, ಯಾವ ಮಂತ್ರಿಗಳನ್ನೂ ಹಾಕಿಲ್ಲ. ಮಹರಾಷ್ಟ್ರದಲ್ಲಿ ಕೂಡ same bill ತಂದಿದ್ದಾರೆ. ಮಂತ್ರಿಗಳು ಇಲ್ಲ. ಅಲ್ಲಿ ಅಧಿಕಾರಿಗಳನ್ನೇ ಹಾಕಿದ್ದಾರೆ.

ಅಧ್ಯಕ್ಷರು:– ಈಗಲೂ ಇದರಲ್ಲಿ ಮಂತ್ರಿಗಳು ಇರಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದೆಲ್ಲ ಚರ್ಚೆ ಮಾಡಿದಮೇಲೆ ಇವರು ರೈತರ ಪರವೋ, ವಿರೋಧವೋ ಎಂದು ಗೊತ್ತಾಯಿತು. ರೈತರ ಪರವಾಗಿ ವಹಿಸಿಕೊಂಡೂ ಮಾತನಾಡುತ್ತೀರಿ, ರೈತರ ವಿರೋಧವಾಗಿ ವಹಿಸಿಕೊಂಡೂ ಮಾತನಾಡುತ್ತೀರಿ.

ಅಧ್ಯಕ್ಷರು:– ಅವರು ಹೇಳಲಿ ಬಿಡಿ. ನೀವೂ ಪೂರೈಸಿ. ಆಯಿತು ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ

(ಗೊಂದಲ)

ಶ್ರೀ ಈಶ್ವರ್ ಖಂಡ್ರೆ:- ರೈತರನ್ನೂ ಉಳಿಸಬೇಕಾಗುತ್ತದೆ, ಕಾರ್ಖಾನೆಯನ್ನೂ ಉಳಿಸಬೇಕಾಗುತ್ತದೆ. ರೈತರ ಪರ, ರೈತರ ವಿರೋಧ ಎನ್ನುವ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು:- ಆಯಿತು.

ಶ್ರೀ ಸಿದ್ದು ಬಿ. ನ್ಯಾಮಗೌಡ:- ನಮ್ಮ ಕಾರ್ಖಾನೆಯಲ್ಲಿ ....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಈ ಕಾರ್ಖಾನೆ ಮಾಲೀಕರು ಏನೇನು ಮಾತನಾಡಿದ್ದಾರೆ, ಯಾರ್‍ಯಾರಿದ್ದಾರೆ, ಸ್ವಲ್ಪ ಅವರು ರೈತರ ಪರವಾಗಿ ನಿಂತರೆ ಆಗುತ್ತದೆ. ಈ Bill ರೈತರ ಪರವಾಗಿದೆ. ಅದಕ್ಕೇ ಅವರು ಎರಡೂ ಕಡೆ ಮಾತನಾಡುತ್ತಿರುತ್ತಾರೆ.

(ಗೊಂದಲ)

ಅಧ್ಯಕ್ಷರು:- Minister ರವರೆ, ನಿಮ್ಮದೂ Factory ಇದೆಯೇ?

(ಗೊಂದಲ)

ಅಧ್ಯಕ್ಷರು:- ಆಯಿತು.

(ಗೊಂದಲ)

ಶ್ರೀ ಈಶ್ವರ್ ಖಂಡ್ರೆ:- ರಾಯರೆಡ್ಡಿಯವರಿಗೆ ಇದರ ಬಗ್ಗೆ ಗೊತ್ತಿಲ್ಲ.

ಅಧ್ಯಕ್ಷರು:- ಖಂಡ್ರೆಯವರೆ, ಸಾಕು.

ಶ್ರೀ ಈಶ್ವರ ಖಂಡ್ರೆ:- ಎರಡೂ ಕಡೆ ಮಾತನಾಡುವ ಪ್ರಶ್ನೆಯಿಲ್ಲ.

ಅಧ್ಯಕ್ಷರು:- ಬಿಡಿ, ನೀವು ಹೇಳಿದ್ದೀರಿ.

ಶ್ರೀ ಈಶ್ವರ ಖಂಡ್ರೆ:- ತಪ್ಪು ದಾರಿಗೆಳೆಯಬೇಡಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ಕಳೆದ ಸಲ reate ಏನು fix ಮಾಡಿದ್ದರು, ಉತ್ತರ ಕರ್ನಾಟಕಕ್ಕೆ ಒಂದು rate. . .

ಅಧ್ಯಕ್ಷರು:- ಈಗ ತಂದಿರುವ ತಿದ್ದುಪಡಿಯಲ್ಲಿ ಏನೇನು ನ್ಯೂನ್ಯತೆ ಇದೆ ಎನ್ನುವುದನ್ನು ಹೇಳಿ.

ಶ್ರೀ ಸಿದ್ದು ಬಿ. ನ್ಯಾಮಗೌಡ:- ತೊಂದರೆ ಇದೆ ಸಾರ್. ಅದಕ್ಕೋಸ್ಕರ ಈಗೇನು gate cane ಮಾಡಿದ್ದಾರಲ್ಲ, gate cane ಮಾಡಲಿ, ಉತ್ತರ ಕರ್ನಾಟಕಕ್ಕೆ ಅಥವಾ ದಕ್ಷಿಣ ಕರ್ನಾಟಕಕ್ಕೆ gate cane ಇರಲಿ ಅಥವಾ field cane ಇರಲಿ, ಯಾವುದಾದರೊಂದು ಮಾಡಬೇಕು. Field ಅನ್ನು ತೆಗೆದಾದರೂ ಆಗಲಿ ಅಥವಾ gate cane ಕೊಡುವುದಾಗಲಿ, ಈಗ ಅವರು gate cane ಮಾಡಿದ್ದಾರೆ. ಆಗ ಉತ್ತರ ಕರ್ನಾಟಕದವರಿಗೆ, ಇದರಿಂದ ತೊಂದರೆಯಾಗುತ್ತದೆಂದು ಹೇಳಿದರು. ನಿಜ, ತೊಂದರೆಯಾಗುತ್ತದೆ, ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಮುಂಚಿನಿಂದ ಕಾರ್ಖಾನೆಯವರೇ ಕಬ್ಬು ತರುತ್ತಾರೆ. ಅದು ರೂಢಿ ಇದೆ. ಹಾಗಿದ್ದರೆ, ದಕ್ಷಿಣ ಕರ್ನಾಟಕದವರೂ ಕೂಡ field ನಿಂದ ತರುವುದು ಮಾಡಲಿ. ಯಾವುದಾದರೊಂದು ಮಾಡಬೇಕು. ಆ ಕಡೆ ಒಂದು ರೇಟ್, ಈ ಕಡೆ ಒಂದು ರೇಟ್, ಅವರಿಗೆ field ನಿಂದ, ನಮಗೆ gate ನಿಂದ ಅಂದರೆ ಹೇಗಾಗುತ್ತದೆ?

ಅಧ್ಯಕ್ಷರು:- ಅದು yield ಮೇಲೆ ಅಲ್ಲವೇ?

ಶ್ರೀ ಸಿದ್ದು ಬಿ. ನ್ಯಾಮಗೌಡ:- Yield ನಲ್ಲೂ ಕೂಡ market rate ಇದೆ. ಅಲ್ಲಿ recovery ಕಡಿಮೆ ಇದ್ದರೆ, ಮಂಡ್ಯದಲ್ಲಿ ಸಕ್ಕರೆ ಬೆಳೆದರೆ ಬೆಂಗಳೂರಿಗೆ ಕಳುಹಿಸಿದರೆ, ಒಂದು ಚೀಲಕ್ಕೆ 50 ರೂ. ಆಗುತ್ತದೆ. ಬೆಂಗಳೂರು, ಜಮಖಂಡಿಯಿಂದ ಅಥವಾ ಬಿಜಾಪುರದಿಂದ ಕಳುಹಿಸಿದರೆ 150 ರೂ. ಹೋಗುತ್ತದೆ. Transporation cost ಆಗುತ್ತದೆ.

ಅಧ್ಯಕ್ಷರು:- Yield ಬರುವುದು, ಆಯಾಯ ಪ್ರದೇಶದ ಮಣ್ಣಿನ ಗುಣದ ಮೇಲೆ. ನಿಮ್ಮ ಮಣ್ಣಿನ ಗುಣ ಚೆನ್ನಾಗಿದ್ದರೆ yield ಜಾಸ್ತಿ ಬರುತ್ತದೆ, ಇಲ್ಲಿ ಕಡಿಮೆ ಬರುತ್ತದೆ. ಅದಕ್ಕೆ ನಾನು ಕೇಳಿದೆ, yield ಅನ್ನು recovery

ಯನ್ನು determine ಮಾಡತಕ್ಕಂಥ agency ಏನು? Formula ಏನು? ಅದಕ್ಕೆ ಬೇಕಾದರೆ specific ಆಗಿ ಮಾಡಿ.

(ಗೊಂದಲ)

ಶ್ರೀ ಈಶ್ವರ ಖಂಡ್ರೆ:– Recovery ಆಧಾರಿತ ಬೆಲೆ ನಿಗದಿಯಾಗಬೇಕು.

(ಗೊಂದಲ)

ಶ್ರೀ ಈಶ್ವರ ಖಂಡ್ರೆ:– Co-generation ಉತ್ಪಾದನೆಯಾಗಬೇಕು.

((ಗೊಂದಲ)

ಅಧ್ಯಕ್ಷರು:– Recovery ನಿರ್ಧಾರ ಮಾಡುವವರಾರು? ಹೇಗೆ?

ಶ್ರೀ ಈಶ್ವರ ಖಂಡ್ರೆ:– Recovery ಕಾರ್ಖಾನೆಯಲ್ಲೇ ಬರುತ್ತದೆ. 5 ವರ್ಷ, 3 ವರ್ಷದ load ನೋಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಆಯಿತು, ನೋಡೋಣ, ತಾಳಿ, ಹೇಳಿ.

ಶ್ರೀ ಈಶ್ವರ ಖಂಡ್ರೆ:– ಅದರಲ್ಲಿ ಹೆಚ್ಚುಕಡಿಮೆ ಇದ್ದರೆ ಸರ್ಕಾರ ಕ್ರಮ ತೆಗೆದುಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರು:– ಆಯಿತು.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಬೆಲೆ ನಿರ್ಧಾರ ಮಾಡುವುದು recovery ಆಧಾರದ ಮೇಲೆ ಆಗಬೇಕು. ಈಗೇನು Committee ಮಾಡಿದ್ದಾರಲ್ಲ, ಆ committee ಯಲ್ಲಿ ಒಬ್ಬರು chartered Accountant ಸೇರಿಸಬೇಕು.

ಅಧ್ಯಕ್ಷರು:– Chartered Accountant ಅವರನ್ನೇ?

ಶ್ರೀ ಸಿದ್ದು ಬಿ. ನ್ಯಾಮಗೌಡ:– ಹೌದು. ಏಕೆಂದರೆ, ಯಾವ್ಯಾವ ಕಾರ್ಖಾನೆಯವರು ಏನೇನು ಮಾಡಿದ್ದಾರೆ ಎಂಬುದೆಲ್ಲಾ ಗೊತ್ತಾಗುತ್ತದೆ.

ಅಧ್ಯಕ್ಷರು:– ಆಯಿತು.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಅವರನ್ನು ಸೇರಿಸಿದರೆ ಸ್ವಲ್ಪ ಅನುಕೂಲವಾಗುತ್ತದೆ. ಆಮೇಲೆ ಈ ಕಮಿಟಿಗೆ judicial power ಕೊಟ್ಟಿದ್ದಾರೆ. ಅದಕ್ಕೋಸ್ಕರ ಯಾರಾದರೂ Retired Judge ಅನ್ನು ನೇಮಿಸಿದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು:– Retired Judgeಗೆ 5 ಕೊಟ್ಟರೆ ಇತ್ತಲಾಗೆ, 6 ಕೊಟ್ಟರೆ ಅತ್ತಲಾಗೆ !

(ಗೊಂದಲ)

ಅಧ್ಯಕ್ಷರು:– ಆಯಿತು. ಏನು ಹೇಳಿ?

ಶ್ರೀ ಪಿ. ರಾಜೀವ್ (ಕುಡಚಿ):– ಮಾನ್ಯ ಸಭಾಧ್ಯಕ್ಷರೆ, ಈಗೇನು ತಿದ್ದುಪಡಿ ವಿಧೇಯಕ ತಂದಿದ್ದಾರೆ, ಕಬ್ಬು ಬೆಳೆಗಾರರ ಪಾಲಿಗೆ ಇದೊಂದು ಮರಣ ಶಾಸನ ಎಂದು ಹೇಳುತ್ತೇನೆ. ಏಕೆಂದರೆ, 80% ಕಬ್ಬು ಬೆಳೆಗಾರರು ಇರುವಂಥದ್ದು ಉತ್ತರ ಕರ್ನಾಟಕದಲ್ಲಿ. ಅವರು ex-field ನಲ್ಲಿ ಇವತ್ತಿಗೂ ಮಾರುತ್ತಿದ್ದಾರೆ, ಇವರು ex-gate ಮಾಡಲಿಕ್ಕೆ ಹೋಗುತ್ತಿದ್ದಾರೆ. ಅದಕ್ಕೋಸ್ಕರ ಇದು ಮರಣ ಶಾಸನ. ಈಗ ನೇರವಾಗಿ point to point ಹೇಳುತ್ತೇನೆ. ಎರಡನೇ ಪ್ರಕರಣದ ತಿದ್ದುಪಡಿಯಲ್ಲಿ–ಕಾರ್ಖಾನೆ ದ್ವಾರದಲ್ಲಿ ಒಪ್ಪಿಸಲಾದ ಕಬ್ಬಿಗಾಗಿ ಕಾರ್ಖಾನೆಯ ದ್ವಾರಕ್ಕೆ ತರುವಂಥದ್ದು ಅದು ರೈತನ ಕೆಲಸ ಆಗಬಾರದು. ಏಕೆಂದರೆ, ಕಬ್ಬು ಇಳುವರಿ ಹೆಚ್ಚಿಸುವ ತಾಂತ್ರಿಕತೆಗಳ ಮಾರ್ಗಸೂಚಿ. ಇದು ಕರ್ನಾಟಕ ಸರ್ಕಾರದ ಸಂಸ್ಥೆ, ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಹೊರಡಿಸಿರುವಂಥ magazine ನಲ್ಲಿ ಬಂದಿರುವಂಥ ಸಂಶೋಧನೆ. ಇವರು ಒಂದು ಅಂಶ ಬರೆಯುತ್ತಾರೆ. ಕಟಾವಿನ ನಂತರ ಕಬ್ಬಿನ ರಸದಲ್ಲಿ

ಆಗುವ ಹಾನಿಗಳು. ಅಂದರೆ, recovery ನಾಶವಾಗಲಿಕ್ಕೆ ಶುರುವಾಗುತ್ತದೆ. ಯಾವಾಗ ಕಟಾವು ಆಗುತ್ತದೆ, ಆಗಿನಿಂದ ನಾಶವಾಗಲಿಕ್ಕೆ ಶುರುವಾಗುತ್ತದೆ. ಅದು ಎಲ್ಲಿಯವರೆಗೂ ಆಗುತ್ತದೆಂದರೆ, ಇಲ್ಲಿ ಬರೆಯುತ್ತಾರೆ, ಕಬ್ಬು ಕಟಾವಿನ ನಂತರ ನುರಿಸಲು ತಡ ಮಡಿದರೆ ತೇವಾಂಶ ಮತ್ತು ಸಕ್ಕರೆ ಅಂಶ ಕಡಿಮೆಯಾಗುವುದಲ್ಲದೆ, leuconostoc ಎಂಬ bacteria ವು ಸಕ್ಕರೆ ಅಂಶದ ಪ್ರಮಾಣವನ್ನು ಗಣನೀಯವಾಗಿ ಕಡಿಮೆಗೊಳಿಸುತ್ತದೆ. ಇದು dextron ನಂಥ ಪದಾರ್ಥಗಳನ್ನು ಉತ್ಪಾದಿಸಿ, ಸಕ್ಕರೆ ತಯಾರಿಸುವ ಪ್ರಕ್ರಿಯೆಗೆ ತೊಂದರೆ ಮಾಡಿ ಸಕ್ಕರೆ ಹರಳುಗಳನ್ನು ನಿರ್ಮಿಸುವ ಪ್ರಮಾಣವನ್ನು ಕಡಿಮೆಗೊಳಿಸುತ್ತದೆ. ಕಬ್ಬಿನ ಕಟಾವಿನ ನಂತರ ಆಗುವ ಹಾನಿಗಳು ಮಾರ್ಚ್ ನಂತರ ಅತೀ ಹೆಚ್ಚಾಗಿರುತ್ತದೆ. ಈ ಅವಧಿಯಲ್ಲಿ invertage ಕಿಣ್ವದ ಚಟುವಟಿಕೆ ಹೆಚ್ಚಾಗಿ ಸಕ್ಕರೆ ಅಂಶ ಕಡಿಮೆಯಾಗಿ reducing sugars ಉತ್ಪಾದನೆ ಹೆಚ್ಚಾಗುತ್ತದೆ. ಮುಂದೆ ಹಾಗೇ ಬರುತ್ತದೆ. ಕಬ್ಬಿನ ಕಟಾವು ಮತ್ತು ಸಾಗಾಣಿಕೆಯ ವಿಭಾಗವು ಆ division, ಸಕ್ಕರೆ ಅಂಶವನ್ನು ಹೆಚ್ಚಿಸಲು ಅತೀಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಕಬ್ಬಿನ ಕಟಾವು ಮಾಡುವ ಕೂಲಿಕಾರರಿಂದ ಹಿಡಿದು ಕಬ್ಬು ಸಾಗಾಣಿಕೆ ಮಾಡುವ ವಾಹನ ಮತ್ತು ಚಾಲಕರ ಮೇಲೆ ಕಾರ್ಖಾನೆಯ ಸಿಬ್ಬಂದಿಗೆ, I repeat, ಕಾರ್ಖಾನೆಯ ಸಿಬ್ಬಂದಿಗೆ ಇರುವ ಹತೋಟಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಕಬ್ಬನ್ನು ಕಾರ್ಖಾನೆಗೆ ಸಾಗಿಸಲು ಅವಲಂಬಿತವಾಗಿರುತ್ತದೆ. ಇಲ್ಲಿ research ಹೇಳುತ್ತದೆ. ಅಂದರೆ, ಕಾರ್ಖಾನೆ ಆ ಕಟಾವಿನ ಮೇಲೆ ಎಷ್ಟು control ಇರುತ್ತದೆ, ಅದರ ಮೇಲೆ recovery ಹೆಚ್ಚಾಗುತ್ತದೆ. ಇದು ಸಂಶೋಧನೆ ಮಾಡಿರುವಂಥದ್ದು. ಆಮೇಲೆ ಕಬ್ಬು ಕಟಾವಿನಿಂದ ಹಿಡಿದು ನುರಿಸುವವರೆಗೆ...

ಅಧ್ಯಕ್ಷರು:– ಗೊತ್ತಾಯಿತು ಬಿಡಿ. ಈಗ ಏನು ಮಾಡಬೇಕು ಹೇಳಿ.

ಶ್ರೀ ಪಿ. ರಾಜೀವ್:– ಕಟಾವು ಮಾಡುವಂಥದ್ದನ್ನು ನಿರ್ಧಾರ ಮಾಡಬೇಕಾಗಿರುವುದು ಸಕ್ಕರೆ ಕಾರ್ಖಾನೆ. ಯಾವಾಗ ರೈತ ಕಟಾವು ಮಡುತ್ತಾನೆ, ಆಗ ರೈತನಿಗೆ loss ಆಗುತ್ತದೆ. ಇವತ್ತು ದಕ್ಷಿಣ ಕರ್ನಾಟಕದಲ್ಲಿ ಬಹಳಷ್ಟು ಕಡಿಮೆ loss ಆಗುತ್ತದೆ, factory loss ಆಗುತ್ತಿವೆ ಎಂದರೆ ಅವರಿಗೆ

ಈ direction ಇಲ್ಲದೇ ಇರುವುದಕ್ಕೆ ಅವರಿಗೆ ಆ ಬೆಲೆ ಕೊಡಲಿಕ್ಕೆ ಆಗುತ್ತಿಲ್ಲ. ಅಷ್ಟು recovery ಪಡೆಯಲಿಕ್ಕೆ ಆಗುತ್ತಿಲ್ಲ. ಅಲ್ಲಿ ಸಂಶೋಧನೆ ಮಾಡಿ. ಇನ್ನೊಂದು ಅಂಶ ಹೇಳಬಯಸುತ್ತೇನೆ. Essential Commodities Amendment and Validation Act 2009., ಇದರಲ್ಲಿ ಬರುತ್ತದೆ. Manufacturing cost of sugar means the net cost incurred on conversion of sugar cane into sugar including net cost of transportation of sugar cane from the purchase center to the factory gate to the extent it is borne by the producer. Who is the producer? Farmer is the producer ಎಂದು ಹೇಳಬಹುದು. ಇಲ್ಲಿಯೇ ಮುಂದೆ ಹೇಳುತ್ತಾರೆ. Producer means a person carrying on the business of manufacturing sugar. ಅಂದರೆ ಇಲ್ಲಿ ಕಟಾವು ಮಾಡಿ factory ಗೆ ಕಳುಹಿಸುವಂಥದ್ದು, direction ಇರುವಂಥದ್ದು Essential Commodities Act clear ಆಗಿ ಹೇಳುತ್ತದೆ. It is the duty of the factory. Essential commodities Act ಅನ್ನು ಇದು violate ಮಾಡುತ್ತಿದೆ. ಅದಕ್ಕಾಗಿ ಕಾರ್ಖಾನೆಯ gate ನಲ್ಲಿ ಅದನ್ನು ತರಬೇಕು. ಇದನ್ನು ನಾವು ತರಲಿಲ್ಲವೆಂದು ಹೇಳಿದರೆ ಬಹುಶಃ ರೈತರಿಗೆ ಬಹಳ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಈ ಭಾಗದಲ್ಲಿ ಕಡಿಮೆ ಇರುತ್ತದೆ, ಅಲ್ಲಿ tractor, ಕಟಾವು ಮಾಡುವಂಥವರು ಎಲ್ಲರೂ ಇರಬೇಕು.

ಅಧ್ಯಕ್ಷರು:– ಆಯಿತು, ಗೊತ್ತಾಯಿತು, ಬ್ರಿಡ್ರಿ.

ಶ್ರೀ ಪಿ. ರಾಜೀವ್:– ಇನ್ನು ಎರಡನೇ ಅಂಶ, ಮುಂದಿನ ಪಾಯಿಂಟ್‌ಗೂ ಬರುತ್ತೇನೆ. ಏನೇನು ತಪ್ಪುಗಳಿವೆ ಎಂದು ಹೇಳುತ್ತೇನೆ. "ಜುಲೈ ಮೊದಲನೇ ದಿನದಿಂದ ಪ್ರಾರಂಭವಾಗಿ ಮುಂಬರುವ ಜೂನ್ 30 ಕ್ಕೆ ಕೊನೆಗೊಳ್ಳುವ ವರ್ಷ, ಇದು sugar cane year ಅಲ್ಲವೇ ಅಲ್ಲ. Scientific ಆಗಿ ಇದು ಹೇಳುವಂಥದ್ದು October ನಿಂದ ಪ್ರಾರಂಭವಾಗಿ September ಗೆ ಕೊನೆಯಾಗಬೇಕು. ಇಲ್ಲಿ ಇದೇ ಕಾನೂನಿನಲ್ಲಿ 'ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ' ಎಂದು ಹೇಳುತ್ತಾರೆ. ಇದೇ ತಿದ್ದುಪಡಿಯಲ್ಲಿ ಮೊದಲು

'ಕಬ್ಬಿನ ನ್ಯಾಯ ಮತ್ತು ಪರಿಶ್ರಮ ಬೆಲೆ FRP ಆಧಾರದ ಮೇಲೆ ಬೆಲೆ ಕೊಡುತ್ತೇವೆ' ಎಂದು ಹೇಳುತ್ತಾರೆ. ಇಲ್ಲಿ ಬಂದು 'ಆದಾಯ ಹಂಚಿಕೆ ಸೂತ್ರ' ಎಂದು ಹೇಳುತ್ತಾರೆ. ಅಂದರೆ ಇಲ್ಲಿ FRP ಪ್ರಕಾರ, ಇಲ್ಲಿ revenue sharing ಪ್ರಕಾರ ಬೆಲೆ ಕೊಡುತ್ತೇವೆಂದು ಹೇಳುತ್ತಾರೆ. ಎರಡೂ ಕೂಡ confusion ನಲ್ಲಿ ಇದೆ. FRP ಬರುವಂಥದ್ದು recovery ಮೇಲೆ. ಇಲ್ಲಿ revenue sharing ಕೊಡುತ್ತೇವೆಂದರೆ, ಎಲ್ಲಾ ಲಾಭವನ್ನು ಲೆಕ್ಕ ಹಾಕಿ ರೈತರಿಗೆ ಕೊಡುತ್ತೇವೆ ಎನ್ನುವಂಥದ್ದು.

ಶ್ರೀ ಪಿ. ರಾಜೀವ್:– ಬಹಳ ಪ್ರಮುಖವಾಗಿ ತಿದ್ದುಪಡಿಯಲ್ಲಿರುವ ದೋಷ, 8 ನೇ ಪ್ರಕರಣದ ತಿದ್ದುಪಡಿ. ಇಲ್ಲಿ "ಕಬ್ಬಿನ ಖರೀದಿ ಹಾಗೂ ಸರಬರಾಜುಗೆ ಸಂಬಂಧಿಸಿದ ಎಲ್ಲಾ ವ್ಯವಹಾರ ಮತ್ತು ಗುತ್ತಿಗೆಗಳನ್ನು ಅಂಕಿಕೃತ ಡಿಜಿಟಲೈಜ್ ಮೆಟ್ರಿಕ್ ಪದ್ದತಿ ಮತ್ತು ತೂಕಗಳು...,"

ಅಧ್ಯಕ್ಷರು:– ಈ ತಿದ್ದುಪಡಿಯ ಅವಶ್ಯಕತೆ ಇದೆಯೆ?

ಶ್ರೀ ಪಿ. ರಾಜೀವ್:– ಸನ್ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಹೇಳಿದ್ದು ಬಹಳ ಮುಖ್ಯವಾದ ಅಂಶ. ರಿಕವರಿ ಮೇಲೆ ಬೆಲೆ ಕೊಟ್ಟಾಗ ಮಾತ್ರ ನ್ಯಾಯ ಸಿಗುತ್ತದೆ ಎಂದರು. ಇಲ್ಲಿ ವೈಜ್ಞಾನಿಕ ರಿಕವರಿ ಬಗ್ಗೆ ಇಲ್ಲ, ತೂಕದ ಬಗ್ಗೆ ಮಾತ್ರ ಇದೆ. ನಾನು ಒತ್ತಾಯಿಸುವುದೇನೆಂದರೆ, computerized recovery ಮತ್ತು ತೂಕ ಒಟ್ಟಿಗೆ ತೋರಿಸತಕ್ಕಂಥದ್ದನ್ನು ಮಾಡಬೇಕು.

ಅಧ್ಯಕ್ಷರು:– ವೈಜ್ಞಾನಿಕ ರಿಕವರಿ ಎಂದರೆ ಕೆಲವರು experts ಇರುತ್ತಾರೆ ಅವರು ಎಲ್ಲಾ ಕಡೆ ಓಡಾಟ ಮಾಡಿ ಅದಕ್ಕೊಂದು ವಿಧಾನ ಕಂಡು ಹಿಡಿದು ಹೇಗೆ ಮಾಡಬೇಕೆಂದು ಮಾಡಿರುತ್ತಾರೆ. ಇಡೀ ಬೆಳೆದಂಥ ಬೆಳೆಯನ್ನು ಫ್ಯಾಕ್ಟರಿಯಲ್ಲಿ crush ಮಾಡಿ ಮಾಡುವುದೇ? Sample ತೆಗೆದು ಅದರಿಂದ ಮಾಡಿರುತ್ತಾರೆ.

ಶ್ರೀ ಪಿ. ರಾಜೀವ್ :– ಈಗ ಎಂತೆಂಥ instruments ಬಂದಿವೆ. Factory boy ಬಂದು ಅವನು sugae cane cut ಮಾಡುವಾಗ ಅವನು ಪ್ರತಿ

ಕಬ್ಬಿನ intake ನೋಡಿ recovery ಹೇಳುತ್ತಾರೆ. ಅಷ್ಟು technology ಬಂದಿದೆ. ಆ ನಂತರ..

ಅಧ್ಯಕ್ಷರು:– ರೀ ಸ್ವಾಮಿ, 9 ಗಂಟೆಯಾಯಿತು ಬೇಗ ಮುಗಿಸಿ.

ಶ್ರೀ ಪಿ. ರಾಜೀವ್:– ಕೊನೆಯದಾಗಿ ಒಂದೇ ಅಂಶ ಹೇಳುತ್ತೇನೆ. ಇವರು ರಿಕವರಿ ಆಧಾರದ ಮೇಲೆ, FRP ಮೇಲೆ rate ಕೊಡುತ್ತೇವೆ ಎನ್ನುತ್ತಾರೆ. ಬಹಳ ಮುಖ್ಯವಾದ ಅಂಶ. 2009 ರಲ್ಲಿ FRP ` 1,800/– ಇತ್ತು, ಆಗ ರೈತರಿಗೆ ಸಿಕ್ಕಿದ್ದು 1,600/– ರೂಪಾಯಿ.

ಅಧ್ಯಕ್ಷರು:– ಈಗ recovery basics ಹೇಳಿದ್ದಾರೆ, recovery ಗೆ ಒಂದು procedure, formula ಇಟ್ಟುಕೊಂಡಿದ್ದಾರೆ.

ಶ್ರೀ ಪಿ. ರಾಜೀವ್:– FRP rate is the minimum support price. ಆ price ಮೇಲೆ ಕೊಡಬೇಕೆಂದೂ ಎಲ್ಲೂ ಇಲ್ಲ.

ಅಧ್ಯಕ್ಷರು:– ನೀವು ಅವರು ಒಪ್ಪಂದ ಮಾಡಿಕೊಂಡಿದ್ದು.

ಶ್ರೀ ಪಿ. ರಾಜೀವ್:– ಕೇಂದ್ರ ಸರ್ಕಾರ ಘೋಷಣೆ ಮಾಡುವುದು FRP minimum ಅನ್ನು. ನಾನು ಅದನ್ನೇ ಹೇಳುತ್ತಿರುವುದು. 2013 ರಲ್ಲಿ FRP ಘೋಷಣೆಯಾಗಿದ್ದು ` 1,700/– factory ಯವರು ಕೊಟ್ಟಿದ್ದು ರೂ 2,500/– ಈಗ ಇವರು ಈ ತಿದ್ದುಪಡಿ ತಂದು ಏನು ಮಾಡುತ್ತಿದ್ದಾರೆ, FRP ` 2,100 ಘೋಷಣೆಯಾಯಿತು ಎಂದರೆ ಅಷ್ಟೇ ದುಡ್ಡು ಕೊಡಬೇಕೆನ್ನುತ್ತಿದ್ದಾರೆ. ಅಂದರೆ, ಇದು factoryಯ ಪರವಾಗಿದೆ. ಅದ್ದರಿಂದ, ಮಾನ್ಯ ಸಚಿವರಿಗೆ ಎಲ್ಲಾ ಕಬ್ಬು ಬೆಳೆಗಾರರ ಪರವಾಗಿ ನಾನು ಕೈ ಮುಗಿದು ತಮ್ಮ ಮೂಲಕ ಮನವಿ ಮಾಡುತ್ತೇನೆ, ಇದು ರೈತರ ಪರವಾಗಿಲ್ಲ, ಈ ತಿದ್ದುಪಡಿ ವಿಧೆಯಕವನ್ನು ಮಾಡುವುದು ಸರಿಯಲ್ಲವೆಂದು ನಾನು ಒತ್ತಾಯ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಈಗ ನಾನು adjourn ಮಾಡಿ ಹೋಗಿಬಿಡುತ್ತೇನಷ್ಟೆ. 9–15 ಆಗಿದೆ, ಇನ್ನೂ ನಾವು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ?

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:– ಎರಡು ನಿಮಿಷ ನನಗೆ ಅವಕಾಶ ಕೊಡಿ.

ಅಧ್ಯಕ್ಷರು:– ಸಾಕು ಬಿಡಿ ಪುಟ್ಟಣ್ಣಯ್ಯ ಏನು ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):– ಮಾನ್ಯ ಅಧ್ಯಕ್ಷರೆ, ಬಿಲ್‌ನಲ್ಲಿರುವ ಅಂಶಗಳು ಯಾವುದು ಸರಿ ಯಾವುದು ಸರಿಯಿಲ್ಲ ಅಷ್ಟೆ ಚರ್ಚೆ. ಕಬ್ಬಿನ ರಿಕವರಿ ಮಾಡುವ ವಿಚಾರ ನಾವು ಇವರ ಹತ್ತಿರ ಮಾತನಾಡುವ ಅವಶ್ಯಕತೆ ಇಲ್ಲ. FRP ಎಂದರೆ, minimum remunerative price ಎನ್ನುವ ಉದ್ದೇಶದಿಂದ ಅದಕ್ಕಿಂತ ಕಡಿಮೆ ಕೊಡಬಾರದು ಎಂದು ಕೇಂದ್ರ ಸರ್ಕಾರ ಕಾನೂನು ಮಾಡಿದೆ. ಇವರು ತರುತ್ತಿರುವ ಕಾಯಿದೆ SAP. State Advisory price.

ಅಧ್ಯಕ್ಷರು:– ಅಂದರೆ ಅದಕ್ಕೆ ವಿರುದ್ಧವಾಗಿದೆಯೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಇಲ್ಲ. ಆ ರಾಜ್ಯದಲ್ಲಿರತಕ್ಕಂತ ಸಕ್ಕರೆ ಉತ್ಪಾದನೆ ಮತ್ತು ಇಳುವರಿ ಎಲ್ಲಾ ಉಪ ಉತ್ಪನ್ನ ಘಟಕಗಳನ್ನು ಪರಿಗಣಿಸಿ ಆ ಸಮಿತಿ ರಚನೆಯಾಗಿರುವುದು State Advisory price ಎಂದು declare ಮಾಡಿತು. ಇದು FRP ಇರುವುದು, ಕೇವಲ ಸಕ್ಕರೆ ಮೇಲೆ ಮಾತ್ರ ಅದಕ್ಕೆ ಬೆಲೆ ನಿಗದಿ ಮಾಡುವ ಅಧಿಕಾರ ಇರುವುದು. ಉಪ ಉತ್ಪನ್ನಗಳ ಘಟಕವನ್ನು ಅದಕ್ಕೆ ಸೇರಿಸಿಲ್ಲ. ಆದ್ದರಿಂದ, SAP ಕಾಯಿದೆಯನ್ನು introduce ಮಾಡುವುದರಲ್ಲಿ ಒಂದು ಏನು ಬದಲಾವಣೆ ಮಾಡಬೇಕೆಂದರೆ, ಅವರೆಲ್ಲರೂ ಮಾತನಾಡುತ್ತಿರುವುದು ` 2,100 ನ್ನು 9% recovery. ಏಕೆಂದರೆ, ಹಿಂದೆ ಇದ್ದದ್ದು SAP ಯಲ್ಲಿ 9% ಗೆ ಇದ್ದದ್ದು. ಈಗ 9.5% ಮಾಡಿದ್ದಾರೆ. 9% recovery ಆಧಾರದ ಮೇಲೆ ` 2,100 ex-field ರಲ್ಲಿ ಕೊಡಬೇಕು. ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕ ಎರಡಕ್ಕೂ ಒಂದೇ ಕಾನೂನು ಮಾಡಬೇಕು.

ಎರಡೂ ಕಡೆಯೂ ex-field ಕೊಡಬೇಕು. ಪದೇ ಪದೇ ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕ ಬೇರೆ ಬೇರೆ ಎಂದು ಮಾತನಾಡುವುದು ಬೇಡ. ಎರಡೂ ಕಡೆ ` 2,100/– ಮಾಡತಕ್ಕಂಥ ಕೆಲಸವನ್ನು ನೀವು ಈ ಕಾಯಿದೆಯಲ್ಲಿ ಸೇರಿಸಬೇಕು. ಮೂರನೆಯದು ನಿಜಲಿಂಗಪ್ಪ ಎಂದೇನು ತಾವು ಬರೆದಿದ್ದೀರಿ, ಅದನ್ನು ದಯವಿಟ್ಟು ತಳಿತಜ್ಞರು ಯಾರನ್ನಾದರೂ ಒಬ್ಬನನ್ನು ಸೇರಿಸಬೇಕು. ಇದರಲ್ಲಿ ಒಂದು ತಿದ್ದುಪಡಿ ಮಾಡಬೇಕು. ತಳಿಜ್ಞಾನ, ನಮ್ಮಲ್ಲಿ ಏನಾಗಿದೆ ಎಂದರೆ, ತಳಿ ಒಂದರಿಂದಲೇ ಇಂದು ಇಷ್ಟೊಂದು ವಿಚಾರ ಚರ್ಚೆಯಾಗುತ್ತಿರುವುದು. ನಮಗೆ ಸಮಸ್ಯೆ ಇರುವುದು ಅದೇ. ಸಮಾನವಾಗಿ ಇದ್ದಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಸಕ್ಕರೆಗೆ ಸ್ಥಿರವಾದ ಬೆಲೆ ಇಲ್ಲ ಮತ್ತು ತಳಿಯಲ್ಲಿ ವ್ಯತ್ಯಾಸವಿದೆ, recovery ನಲ್ಲಿ ಇದರಿಂದ ಈ problem face ಮಾಡುತ್ತೇವೆ. ಅದ್ದರಿಂದ, ತಾವು ತಳಿ ಬಗ್ಗೆ ಒಬ್ಬ ತಜ್ಞರನ್ನು ಸೇರಿಸಿಕೊಳ್ಳಿ. ಇನ್ನೊಂದು ನಾನು ನಿಮಗೆ ಏನು ಹೇಳುತ್ತೇನೆಂದರೆ, ಒಬ್ಬ ಕಾರ್ಖಾನೆ ನಡೆಸಿ ಬಹಳ ಅನುಭವ ಇದ್ದು ನಿವೃತ್ತಿಯಾದವನನ್ನು ಸೇರಿಸಿಕೊಳ್ಳಿ. ಬೇಕಾದರೆ ನಾನು ನಿಮಗೆ ಒಬ್ಬರ ಹೆಸರು ಹೇಳುತ್ತೇನೆ, ಅವರನ್ನು ಸೇರಿಸಿಕೊಂಡರೆ ತಪ್ಪಿಲ್ಲ. ಬನ್ನಾರಿಯಮ್ಮ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿರತಕ್ಕಂಥ ನಾರಾಯಣ ಎನ್ನುವ ಒಬ್ಬ ವ್ಯಕ್ತಿ ಇದ್ದಾನೆ, ಅವನನ್ನು ನೀವು ಸೇರಿಸಿಕೊಂಡರೆ, ಇಡೀ ಕಾರ್ಖಾನೆಯ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಕೊಡುವ ಶಕ್ತಿ ಇದೆ. ಬೇಕಾದರೆ ಅಂಥವನನ್ನು ಸೇರಿಸಿಕೊಳ್ಳತಕ್ಕಂತ ಕೆಲಸ ಮಾಡಬೇಕು. 14 ದಿವಸದೊಳಗೆ payment ನ್ನು ತಾವು ಎರಡು ಭಾಗ ಮಾಡಿಕೊಳ್ಳಬೇಕು. (1) 15 ದಿವಸದಲ್ಲಿ advance ಕೊಡುವುದು (2) next 15 ದಿವಸದಲ್ಲಿ payment ಕೊಡುವುದು. ಈ ರೀತಿಯಾಗಿ 50:50 ಮಾಡಿಕೊಂಡರೆ burden ಕಡಿಮೆಯಾಗುತ್ತದೆ. ಕೇಂದ್ರ ಸರ್ಕಾರದ ಸಕ್ಕರೆ ನಿಯಂತ್ರಣ ಕಾಯಿದೆಯಲ್ಲಿ 14 ದಿವಸದೊಳಗೆ ಕೊಡದಿದ್ದರೆ ಮುಂದೆ ಆಗತಕ್ಕಂಥ ದಿವಸಗಳಿಗೆ ಬಡ್ಡಿ ಸಮೇತ ಸೇರಿಸಿ ಕೊಡಬೇಕೆನ್ನುವ ಕಾನೂನು ಇದೆ. ಆದರೆ, ಇಂದಿನ ಪರಿಸ್ಥಿತಿಯಲ್ಲಿ de-control ಇರುವುದರಿಂದ, ಈಗ ಮುಕ್ತವಾಗಿ ಎಲ್ಲಿಗೆ ಬೇಕಾದರೂ ಮಾರಿಕೊಳ್ಳಬಹುದು. ಅದ್ದರಿಂದ, ದಯವಿಟ್ಟು ಅದನ್ನು ಎರಡು ಭಾಗ

ಮಾಡಿಕೊಂಡು ತನ್ನಿ. ಸಮಿತಿ ಒಂದೇ ಮಾಡಿಕೊಳ್ಳಿ ಸಾಕು. ಎರಡೆರಡು ಮೂರು ಮೂರು ಕಮಿಟಿ ಏಕೆ ಮಾಡಿಕೊಳ್ಳುತ್ತೀರಿ? ತಾವೇ ದಯವಿಟ್ಟು ಎಲ್ಲಾ ಅಧಿಕಾರವನ್ನು ತೆಗೆದುಕೊಳ್ಳಿ. Factory ತೂಕವನ್ನು ಪರೀಕ್ಷೆ ಮಾಡುವುದರಲ್ಲಿ ಆ ಸಮಿತಿ ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ತಾವು ಇನ್ನೊಂದು ಕಾನೂನು ಮಾಡಬೇಕು. ಒಂದು ಟನ್ ಕಬ್ಬಿಗೆ 15 ಕೆ.ಜಿ., 20 ಕೆ.ಜಿ. deduct ಮಾಡುತ್ತಿದ್ದಾರೆ. Minimum 5 Kg. ಗಿಂತ ಹೆಚ್ಚಿಗೆ deduct ಮಾಡಬಾರದು ಎನ್ನುವ ಕಾನೂನು ತನ್ನಿ. ಯಾವುದೇ ಕಾರ್ಖಾನೆ ಯಾವುದೇ ಕಾರಣಕ್ಕೂ ..,

ಅಧ್ಯಕ್ಷರು:– Act ನಲ್ಲಿ deduct ಮಾಡುವುದಕ್ಕೆ ಇದೆಯೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಹೌದು. ಅವರು ಇಷ್ಟ ಬಂದಂಗೆ deduct ಮಾಡಿ ಬಿಡುತ್ತಾರೆ.

ಅಧ್ಯಕ್ಷರು:– ಅದು ಎಲ್ಲಿದೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಇಲ್ಲಿ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:– deduct ಮಾಡುವುದಕ್ಕೆ provision ಏನು ಇದೆ ಎಂದರೆ,

ಅಧ್ಯಕ್ಷರು:– ಇಲ್ಲಿ ಇದೆಯೆ?

ಶ್ರೀ ಗೋವಿಂದ ಎಂ. ಕಾರಜೋಳ:– ಇದರಲ್ಲಿ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅದರ ಮೇಲೆ ಕಾಯಿದೆ ಮಾಡಬೇಕಲ್ಲ.

ಅಧ್ಯಕ್ಷರು:– ಆಯಿತು ಬಿಡಿ. ಮುಂದೆ ಕಾನೂನು ಮಾಡುವಾಗ ಅದನ್ನು ಗಮನದಲ್ಲಿಟ್ಟುಕೊಳ್ಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಏನೇ ಆಗಲಿ ಖಾಸಗಿ ಕಾರ್ಖಾನೆಯವರು recovery ಕಳ್ಳತನ ಮಾಡುತ್ತಾರೆ. recovery ಕಳ್ಳತನ ಮಾಡುವುದರ ಬಗ್ಗೆ ಬಹಳ ಜವಾಬ್ದಾರಿ..

ಅಧ್ಯಕ್ಷರು:– ಕಳ್ಳತನ ತಡೆಯಲು ಕಾನೂನು ತಂದಿದ್ದರೂ ಕಳ್ಳತನ ನಡೆಯುತ್ತಲೇ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅದರಲ್ಲಿ ಅಂಥ ಕಾನೂನು ಏನಿದೆ ಎಂದರೆ, recovery ಮಾಡಿದ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳತಕ್ಕಂಥದ್ದಕ್ಕೆ ಅವಕಾಶ ಮಾಡಬೇಕು. 2–3 ತಿದ್ದುಪಡಿ ಮಾಡುವುದರ ಮೂಲಕ..

ಅಧ್ಯಕ್ಷರು:– ಸಾಕು ಬಿಡಿ.

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:– ಅಧ್ಯಕ್ಷರೆ, ಎರಡು ವಿಷಯಗಳನ್ನು ಹೇಳುತ್ತೇನೆ.

ಅಧ್ಯಕ್ಷರು:– ಬೇಡ. ಸಚಿವರು ಉತ್ತರ ಹೇಳಿ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ (ಸಹಕಾರ ಸಚಿವರು):– ಈ ಒಂದು ತಿದ್ದುಪಡಿ ವಿಧೇಯಕದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಜಗದೀಶ ಶೆಟ್ಟರು, ಮಾನ್ಯರಾದ ಗೋವಿಂದ ಕಾರಜೋಳರವರು, ಲಕ್ಷ್ಮಣ ಸಂಗಪ್ಪ ಸವದಿಯವರು, ಈಶ್ವರ ಖಂಡ್ರೆಯವರು, ಸಿದ್ದು ನ್ಯಾಮಗೌಡರು, ರಾಜೀವ್‌ರವರು, ಪುಟ್ಟಣ್ಣಯ್ಯನವರು, ಇನ್ನು ಮುಂತಾದ ಎಲ್ಲಾ ಗೌರವಾನ್ವಿತ ಸದಸ್ಯರು ಚೆಲ್ಲಿದ್ದಾರೆ ಮತ್ತು ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿ ಈ ಒಂದು ವಿಧೇಯಕ ಜಾರಿಗೆ ಬರುವುದಕ್ಕಿಂತ ಮುಂಚೆ ಬೆಲೆ ನಿಗದಿ ಪಡಿಸುವುದಕ್ಕೆ ಯಾವುದೇ ರೀತಿಯ ಕಾನೂನಿನ ನಿಂಬಂಧನೆ ಇರಲಿಲ್ಲ. ಹಿಂದಿನ ವರ್ಷಗಳಲ್ಲಿ ಕಾರ್ಖಾನೆಯ ಮಾಲೀಕರು ಮತ್ತು ರೈತರು ಸ್ಥಳೀಯವಾಗಿ ಒಪ್ಪಂದ ಮಾಡಿಕೊಂಡು ಒಂದು ರೇಟ್‌ನ್ನು ಕೊಡುತ್ತಿದ್ದರು. ಕೇಂದ್ರ ಸರ್ಕಾರ FRP ಬೆಲೆಯನ್ನು ಪ್ರತಿ ವರ್ಷ ನಿಗದಿ ಪಡಿಸುತ್ತದೆ. FRP ಬೆಲೆ ನಿಗದಿ ಪಡಿಸತಕ್ಕಂಥದ್ದು ರೈತ ಒಂದು ಟನ್ ಕಬ್ಬು ಬೆಳೆಯುವುದಕ್ಕೆ ಏನು ಖರ್ಚಾಗುತ್ತದೆ ಮತ್ತು ಕಬ್ಬಿನ ಆಧಾರದ ಮೇಲೆ ಒಂದು ಟನ್‌ಗೆ ಇಷ್ಟು ಬೆಲೆ ಕೊಡಬೇಕೆಂದು ನಿಗದಿ ಪಡಿಸುತ್ತದೆ. ಅದು 9.5& ರಿಕವರಿಗೆ ಆಧಾರವಾಗಿ ಒಂದು FRP ದರವನ್ನು ಕೇಂದ್ರ ಸರ್ಕಾರದ ಪ್ರತಿ

ವರ್ಷ ರೈತನ ಬೆಳೆಯ ಖರ್ಚಿನ ಬೆಲೆ ಏನಿದೆ ಅದರ ಆಧಾರದ ಮೇಲೆ supporting ಆಗಿ ಒಂದು ಬೆಲೆಯನ್ನು ನಿಗದಿಪಡಿಸುತ್ತದೆ. ಅಂದರೆ, ಅಷ್ಟು ಹಣವನ್ನಾದರೂ ರೈತನಿಗೆ ಕೊಡಬೇಕೆಂಬ ಕಾರಣಕ್ಕೆ FRP ಅನ್ನು ನಿಗದಿ ಪಡಿಸುತ್ತೆ. ಈಗ ನಮ್ಮ ರಾಜ್ಯದಲ್ಲಿ ಒಟ್ಟು 60 ಸಕ್ಕರೆ ಕಾರ್ಖಾನೆಗಳಿವೆ. ಅದರಲ್ಲಿ 2 ಕಾರ್ಖಾನೆಗಳು ಸರ್ಕಾರಕ್ಕೆ ಸೇರಿವೆ. 13 ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿವೆ ಮತ್ತೆ 7 ಕಾರ್ಖಾನೆಗಳು ಸಹಕಾರಿ ಕ್ಷೇತ್ರದಲ್ಲಿದ್ದರೂ ಸಹ ಅವುಗಳನ್ನು ಖಾಸಗಿಯವರಿಗೆ ಗುತ್ತಿಗೆ ಕೊಡಲಾಗಿದೆ. 38 ಖಾಸಗಿ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲಿವೆ. ನಮ್ಮ ರಾಜ್ಯದಲ್ಲಿ ಸುಮಾರು 5 ಲಕ್ಷ ರೈತ ಕುಟುಂಬಗಳು ಕಬ್ಬು ಬೆಳೆಯ ಮೇಲೆ ಅವಲಂಭಿತವಾಗಿವೆ. ಈ ವರ್ಷ 4.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗಿದೆ. ನಮ್ಮ ರಾಜ್ಯದಲ್ಲಿ 383.1 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಅರೆಯಲಾಗಿದ್ದು, ಇದರಿಂದ 42 ಲಕ್ಷ ಮೆಟ್ರಿಕ್ ಟನ ಸಕ್ಕರೆ ಉತ್ಪಾದನೆ ಆಗಿದೆ. ನಾವು ಕಳೆದ ಬಾರಿ ಈ ಒಂದು ವಿಧೇಯಕ ಜಾರಿಗೆ ಬಂದ ಮೇಲೆ ಸಕ್ಕರೆ ಖಾತೆಯನ್ನು ನಿರ್ವಹಿಸುವುದಕ್ಕಿಂತ ಮುಂಚೆ ನಾನೂ ಕೂಡ ಆ ಒಂದು ಸಮಿತಿಯಲ್ಲಿ ಆಹ್ವಾನಿತ ಸದಸ್ಯನಾಗಿ 3–4 ಸಭೆಗಳಿಗೆ ನಾನು ಭಾಗವಹಿಸಿದ್ದೇನೆ. ಆ ಸಭೆಯಲ್ಲಿ ರೈತರ ಪ್ರತಿನಿಧಿಗಳಾಗಿ 5 ಜನ ಸದಸ್ಯರು ಇರುತ್ತಾರೆ, ಹಾಗೆಯೇ ಸಕ್ಕರೆ ಕಾರ್ಖಾನೆಯ ಮಾಲೀಕರ ಪ್ರತಿನಿಧಿಗಳಾಗಿ 5 ಜನ ಸದಸ್ಯರು ಇರುತ್ತಾರೆ. ಸಚಿವರಾಗಿ ಕೃಷಿ ಮತ್ತು ಸಕ್ಕರೆ ಸಚಿವರು ಆ ಸಮಿತಿಯಲ್ಲಿರುತ್ತಾರೆ. ಆ ಸಮಿತಿಯಲ್ಲಿ ಏನು ಮಾಡಲಾಗುತ್ತದೆ ಎಂದರೆ, ಬೆಲೆ ನಿಗದಿ ಪಡಿಸುವುದಕ್ಕೆ ಸರಿಯಾದ ಒಂದು ಮಾರ್ಗದರ್ಶನ ಇಲ್ಲದ ಕಾರಣ ಅದರ ಮೂಲಕ ನಿಗದಿ ಮಾಡಲಾಗುತ್ತದೆ. ಈ ವಿಧೇಯ ಜಾರಿಗೆ ಬಂದಿದ್ದರಿಂದ ಮೊದಲನೆ ಬಾರಿ ಬೆಲೆ ನಿಗದಿಪಡಿಸತಕ್ಕಂಥ ಅವಕಾಶ ಸರ್ಕಾರಕ್ಕೆ ಬಂತು. ಇದರಿಂದ ಏನಾಯಿತೆಂದರೆ, ಈ ಹಿಂದಿನ ವರ್ಷದಲ್ಲಿ ಸಕ್ಕರೆಗೆ ಹೆಚ್ಚಿನ ಬೆಲೆ ಇದ್ದಂಥ ಕಾರಣದಿಂದ ಸಕ್ಕರೆ ಕಾರ್ಖಾನೆಯವರು ಅಂದರೆ, ಇದರಲ್ಲಿ ಸಹಕಾರಿ ಅಥವಾ ಖಾಸಗಿ ಕಾರ್ಖಾನೆಗಳೂ ಸಹ ಸೇರಿವೆ. ಒಂದು ಟನ್ ಕಬ್ಬಿಗೆ average 2400 ರೂಪಾಯಿ ಪ್ರಕಾರ ರೈತರಿಗೆ ಹಣ ಪಾವತಿ ಮಾಡಿದ್ದರು.

ಅದು ದಕ್ಷಿಣ ಭಾಗ ಇರಬಹುದು ಅಥವಾ ಉತ್ತರ ಭಾಗ ಇರಬಹುದು. ದಕ್ಷಿಣ ಭಾಗದಲ್ಲಿರುವ 12 ಸಕ್ಕರೆ ಕಾರ್ಖಾನೆಗಳು ex-gate ನಲ್ಲಿ ಕಬ್ಬನ್ನು ಪಡೆಯುತ್ತವೆ. ಅಂದರೆ ರೈತರೇ ಸಕ್ಕರೆ ಕಾರ್ಖಾನೆಗಳಿಗೆ ತಂದು ಕೊಡತಕ್ಕಂಥ ಪದ್ಧತಿ ಆಗಿದೆ. ಅಲ್ಲಿಯೂ ಕೂಡ per ton ಗೆ 2400 ರೂಪಾಯಿ ಹಣ ಕೊಟ್ಟಿದ್ದರು. ಉತ್ತರ ಭಾಗದಲ್ಲಿ ಸುಮಾರು 38 ಕಾರ್ಖಾನೆಗಳು ಇರುವ ಪ್ರದೇಶದಲ್ಲಿ ರೈತರಿಂದ ಸಕ್ಕರೆ ಕಾರ್ಖಾನೆಯವರು ಕಬ್ಬನ್ನು ಸರಬರಾಜು ಮಾಡಿಕೊಂಡು average 2400 ರೂಪಾಯಿಂತೆ ಕೊಟ್ಟಿದ್ದಾರೆ. ನಾನು average ಬೆಲೆ ಹೇಳುತ್ತಿದ್ದೇನೆ. ಅದು ಹೆಚ್ಚು ಕಡಿಮೆ ಇರಬಹುದು. ಏಕೆಂದರೆ, ಕೆಲವು ಜಾಸ್ತಿ ಕೊಟ್ಟಿದ್ದಾರೆ ಕೆಲವರು 100 ರೂಪಾಯಿ ಕಡಿಮೆ ಕೊಟ್ಟಿರುವಂಥ ಉದಾಹರಣೆಗಳು ಸಹ ಇವೆ. ಏಕೆ ಆ ರೀತಿ ಕೊಡುತ್ತಿದ್ದರೆಂದರೆ, ಈ ಕಡೆ ಇಳುವರಿ ಪ್ರಮಾಣ below 10% ಇದೆ. ಆದರೆ, ಆ ಕಡೆ 100 ಮೇಲೆ ಅಂದರೆ, 11, 12, 13, 13.5% ಇದೆ. ಈ ರೀತಿಯಾಗಿ ಅಲ್ಲಿ ಕೊಡುತ್ತಾ ಹೋಗುತ್ತಾರೆ. 1% ಇಳುವರಿ ಜಾಸ್ತಿ ಆದರೆ 200 ರಿಂದ 300 ರೂಪಾಯಿ ಹೆಚ್ಚು ಆದಾಯ ಸಕ್ಕರೆ ಕಾರ್ಖಾನೆಗೆ ಇರುತ್ತದೆ. ಇಲ್ಲಿ ಅಂದರೆ, ನಮ್ಮ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ 8.5% ಇದೆ. ಆದರೆ, ಇಳುವರಿಯಲ್ಲಿ 9.5% minimum ಕೊಡಲೇ ಬೇಕಾಗಿರುವುದರಿಂದ ಅಷ್ಟನ್ನು ಕೊಡುತ್ತಾರೆ. ಆದರೆ ಆ ಭಾಗದಲ್ಲಿ ಏನಾಗಿದೆ ಎಂದರೆ, ಹೆಚ್ಚಿನ ಇಳುವರಿ ಅಂದರೆ 13% ಇರುವುದರಿಂದ ಅವರಿಗೆ FRP ಗಿಂತ ಸುಮಾರು 900 ರೂಪಾಯಿ ಹೆಚ್ಚಿಗೆ ಬರುತ್ತದೆ. ಆದ್ದರಿಂದ, H&T charges ಅಂದರೆ Handling & Transportation charges ex-filed ನಲ್ಲಿ ಏನಿದೆ ಅದನ್ನು ಈ ಹೆಚ್ಚುವರಿ ಹಣದಲ್ಲಿ ಭರಿಸಿಕೊಳ್ಳುತ್ತಾರೆಂದು ಸರಿಸಮಾನವಾಗಿ 2500 ರೂಪಾಯಿ ಆ ಕಡೆ ಕೊಡಲಿ ಹಾಗೆಯೇ ಈ ಕಡೆ ಕೂಡ 2500 ರೂಪಾಯಿ ಕೊಡಲೆಂದು ex-filed, ex-gate ಎಂದು ನಾವು ದರವನ್ನು ನಿಗದಿ ಪಡಿಸಿದ್ದೆವು. ಆದರೆ, South India Sugar factory Management Association (SISMA) ಎಂದು ಮಾಡಿಕೊಂಡಿದ್ದಾರೆ. ಇವರು ಮತ್ತು ಕೆಲವು ಖಾಸಗಿ ಕಾರ್ಖಾನೆಗಳು ಸೇರಿಕೊಂಡು ಈ ಒಂದು ಹಣವನ್ನು ಅಂದರೆ, ನಿಗದಿ ಮಾಡಿರುವ

ಹಣವನ್ನು ಪಾವತಿ ಮಾಡಬೇಕೆಂದು ವಿಧಾನಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಮೇಲೆ ಈ ಹಣವನ್ನು ನಾವು ಪಾವತಿ ಮಾಡುವುದಕ್ಕೆ ಆಗುವುದಿಲ್ಲವೆಂದು ಕೋರ್ಟ್ ಮೆಟ್ಟಿಲು ಹತ್ತಿ ಅದಕ್ಕೆ ರಿಟ ಪಿಟಿಶನ್ ಹಾಕಿದ್ದಾರೆ. ಕೋರ್ಟ್‌ನಲ್ಲಿ ಈ ಬಗ್ಗೆ ತೀರ್ಪು ಹೊರ ಬರಬೇಕಾಗಿದೆ. ಆದರೆ, ಈಗ ಹೈಕೋರ್ಟ್‌ನಲ್ಲಿ ಒಂದು ತೀರ್ಪು ಏನು ಕೊಟ್ಟಿದ್ದಾರೆಂದರೆ, FRP ಪ್ರಕಾರ ಏನು ದರ ನಿಗದಿ ಮಾಡಲಾಗಿದೆಯೋ ಅದನ್ನಾದರು ಸರ್ಕಾರ ರೈತರಿಗೆ ಪಾವತಿ ಮಾಡಿಸಬೇಕೆಂದು ಮತ್ತೆ ಸಕ್ಕರೆ ಕಾರ್ಖಾನೆಗಳು ಸಹ FRP ಪ್ರಕಾರ...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– FRP ಅಂದರೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, FRP ಅಂದರೆ..

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಸಚಿವರೇ, ಒಂದು ನಿಮಿಷ. FRP ನಿರ್ಣಯ ಮತ್ತು ex-gate ಇರತಕ್ಕಂಥದು, ಅದು ಬಹಳ ತಪ್ಪು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಆನಂತರ ನಾನು ಹೇಳುತ್ತೇನೆ. ಈ ಒಂದು ಕಾರಣದಿಂದ ಕಳೆದ ಸಲ ಗೊಂದಲವಾಗಿ ಕೊರ್ಟ್ ಮೆಟ್ಟಿಲು ಹತ್ತಿದ್ದು, ಕೋಟ್‌ನಿಂದ ಈ ಬಗ್ಗೆ ಅಂತಿಮ ತೀರ್ಪನ್ನು ನಾವು ಎದುರು ನೋಡುತ್ತಿದ್ದೇವೆ. FRP ಪ್ರಕಾರ ಏನು ಕೊಡಬೇಕೆಂದು ಹೇಳಿದ್ದಾರೆಯೋ ಅದನ್ನಾದರು ಪಾವತಿ ಮಾಡಿಸಬೇಕೆಂದು ನಾವು ಅನೇಕ ನೋಟೀಸ್‌ಗಳನ್ನು ಜಾರಿಗೊಳಿಸಿದರೂ ಕೂಡ ಸಕ್ಕರೆ ಕಾರ್ಖಾನೆಗಳ ಮಾಲೀಕರು ಸ್ಪಂದಿಸದೆ ಇರುವುದರಿಂದ 18 ಸಕ್ಕರೆ ಕಾರ್ಖಾನೆಗಳಿಗೆ Recovery Certificate ಅನ್ನು issue ಮಾಡಿದ ಮೇಲೆ ಅದರಲ್ಲಿ 14 ಕಾರ್ಖಾನೆಗಳು ಈಗ FRP ಪ್ರಕಾರ ಹಣ ಪಾವತಿ ಮಾಡಿದ್ದಾರೆ. ನಾವು Recovery Certificate issue ಮಾಡಿ ಒಂದು ತಿಂಗಳಾಗಿದೆ. ಆದರೆ, ಇನ್ನೂ ನಾಲ್ಕು ಕಾರ್ಖಾನೆಗಳು ಪೂರ್ಣವಾಗಿ ಪಾವತಿ ಮಾಡುವುದಕ್ಕೆ ಆಗಿಲ್ಲ. ಇದು ಒಂದು ಕಡೆ ಇರತಕ್ಕಂಥ ಸಮಸ್ಯೆ. ಇದು ಏತಕ್ಕಾಗಿ ಬಂತೆಂದರೆ, ಈ

ಕಾಯಿದೆಯಲ್ಲಿ ನಿರ್ದಿಷ್ಟವಾಗಿ ಬೆಲೆ ನಿಗದಿ ಪಡಿಸುವುದಕ್ಕೆ ಯಾವುದೇ ಒಂದು ಮಾನದಂಡವನ್ನು ನಾವು ಮಾಡಿಕೊಳ್ಳದೆ ಇರುವುದರಿಂದ ಈ ಗೊಂದಲ ಬಂದು ಇಷ್ಟೆಲ್ಲಾ ಆಗಿದೆ. ಇದಕ್ಕೆ ಅವರವರ ಅನುಕೂಲಕ್ಕೆ ಅನುಗುಣವಾಗಿ ಪ್ರತಿಪಾದಿಸತಕ್ಕಂಥದು ಇದೆ. ಆದರೆ, ನಾವು ಕಾನೂನಿನ ಅಡಿಯಲ್ಲಿ ಏನನ್ನೇ ಮಾಡಬೇಕಾದರು ಅದನ್ನು ಸಂವಿಧಾನದ ಚೌಕಟ್ಟಿನೊಳಗೆ ನಮ್ಮ ಕಾಯಿದೆ ಅಡಿಯಲ್ಲಿ ಪ್ರಾವಿಜನ್ ಮಾಡಿಕೊಂಡು ಮಾಡಬೇಕಾಗುತ್ತದೆ. ಅದಕ್ಕೆ ನಾವು ex-gate ಒಂದನ್ನು ಅಳವಡಿಸಿಕೊಳ್ಳುವುದಕ್ಕೆ ಮಾಡಿದ್ದೇವೆ. ಕಾರಣ ಏನೆಂದರೆ, Central Governmentನ Sugarcane (Control) Order,1996ರಲ್ಲಿ "Price" means the price or fair and remunerative price fixed by the Central Government from time to time for sugarcane delivered-(i) to a Sugar factory at the gate of the factory or at the sugarcane purchasing center." ಅಂದರೆ, ಶುಗರ್ ಫ್ಯಾಕ್ಟರಿಯವರು ex-gateನಲ್ಲಿಯೇ fair and remunerative price ಅನ್ನು ಪರಿಗಣಿಸಬೇಕೆಂದು Sugarcane (Control) Orderನಲ್ಲಿದೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, 'Or purchasing center' ಎಂದು ಇದೆ. Purchasing center ಎಂದರೆ, ಅದು filed ಆಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಅದರ ಬಗ್ಗೆ ಕೂಡ ಹೇಳುತ್ತೇನೆ. ಉತ್ತರಪ್ರದೇಶದಲ್ಲಿ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಈ ಒಂದು ಆಕ್ಟ್ ಅನ್ನು ಮಾಡಿದ್ದಾರೆ. ಆ ಭಾಗದಲ್ಲಿ ಏನು ಮಾಡುತ್ತಾರೆಂದರೆ, ಫ್ಯಾಕ್ಟರಿಯವರು ಯಾವುದನ್ನು Purchase center ಎಂದು ನಿಗದಿ ಪಡಿಸಿಕೊಳ್ಳುತ್ತಾರೆಯೋ ಆ ಜಾಗದಿಂದ ಖರೀದಿ ಮಾಡತಕ್ಕಂಥದ್ದಕ್ಕೆ purchase center ಎಂದು ಕರೆಯುತ್ತಾರೆ. Purchase center ಎಂದರೆ ಅದೇನು ರೈತರ ಜಮೀನ ಅಲ್ಲ. Purchase center ಎಂದರೆ, ಉತ್ತರ ಪ್ರದೇಶದಲ್ಲಿರುವ co-operative societyಯವರು ಏನು ಮಾಡುತ್ತಾರೆಂದರೆ, ಬೇರೆ ಬೇರೆ ಭಾಗದಿಂದ sugarcane ತಂದು ಒಂದು ಸ್ಪಾಟ್‌ನಲ್ಲಿ

ಇಟ್ಟುಕೊಂಡಿರುತ್ತಾರೆ. ಅಲ್ಲಿಗೆ ಸಕ್ಕರೆ ಕಾರ್ಖಾನೆಗಳು ಬಂದು ಅಲ್ಲಿಂದ ಲಿಫ್ಟ್ ಮಾಡುತ್ತಾರೆ.

ಶ್ರೀ ಪಿ. ರಾಜೀವ್:– Essential Commodities Actನ statement ಇದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಸದಸ್ಯರೇ, ನೀವು ಹೇಳಿರುವುದೆಲ್ಲವನ್ನು ನಾನು ಕೇಳಿದ್ದೇನೆ. ನನ್ನ ಪೂರ್ಣ ಉತ್ತರವನ್ನು ಕೇಳಿ. ಅವೈಜ್ಞಾನಿಕವೆಂದರೆ, ಅದು ಒಬ್ಬರಿಗೆ ಒಪ್ಪಿಗೆ ಆಗುತ್ತದೆ ಕೆಲವರಿಗೆ ಒಪ್ಪಿಗೆ ಆಗುವುದಿಲ್ಲ. ಆದರೆ, ಎಲ್ಲರನ್ನು ಒಪ್ಪಿಸಿಕೊಂಡು ಇದನ್ನು ಈ ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಅದೇನೆಂದರೆ, 'to a sugar factory at the gate of the factory' ಎಂದು ಹೇಳಿದ್ದಾರೆ, ಅಲ್ಲಿಗೆ ಅರ್ಥ ಏನಾಗುತ್ತದೆಂದರೆ, at the gate of the factory ಎಂದಾಯಿತು. ಪುನಃ ಈ ಆರ್ಡರ್‌ನಲ್ಲಿ filed ಎಂದು ಹೇಳುವುದಕ್ಕೆ ಸಾಧ್ಯವಿದೆಯೇ? ಯಾವುದಾದರು ಒಂದನ್ನು ಹೇಳುವುದಕ್ಕೆ ಸಾಧ್ಯವಿದೆ.

ಅಧ್ಯಕ್ಷರು:– ಮಾನ್ಯ ಸಚಿವರೇ, ಇವರೆಲ್ಲರು ಮಾತನಾಡಿದ ಅರ್ಥ ಏನೆಂದರೆ, ಅವರೆಲ್ಲರೂ ದೊಡ್ಡ ದೊಡ್ಡ ಕಬ್ಬು ಬೆಳೆಗಾರರು. ಅವರು ಕಬ್ಬನ್ನು ಕಡಿದು ತಂದು ಹಾಕುವುದಕ್ಕೆ ಆಗುವುದಿಲ್ಲವೆಂದು ಕಂಟ್ರಾಕ್ಟರ್‌ಗೆ ಕೊಟ್ಟು ಬಿಡುತ್ತಾರೆ. ಕಬ್ಬನ್ನು ಅವರೇ ಕಡಿದು ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನಾನು ಪೂರ್ಣವಾಗಿ ವಿವರಣೆ ಕೊಟ್ಟ ಮೇಲೆ ಅವರು ಏನಾದರೂ ಕ್ಲಾರಿಫಿಕೇಷನ್ ಕೇಳಲಿ. ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಅವರು field ಇರಲೆಂದು ಹೇಳುತ್ತಾರಷ್ಟೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, Field ಎಂದು ಹೇಳುವುದಕ್ಕೆ ತೊಂದರೆ ಏನಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು:– ಏನು problem ಇದೆ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಆನಂತರ ಅವರು ಇನ್ನೊಂದು ಏನು ಹೇಳುತ್ತಾರೆಂದರೆ, year ಅನ್ನು October to March, April ಮಾಡಬೇಕೆಂದು ಹೇಳುತ್ತಾರೆ.

ಅಧ್ಯಕ್ಷರು:– ಅದನ್ನು ಏನಾದರು ಮಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಅದೇನು ದೊಡ್ಡ ಸಮಸ್ಯೆ ಅಲ್ಲ.

ಅಧ್ಯಕ್ಷರು:– ಅದರ ಬಗ್ಗೆ ಅವರೇನು ಕೇಳಿಲ್ಲ. ಅವರು main ಆಗಿ field ಬಗ್ಗೆ ಕೇಳುತ್ತಿದ್ದಾರಷ್ಟೆ. (ಗೊಂದಲ) ಇದನ್ನು ಮಾಡುವುದಕ್ಕೆ ಅವಕಾಶ ಇದ್ದರೆ ಮಾಡಿ ಇಲ್ಲದಿದ್ದರೆ ಯಾವುದು ಇದೆಯೋ ಅದನ್ನು ಮಾಡಿ.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, SISMAದವರು ಈಗಾಗಲೇ ಹೈ ಕೋರ್ಟ್‌ಗೆ ಹೋಗಿದ್ದಾರೆ. High Court ನಲ್ಲಿರುವುದರಿಂದ ಅವರಿಗೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ತೀರ್ಪು ಕಾಯ್ದಿರಿಸಿದೆ. ನನ್ನ ಉತ್ತರ ಪೂರ್ತಿ ಕೇಳುವುದಕ್ಕೆ ನಿಮಗೆ ಸಮಾಧಾನವಿಲ್ಲವೆಂದರೆ ಹೇಗೆ? ಅದೇ Sugercane (Control) Orderನಲ್ಲಿ, "Year" means the year commencing on the first day of July and ending with the thirtieth day if June in the year next following ಎಂದು ಇದೆ. ನಾವು ಏನೇ ಮಾಡಬೇಕಾದರೂ Sugarcane (Control) Order ಪ್ರಕಾರ ಮಾಡಬೇಕು. Sugarcane (Control) Order ಯಾವುದರಿಂದ ಬರುತ್ತದೆ? Essential Commodities Act ಅಡಿಯಲ್ಲಿ Sugarcane (Control) Order ಬರುವಂಥದು. ಅದು ಬೇರೆ ಇದು ಬೇರೆ ಇರುವುದಕ್ಕೆ ಹೇಗೆ ಸಾಧ್ಯ? Essential Commodities Act ಕೆಳಗಡೆ Sugarcane (Contoal) Order ಬರುತ್ತದೆ.

ಶ್ರೀ ಪಿ. ರಾಜೀವ್:– Order ದೊಡ್ಡದೋ Act ದೊಡ್ಡದೋ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- Sugarcane (control) Orderನಲ್ಲಿ ex–gate ಎಂದು ಅವರು ನಿಗದಿ ಪಡಿಸಿದ್ದಾರೆ. ನಾವು ಇಲ್ಲಿ ex–gate, ex-field ಮಾಡಿದಾಗ ಇವರು ಏನು ಹೇಳಿದರು. ನಾವು 2500 ರೂ.ಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಕೋರ್ಟಿಗೆ ಹೋಗುತ್ತಾರೆ. ಇಲ್ಲಿ ex-field ಗೆ ನಿಗದಿಗೊಳಿಸಿ ಎಂದು ಹೇಳುತ್ತಾರೆ. ಮತ್ತೆ ex-field ಗೆ ನಿಗದಿ ಪಡಿಸಿದ 2500 ರೂ.ಗಳನ್ನು ಕೊಡುವುದಕ್ಕೆ ಇವರು FRP ಕೊಡುವುದಕ್ಕೆ ಇನ್ನೂ ತಯಾರು ಇರಲಿಲ್ಲ. ನಾವು recovery certificate issue ಮಾಡಿದ ಮೇಲೆ 18 ಸಕ್ಕರೆ ಕಾರ್ಖಾನೆಗಳಲ್ಲಿ 14 ಕಾರ್ಖಾನೆಗಳವರು ಕೊಟ್ಟಿದ್ದಾರೆ. ಇನ್ನು 4 recovery ಕೊಟ್ಟರು ಸಹ payment ಮಾಡುವುದಕ್ಕೆ ಮುಂದೆ ಬಾರದಿರುವಂಥ ಒಂದು ಪರಿಸ್ಥಿತಿಯೊಳಗೆ ನಾವು ಕಠಿಣವಾದ ಕಾನೂನನ್ನು ಜಾರಿಗೆ ತರದಿದ್ದರೆ, ಈ ಒಂದು ಕಾಯಿದೆಗೆ ಸ್ವಲ್ಪ ಬಲ ಕೊಡದಿದ್ದರೆ ನಾವು ಈ ಕಾಯಿದೆ ಇಟ್ಟುಕೊಂಡು ಕೂಡ ಯಾವುದೆ ನಿಯಂತ್ರಣ ಮಾಡುವುದಕ್ಕೆ ಅವಕಾಶ ಆಗುವುದಿಲ್ಲ. ಆದ್ದರಿಂದ ಈ ಒಂದು ಕಾಯಿದೆಗೆ ನಾವು ತಿದ್ದುಪಡಿಯನ್ನು ಜಾರಿಗೆ ತರುತ್ತಿದ್ದೇವೆ. ಇವರು ಏನು ಮಾಡಬಹುದು ಎಂದರೆ, ex-gate ಎಂದು ನಾವು ಮಾಡಿರುತ್ತೇವೆ. ತಿದ್ದುಪಡಿಯಲ್ಲಿರುವ ಪ್ರಕಾರ ಒಪ್ಪಿಕೊಂಡು ರೈತರ ಹತ್ತಿರ ಒಪ್ಪಂದ ಮಾಡಿಕೊಂಡು ಇವರಿಗೆ ಏನು problem ಇದೆ, ಏಕೆ ಇವರು ex-field ಎಂದು ಕೇಳುತ್ತಿದ್ದಾರೆಂದರೆ common ಆಗಿ ಇವರೆ ರೇಟ್ ಫಿಕ್ಸ್ ಮಾಡುತ್ತಾರೆ. ಇವರು ex-field ಏನು ಮಾಡುತ್ತಾರೆಂದರೆ, ರೈತರಿಂದ ಒಂದು ಬೆಲೆ ನಿಗದಿ ಪಡಿಸಿಕೊಂಡು ಬಿಡುತ್ತಾರೆ, ಒಪ್ಪಂದ ಇಲ್ಲ ಏನೂ ಇಲ್ಲ. ಇವರು ಒಂದು ಟನ್ ಕಬ್ಬಿಗೆ 400 ರಿಂದ 660ರವರೆಗೆ ಅಕ್ಕಪಕ್ಕದ ಫ್ಯಾಕ್ಟರಿಗಳು ಒಬ್ಬರು H&T ಅನ್ನು 400 ಮಾಡುತ್ತಾರೆ, ಪಕ್ಕದವನು 550 ರೂ.ಗಳಿಗೆ ಮಾಡುತ್ತಾನೆ. ಇನ್ನೊಬ್ಬ 650 ರೂ.ಗಳನ್ನು ಮಾಡುತ್ತಾನೆ. ರೈತರಿಗೆ ಒಂದೊಂದು ರೀತಿಯ ex-field ನಲ್ಲಿ ಇವರು ಕಬ್ಬನ್ನು purchase ಮಾಡುತ್ತಾರೆ. H&T charge ಎಂದು ರೈತರಿಗೆ ಹಾಕುತ್ತಾರೆ.

ಅಧ್ಯಕ್ಷರು:– ಇದನ್ನು ತಂದಿರುವುದರಿಂದ ರೈತರ ವಿಶ್ವಾಸ ಸಂಪಾದನೆ ಮಾಡುತ್ತಾರಾ ನೋಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಆ ಕಾರ್ಖಾನೆಯವರೇ ಭರಿಸತಕ್ಕಂಥದ್ದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಕಾರ್ಖಾನೆ ಭರಿಸುತ್ತದೆ. ರೈತರಿಗೆ ಬೇರೆ ಬೇರೆ ಬೆಲೆ ಕೊಡುತ್ತಾರೆ. Common rate ಇಲ್ಲ. ಆದ್ದರಿಂದ ಇವರು ರೈತರ ಒಪ್ಪಂದ ಮಾಡಿಕೊಂಡು..

ಶ್ರೀ ಜಗದೀಶ್ ಶೆಟ್ಟರ್:– ರೈತರ ಜಮೀನಿನಿಂದ ಕಟಾವು ಮಾಡಿಕೊಂಡು ಬರುತ್ತಿದ್ದರು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ, ನಾವು ex-field ಗೆ 2500 ರೂ.ಗಳನ್ನು ಮಾಡಿದೆವು. ಇಲ್ಲಿ ಇಳುವರಿ ಜಾಸ್ತಿ ಇದೆ. ಅವರು H&T charge ಸೇರಿ 2500 ರೂ.ಗಳನ್ನು ಕೊಡಿ ಎಂದು. ತಾವು ಮನಸ್ಸು ಮಾಡಿ 2500 ರೂ.ಗಳನ್ನು ಕೊಡಿಸಿದ್ದರೆ ನಾವು ಈ ತಿದ್ದುಪಡಿ ತರುವುದಕ್ಕೆ ಹೋಗುತ್ತಿರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಸರ್ಕಾರ ಮಾಡಿ ಎಂದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಈಗ ನೀವು ಬೇಡ ಎಂದು ಅನ್ನುತ್ತಿದ್ದೀರಲ್ಲಾ?

ಶ್ರೀ ಜಗದೀಶ್ ಶೆಟ್ಟರ್:– ಯಾರು ಬೇಡ ಎನ್ನುತ್ತಿದ್ದಾರೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಸರ್ಕಾರ 2500 ನಿಗದಿಪಡಿಸಿದ್ದು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಇವತ್ತಿನವರೆಗೂ ಅವರು ಕೊಟ್ಟಿಲ್ಲ. ಆಗ ಏನು ಮಾಡಿದಿರಿ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- 2500 ರೂ.ಗಳನ್ನು ಕೊಡಿಸಿದ್ದರೆ ಇಲ್ಲಿಯವರೆಗೆ ಈ ಕಡೆ ಬರಬೇಕಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಮಂತ್ರಿಗಳು ಇದ್ದಾರೆ ಮೊದಲು ಅವರಿಂದ ವಸೂಲು ಮಾಡಿಸಿ. ನಾನು ಎಲ್ಲರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಿ ಎಂದು ಹೇಳಿರುತ್ತೇನೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- Ex-gate ಎಂದು ಏನು Sugarcane (Control) Order ಇದೆ ಅದರ ಪ್ರಕಾರ ex-gate ಎಂದು ನಿಗದಿ ಪಡಿಸುತ್ತಿದ್ದೇವೆ. ಕಬ್ಬನ್ನು ರೈತರಿಂದ ಪಡೆಯುವಾಗ ರೈತರು ಮತ್ತು ಅವರು ಒಂದು ಒಪ್ಪಂದವನ್ನು ಮಾಡಿಕೊಂಡು H&T charges ಬಗ್ಗೆ ಅವರು ನಿಗದಿ ಪಡಿಸಿಕೊಳ್ಳುತ್ತಾರೆ. ಇದಕ್ಕೆ ಸರ್ಕಾರ ಜವಾಬ್ದಾರಿ ಬರುವುದಿಲ್ಲ.

ಶ್ರೀ ಸಿ.ಟಿ. ರವಿ:- Actನಲ್ಲಿ organized sectorಗೆ ಅನುಕೂಲವಾಗುವಂತೆ ತಂದು un-organized sectorಗೆ ಅನುಕೂಲ ಮಾಡಿಕೊಡುತ್ತೇವೆ ಎನ್ನುವಂತೆ ಮಾತನಾಡಿದಂತೆ ಆಗುತ್ತದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ದಕ್ಷಿಣ ಭಾಗದಲ್ಲಿ ಜೂನ್ ಮತ್ತು ಜುಲೈನಲ್ಲಿ crushing ಪ್ರಾರಂಭವಾಗುತ್ತದೆ. ಆ ಕಡೆ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಉಳಿದ ಉತ್ತರ ಭಾಗದಲ್ಲಿ ಪ್ರಾರಂಭವಾಗುತ್ತದೆ. ಈ Year ಎಂದು define ಮಾಡಿರುವುದು ಕೂಡ Sugarcane (control) Orderನಲ್ಲಿ ಅವರು ಏನು definition ಕೊಟ್ಟಿದ್ದಾರೆ ನಾವು ಅದನ್ನು ತರುತ್ತಿದ್ದೇವೆ. ಆದ್ದರಿಂದ ಇದರಿಂದ ಯಾವುದೇ ಗೊಂದಲ ಆಗಲಿ ಅಥವಾ ತೊಂದರೆ ಆಗಲಿ ಇಲ್ಲ. ಅವರು ಯಾವುದೇ ಕಾಲದಲ್ಲಿ crushing ಮಾಡಲಿಕ್ಕೆ ಏನೂ ತಾಪತ್ರಯ ಇಲ್ಲ. Year ಎನ್ನುವುದನ್ನು ಒಂದು clarity ಕೊಡುವುದಕ್ಕೆ ಇಲ್ಲಿ ತಂದಿದ್ದೇವೆ. ಕಮಿಟಿಯಲ್ಲಿ ಕಳೆದ ಭಾರಿ sugar factory ಅವರು Court

ನಲ್ಲಿ ಪ್ರಶ್ನೆ ಮಾಡಿದ್ದಾರೆ. ಏನೆಂದರೆ, ಸಹಕಾರಿ ಸಚಿವರು ಆ ಸಭೆಯಲ್ಲಿ ಭಾಗವಹಿಸುತ್ತಾರೆ, ಅವರು ಸಮಿತಿಯ ಸದಸ್ಯರು ಅಲ್ಲ. ಅವರು ನಿರ್ಣಯಕ್ಕೆ ಸಹಿ ಹಾಕಿರುವುದಕ್ಕೆ ನೀವು ಒಪ್ಪಕೂಡದು. ಇಬ್ಬರನ್ನು invitees ಗಳನ್ನು ತೆಗೆದುಕೊಳ್ಳಬೇಕೆಂದು ರೈತ ಸಂಘದ ಪ್ರತಿನಿಧಿಗಳನ್ನು ಕಮಿಟಿಗೆ ತೆಗೆದುಕೊಳ್ಳಬೇಕೆಂದು ಕೇಳಿರುವುದರಿಂದ ಆಗಲೇ ಸರ್ಕಾರ 5 ಜನ ಕಬ್ಬು ಬೆಳೆಗಾರರ ಪ್ರತಿನಿಧಿಗಳೆಂದು ನೇಮಕ ಮಾಡಿಕೊಂಡು ಬಿಟ್ಟಿತ್ತು. ಒಬ್ಬರು ಬೇಕೆ ಬೇಕು ಎಂದು ಪ್ರತಿಪಾದಿಸಿದಾಗ ...

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಸದನದೊಳಗೆ ಆಗಮಿಸಿದರು)

ಶ್ರೀ ಸಿ.ಟಿ. ರವಿ:– ಸಕ್ಕರೆ ಫ್ಯಾಕ್ಟರಿಯವರ ಪರವಾಗಿ ಹೇಗೆ ಕರೆಸುತ್ತೀರಿ ನೋಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಊಟ ಮಾಡಿ ಮಲಗಿಕೊಂಡವರನ್ನು ಕರೆಸುತ್ತಾರೆಂದರೆ ಕಾರ್ಖಾನೆಯವರ ಪರವಾಗಿ..

(ಗೊಂದಲ)

ಶ್ರೀ ಸಿ.ಟಿ. ರವಿ:– ಈಗಿಂದಲೇ ಲಾಭಿ ಶುರುವಾಗಿದೆ. ಈ ಲಾಭಿ Actಗೆ quorum ನಿಂದಲೇ ಶುರು ಆಗಿದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಈ ಸದನದ ಚರ್ಚೆ ನಾಳೆ ಮಾಧ್ಯಮದ ಮೂಲಕ ಜನರಿಗೆ ಹೋಗುತ್ತದೆ. ಅವರಿಗೆ ಸರಿಯಾದ ಸಂದೇಶ ಹೋಗಬೇಕು ಎನ್ನುವ ಕಾರಣಕ್ಕಾಗಿ ಒಂದೆರಡು ನಿಮಿಷ ಟೈಮ್ ಕೊಡಿ. ಇಲ್ಲಿ ಇನ್ನೊಂದು ಏನು ಹೇಳಿದ್ದಾರೆಂದರೆ, FRP ಎಂದು ಒಂದು ಕೊಡುತ್ತಾರೆ. SAP ಎಂದು ಒಂದು ಕೊಡುತ್ತಾರೆ. ಆಮೇಲೆ recovery ಮೇಲೆ ಕೊಡುತ್ತಾರೆಂದು ಹೇಳಿ ಸದಸ್ಯರಾದ ಶ್ರೀ ಪಿ. ರಾಜೀವ್ ರವರು ಪ್ರಸ್ತಾಪ ಮಾಡಿದರು. FRP ಎನ್ನುವುದು ರೈತ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು

ಮಾಡುತ್ತಾನೆ, ಮಾಡಿದ 14 ದಿವಸದಲ್ಲಿ ಅವನಿಗೆ ಏನು recovery ಇದೆ, ಇದನ್ನು ಕೆಲವರು ಗೊಂದಲ ಮಾಡಿಕೊಂಡಿದ್ದಾರೆ. ಹಿಂದಿನ ವರ್ಷದ recovery percentage ಏನಿದೆ ಅದರ basis ಮೇಲೆ FRP ಗೆ 9.5% ಹಿಂದಿನ ಸಾಲಿನದು ಇದ್ದರೆ 2200 ರೂ.ಗಳು ಈ ವರ್ಷ ಕೊಡಬೇಕು. ಹೋದಸಲ 2100 ರೂ.ಗಳು ಇತ್ತು. 10.5% ಇದ್ದರೆ 2300 ರೂ.ಗಳನ್ನು ಒಂದು ಟನ್ ಕಬ್ಬಿಗೆ ಕೊಡಬೇಕು. ಇದನ್ನು 14 ದಿವಸದಲ್ಲಿ ಕೊಡಬೇಕು. ಅದು ಕೂಡ Sugarcane (control) Order ನಲ್ಲಿ ಇರುವ ಕಾರಣಕ್ಕೆ 14 ದಿವಸದೊಳಗೆ ರೈತನಿಗೆ ಪಾವತಿ ಮಾಡಬೇಕು. ಮಾಡದಿದ್ದರೆ 15ನೇ ದಿವಸದಿಂದ 15% interest ಅನ್ನು ಅವನಿಗೆ ಕೊಡಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ನೀವು ಎಷ್ಟು ಕಾನೂನು ತಂದು ಏನು ಮಾಡಿದರೂ ಮಾಲೀಕರು ಮತ್ತು ರೈತರು adjustment ಮಾಡಿಕೊಂಡು ಎಲ್ಲಾ ವ್ಯವಸ್ಥೆ ಆಗುತ್ತದೆ. ನೀವು ಇಲ್ಲಿ ಸುಮ್ಮನೆ ಕುಳಿತುಕೊಂಡು ಭಾಷಣ ಹೊಡೆಯುತ್ತಿದ್ದೀರಿ. ಏನೋ ಒಂದು ಭಯಕ್ಕೆ ಕಾನೂನು ತರಬೇಕು, ತನ್ನಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- ಆದ್ದರಿಂದ FRP ನಾವು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಆಧಾರದ ಮೇಲೆ ಹಿಂದಿನ ವರ್ಷದ recovery ಆಧಾರದ ಮೇಲೆ ಆ ಪ್ರಮಾಣದಲ್ಲಿ 14 ದಿವಸದೊಳಗೆ ಮೊದಲನೇ ಕಂತಿನ payment ಮಾಡಬೇಕು. ಅದನ್ನು payment ಮಾಡದಿದ್ದರೆ 15% ಬಡ್ಡಿ ದರದಲ್ಲಿ ಅವನು payment ಕೊಡುವವರೆಗೆ ವಿಧಿಸಲಾಗುತ್ತದೆ. ಅದು ಮೊದಲಿನ ವಿಧೇಯಕದಲ್ಲಿಯೇ ಇದೆ. ಆನಂತರದಲ್ಲಿ crushing season ಮುಗಿದ ಮೇಲೆ ಆ press mud, molasses, ಇತರೆ ಕೆಲವು ಉತ್ಪನ್ನಗಳು ಏನಿವೆ ಅವುಗಳನ್ನು ಪರಿಗಣನೆಗೆ ತೆಗೆದುಕೊಂಡು ಮತ್ತು ಆ ವರ್ಷದ recovery ಏನು ಬರುತ್ತದೆ ಅದನ್ನು ಗಮನದಲ್ಲಿಟ್ಟುಕೊಂಡು ಹೆಚ್ಚುವರಿ ಆದಾಯ ಏನು ಬರುತ್ತದೆ ಅದನ್ನು share ಮಾಡಿ ಆ share ಅನ್ನು ಮತ್ತೆ ರೈತನಿಗೆ pass on ಮಾಡಬೇಕು ಎನ್ನುವುದಕ್ಕೆ ಎರಡನೇ payment ಅನ್ನು crushing period ಮುಗಿದ ಮೇಲೆ ಎಂದು ಮಾಡಿರುತ್ತೇವೆ. ಮೊದಲು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಪ್ರಕಾರ ಅವನಿಗೆ ಏನು ಹಣ ಬರಬೇಕೋ

ಅದು ಬಂದು ಬಿಡುತ್ತದೆ. ಆಮೇಲೆ ಫ್ಯಾಕ್ಟರಿಯ ಲಾಭಾಂಶ ಏನು ಬರುತ್ತದೆ ಅದರಲ್ಲಿಯೂ SAP ಪ್ರಕಾರ ಅದನ್ನು ನಿಗದಿಪಡಿಸಿ ಕೊಡಿಸತಕ್ಕಂಥ ವ್ಯವಸ್ಥೆ ಇದೆ. ಇವರು ಹೇಳುವಂಥ ಎಲ್ಲಾ ಸಲಹೆಗಳನ್ನು ಮಾಡಿದೆ.

(ಗೊಂದಲ)

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:- ಇಲ್ಲಿ ಫ್ಯಾಕ್ಟರಿ owners 4 ಬೇಡಿಕೆಗಳನ್ನು ಇಟ್ಟಿದ್ದರು. ಮೊದಲನೆಯದು, ರಾಜ್ಯ ಸರ್ಕಾರ price fixation ಬಗ್ಗೆ FRP ಅನ್ನು ಅದರ ಮೇಲೆ fix ಮಾಡುವುದಕ್ಕೆ ಅವಕಾಶ ಕೊಡಬಾರದು ಎನ್ನುವುದು. ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಎರಡನೆಯದಾಗಿ, payment ಮಾಡಿಕೊಡಬೇಕೆಂದು ಕೇಳಿದ್ದರು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. Uniform Price ಕೊಡಬೇಕು. Ex-factory, Ex-gate ಬೇಡವೆಂದು ಅವರ ಬೇಡಿಕೆ ಇತ್ತು. ಅದನ್ನು ಮಾಡಿಕೊಟ್ಟಿದ್ದಾರೆ. ಜೊತೆಗೆ price based on factory recovery ಎಂದು ಇದೆ. ಅದನ್ನು ಮಾಡಿಕೊಟ್ಟಿದ್ದಾರೆ. Factory ಯೊಳಗೆ ಅವರ efficiency ಸರಿಯಿಲ್ಲದೇ, machinery equipmentಗಳು ಸರಿಯಿಲ್ಲದೇ ಅವರ recovery ಕಡಿಮೆ ಆದರೆ ಅದನ್ನು ರೈತರ ತಲೆ ಮೇಲೆ ಏರುತ್ತಿದ್ದೀರಿ. ಇವತ್ತು ನೀವು ರೈತರ ಪರವಾಗಿ ತಾವು ಖಂಡಿತವಾಗಿಯೂ ಮಾಡುತ್ತಿಲ್ಲ. ಯೋಚನೆ ಮಾಡಿ. Matter court ನಲ್ಲಿರುವುದರಿಂದ ಕೋರ್ಟ್ ಯಾವ ನಿರ್ಧಾರಕ್ಕೆ, 15 ದಿವಸದ ಕೆಳಗಡೆ ನಿಮ್ಮ A.G ಯವರು ಕೋರ್ಟ್‌ನಲ್ಲಿ ಏನು statement ಕೊಟ್ಟಿದ್ದಾರೆ ನೋಡಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ಮಾತಿನಲ್ಲಿ ಒಂದು ವಿಷಯವನ್ನು ನಾನು ಗಮನಿಸಿದ್ದೇನೆ.

(ಗೊಂದಲ)

ಶ್ರೀ ಎಲ್.ಎ. ರವಿಸುಬ್ರಮಣ್ಯ:- ಮಾನ್ಯ ಅಧ್ಯಕ್ಷರೆ, 15 ದಿವಸದ ಕೆಳಗೆ A.G ಯವರು ಏನು statement ಹೇಳಿದ್ದಾರೆ ಎನ್ನುವುದನ್ನು ನಂಬಿಸಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಯಾವ factory ಉತ್ತಮವಾದಂತಹ ಯಂತ್ರೋಪಕರಣಗಳನ್ನು ಹೊಂದಿರುವುದಿಲ್ಲ, ಸುಸ್ಥಿತಿಯಲ್ಲಿರುವುದಿಲ್ಲ ಅಲ್ಲಿ recovery ಕಡಿಮೆ ಆಗುತ್ತದೆ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಈ ಒಂದು area restriction...

(ಗೊಂದಲ)

ಅಧ್ಯಕ್ಷರು:– ಈಗ ಸಂಶಯ ಏಕೆ ಬರುತ್ತದೆ ಎಂದರೆ, ನಿಮ್ಮ ಕ್ಯಾಬಿನೆಟ್‌ನೊಳಗೇ sugar factory owner ಇರುತ್ತಾರೆ ಹಾಗಾಗಿ ಸಂಶಯ ಬರುತ್ತದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಯಾರು ಒಳ್ಳೆಯ efficient machinery ಇಟ್ಟುಕೊಂಡಿರುತ್ತಾರೆ...

(ಗೊಂದಲ)

ಶ್ರೀ ಸಿ.ಟಿ. ರವಿ:– Sugar Factory owners ಏನು demands ಇಟ್ಟಿದ್ದರು, ಅದು ಅಷ್ಟನ್ನೂ act ನಲ್ಲಿ fulfill ಮಾಡಿದ್ದಾರೆ, ಧನ್ಯವಾದ.!

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇದು ನೂರಕ್ಕೆ ನೂರಷ್ಟು ಮಾಲೀಕರ ಪರವಾಗಿ, ಸಕ್ಕರೆ ಕಾರ್ಖಾನೆ ಮಾಲೀಕರ ಪರವಾಗಿ ಇರುವುದು ಎಂಬುದು ಸಾಬೀತಾಗುತ್ತಿದೆ. ಕೋರ್ಟ್‌ನಲ್ಲಿ ಛೀಮಾರಿ ಹಾಕಿಸಿಕೊಳ್ಳಬಾರದು ಎಂದು ಈ ಬಿಲ್‌ಅನ್ನು ತರುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತಿದೆ. ಇದು ರೈತರ ವಿರೋಧಿ ಎನ್ನುವುದು ಇನ್ನಷ್ಟು ಸ್ಪಷ್ಟವಾಗುತ್ತಿದೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– violation ಇದೆಯಲ್ಲಾ? Essential Commodities Act ಪ್ರಕಾರ ...

(ಗೊಂದಲ)

ಶ್ರೀ ಪಿ. ರಾಜೀವ್:– SISMA ಅವರು ಏನು ಕೋರ್ಟ್‌ನಲ್ಲಿದ್ದಾರೆ ಅವರಿಗೆ ಅನುಕೂಲವಾಗುವಂತಹ amendment ಅನ್ನು ಇವತ್ತು ಇಲ್ಲಿ ತರುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– violation ಮಾಡುವುದಕ್ಕೆ ಹೇಗೆ ಬರುತ್ತದೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಕಾನೂನು violation ಯಾವುದೂ ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Ex-field ಮಾಡಿದ್ದರೆ ನಿಮಗೆ ಏನು ತೊಂದರೆಯಾಗುತ್ತಿತ್ತು? ಕೇಂದ್ರ ಸರ್ಕಾರ ಮಾಡಬೇಕಾಗಿತ್ತಲ್ಲವೇ? ಅದನ್ನು ಬಿಟ್ಟು ನಿಮಗೆ ಯಾವ ತೊಂದರೆ ಇದೆ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– Ex-field ಯಾವ ಆಧಾರದ ಮೇಲೆ ಮಾಡುತ್ತೀರಿ? ಅದನ್ನು ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Essential Commodities Act ಇದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– Essential Commodities Act ಅಡಿಯಲ್ಲಿಯೇ sugar control order ತಂದಿರುವುದು.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, 2,500 ರೂಪಾಯಿ price fix ಮಾಡಿದರಲ್ಲಾ ಯಾವ base ಮೇಲೆ ಮಾಡಿದರು?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– Essential Commodities Act ನಲ್ಲಿ ಏನಿದೆ ಎನ್ನುವುದು ನನ್ನ ಹತ್ತಿರ ಇದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ನ್ಯಾಯಾಲಯದ ಮುಂದೆ ನಮ್ಮ ಪರವಾಗಿ ವಾದ ಮಾಡುವ ಹಾಗೆ ಮಾಡಿದರೆ ಇದು ಬಗೆಹರಿಯುವುದಿಲ್ಲ. ಈ ಸುಕೃತವಾದ ಅಧಿಕಾರವನ್ನು ಈ ಸಮಿತಿಗೆ ಕೊಡಬೇಕು. ಆಗ ಮಾತ್ರ ನಿಯಂತ್ರಣ ತರಲಿಕ್ಕೆ ಸಾಧ್ಯವಾಗುತ್ತದೆ.

(ಗೊಂದಲ)

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಇಲ್ಲಿ Act ದೊಡ್ಡದಾಗುತ್ತದೆಯೋ ಅಥವಾ ರೂಲ್ ದೊಡ್ಡದಾಗುತ್ತದೆಯೋ?

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:– ಆದ್ದರಿಂದ ನಾವು ಏನು ವಿಧೇಯಕವನ್ನು ತಂದಿದ್ದೇವೆ ಅದು ರೈತರ ಪರವಾಗಿ ಇದೆ ಮತ್ತು ರೈತರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಇದನ್ನು ಪಾಸ್ ಮಾಡಿಕೊಡಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರುಗಳು ಸದನದ ಬಾವಿಯೊಳಗೆ ಬಂದು ಧಿಕ್ಕಾರ ಕೂಗುತ್ತಿದ್ದರು)

ಪರ್ಯಾಲೋಚನಾ ಪ್ರಸ್ತಾವ

2014 ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕ

ಅಧ್ಯಕ್ಷರು:– 2014 ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014 ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು “ಹೌದು” ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು “ಇಲ್ಲ” ಸೂಚಿಸಬೇಕು

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

2 ರಿಂದ 8 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು “ಹೌದು” ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು “ಇಲ್ಲ” ಎಂದು ಸೂಚಿಸಬೇಕು

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು “ಹೌದು” ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 8ವರೆಗಿನ ಖಂಡಗಳು ವಿಧೇಯಕದ ಅಂಗವಾದವು

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ

ಅಧ್ಯಕ್ಷರು:– ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರು)**:–** ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014 ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ)

ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಅನುಬಂಧ–1)

ಅಧ್ಯಕ್ಷರು:– ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ರಾತ್ರಿ 9 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 24.07.2014 ರ ಗುರುವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2014

(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 44)

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು (2013ರ ಕರ್ನಾಟಕ ಅಧಿನಿಯಮ 33) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ:- ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 33) (ಇಲ್ಲಿ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (ಎ)ಖಂಡಕ್ಕೆ (ಎಎ) ಖಂಡ ಎಂದು ಮರುಸಂಖ್ಯೆ ನೀಡತಕ್ಕದ್ದು ಹಾಗೂ ಹಾಗೆ ಮರುಸಂಖ್ಯೆ ನೀಡಲಾದ (ಎಎ) ಖಂಡದ ಮೊದಲು, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ) "ಹೆಚ್ಚುವರಿ ಕಬ್ಬು ಬೆಲೆ" ಎಂದರೆ, ಮಂಡಲಿಯ ತೀರ್ಮಾನದ ಆಧಾರದ ಮೇಲೆ, 4ಎ ಪ್ರಕರಣದ ಅಡಿಯಲ್ಲಿ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಘೋಷಿಸಲ್ಪಟ್ಟ ನ್ಯಾಯ ಮತ್ತು ಪರಿಶ್ರಮ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಕಾರ್ಖಾನೆಯ ಅಧಿಭೋಗದಾರನು ಕಾರ್ಖಾನೆಯ ದ್ವಾರದ ಬಳಿಯಲ್ಲಿ ಒಪ್ಪಿಸಲಾದ ಕಬ್ಬಿಗಾಗಿ ಕಬ್ಬು ಬೆಳೆಗಾರನಿಗೆ ಸಂದಾಯಮಾಡಲಾದ ಹೆಚ್ಚುವರಿ ಬೆಲೆ"

(ii) (ಇ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇಎ) "ಕಬ್ಬಿನ ನ್ಯಾಯ ಮತ್ತು ಪರಿಶ್ರಮ ಬೆಲೆ (ಎಫ್‌ಆರ್‌ಪಿ)" ಅಂದರೆ, ಕಾರ್ಖಾನೆಯ ದ್ವಾರದಲ್ಲಿ ಒಪ್ಪಿಸಲಾದ ಕಬ್ಬಿಗಾಗಿ, ಆ ವರ್ಷಕ್ಕಾಗಿ,

ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿದ ಬೆಲೆ;"

(ಋ) (ಎನ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎನ್) "ವರ್ಷ" ಎಂದರೆ, ಜುಲೈ ಮೊದಲನೇ ದಿನದಂದು ಪ್ರಾರಂಭವಾಗಿ ಮುಂಬರುವ ವರ್ಷದ ಜೂನ್ ಮೂವತ್ತಕ್ಕೆ ಕೊನೆಗೊಳ್ಳುವ ವರ್ಷ."

3. 3ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಮಂಡಲಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಕ್ಕರೆ ಸಚಿವರು	– ಅಧ್ಯಕ್ಷರು
(ಬಿ) ಕೃಷಿ ಸಚಿವರು	– ಉಪಾಧ್ಯಕ್ಷರು
(ಸಿ) ಸಹಕಾರ ಸಚಿವರು	– ಸದಸ್ಯರು
(ಡಿ) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ	– ಸದಸ್ಯರು
(ಇ) ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	– ಸದಸ್ಯರು
(ಎಫ್) ಕೃಷಿ ಆಯುಕ್ತರು	– ಸದಸ್ಯರು
(ಜಿ) ನಿಯಂತ್ರಕರು, ಕಾನೂನು ಮಾಪನ	– ಸದಸ್ಯರು
(ಹೆಚ್) ಯಾವೊಬ್ಬ ಕಬ್ಬು ಬೆಳೆಗಾರರ ಪೈಕಿಯಿಂದ ರಾಜ್ಯ ಸರ್ಕಾರವು	– ಸದಸ್ಯರು

ನಾಮನಿರ್ದೇಶನ ಮಾಡಿದ ಐದಕ್ಕೆ
ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ, ಮೈಸೂರು
ಮತ್ತು ಬೆಂಗಳೂರು ಪ್ರತಿ ಕಂದಾಯ
ವಿಭಾಗದಿಂದ ಕನಿಷ್ಟ ಒಬ್ಬ ಸದಸ್ಯರು) ರಾಜ್ಯ
ಸರ್ಕಾರವು ನಾಮನಿರ್ದೇಶನ ಮಾಡಿದ
ಪ್ರತಿನಿಧಿಗಳು.

(ಐ) ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವವರ – ಸದಸ್ಯರು
ಪೈಕಿಯಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶನ
ಮಾಡಿದ ಐದಕ್ಕೆ ಮೀರದಷ್ಟು (ಬೆಳಗಾವಿ, ಗುಲ್ಬರ್ಗಾ,
ಮೈಸೂರು ಮತ್ತು ಬೆಂಗಳೂರು ಪ್ರತಿ ಕಂದಾಯ
ವಿಭಾಗದಿಂದ ಕನಿಷ್ಟ ಒಬ್ಬರು ಹಾಗೂ ಅವರಲ್ಲಿ
ಕನಿಷ್ಟ ಇಬ್ಬರು ಸಹಕಾರಿ ಸಕ್ಕರೆ ಕಾರ್ಖಾನೆಗಳ
ಪ್ರತಿನಿಧಿಗಳಗಾಗಿರತಕ್ಕದ್ದು) ಸಕ್ಕರೆ ಕಾರ್ಖಾನೆ
ಅಧಿಭೋಗದಾರರ ಪ್ರತಿನಿಧಿಗಳು.

(ಜೆ) ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ – ಸದಸ್ಯರು
ಸಂಸ್ಥೆ, ಬೆಳಗಾವಿ

(ಕೆ) ರಾಜ್ಯ ಸರ್ಕಾರವು ನಾಮನಿರ್ದೇಶನ – ಸದಸ್ಯರು
ಮಾಡಿದ ಧಾರವಾಡ ಅಥವಾ ಬೆಂಗಳೂರಿನ
ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಿಂದ
ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ

(ಎಲ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ – ಸದಸ್ಯರು

ಸಕ್ಕರೆ ನಿರ್ದೇಶಕರು ಕಾರ್ಯದರ್ಶಿ"

(ii) (2)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(2ಎ) ಮಂಡಲಿಯು ವಿಶೇಷ ಆಹ್ವಾನಿತರನ್ನು, ಅವರ ಅಭಿಪ್ರಾಯಗಳನ್ನು ಪಡೆಯುವುದು ಅವಶ್ಯವೆಂದು ಭಾವಿಸಿದಲ್ಲಿ, ಆಹ್ವಾನಿಸಬಹುದು."

(iii) (8)ನೇ ಪ್ರಕರಣದ "ಕಬ್ಬು ಅರೆಯುವ ಹಂಗಾಮು ಪ್ರಾರಂಭವಾಗುವ ಮುಂಚೆ, ಕಬ್ಬು ಅರೆಯುವ ಹಂಗಾಮು ಮುಕ್ತಾಯದ ನಂತರ ಮತ್ತು ಅಕ್ಕರೆ ಹಂಗಾಮಿನ ಅಂತ್ಯದಲ್ಲಿ" ಎಂಬ ಪದಗಳಿಗೆ "ವರ್ಷವು ಪ್ರಾರಂಭವಾದಾಗಿನಿಂದ ಮೊದಲುಗೊಂಡು ನಾಲ್ಕು ತಿಂಗಳುಗಳಿಗೆ ಒಮ್ಮೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) (10)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(11) ಕಬ್ಬು ನಿಯಂತ್ರಣ ಮಂಡಳಿಯ ಸರ್ಕಾರೇತರ ಸದಸ್ಯರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳನ್ನು ನಿಯಮಿಸಬಹುದಾದ ದರಗಳಲ್ಲಿ ಸಂದಾಯ ಮಾಡತಕ್ಕದ್ದು.

(12) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಚೇರಿ, ಬೆಂಗಳೂರು ಇವರಿಗೆ ನಿಧಿಯನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮಂಡಲಿಯ ಕಾರ್ಯನಿರ್ವಹಣೆಗೆ ಅಗತ್ಯವಾದ ನಿಧಿಯನ್ನು ಸರ್ಕಾರವು ಆಯವ್ಯಯದಲ್ಲಿ ಕಲ್ಪಿಸತಕ್ಕದ್ದು."

4. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದ (ಎಫ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ವರ್ಷಕ್ಕಾಗಿ ನ್ಯಾಯ ಮತ್ತು ಪರಿಶ್ರಮ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ತೀರ್ಮಾನಿಸುವುದು;

(ಜಿ) 4ಬಿ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದ ಕಾರ್ಖಾನೆ ಇತ್ಯಾದಿಯ ಆದಾಯಗಳು ಮತ್ತು ವೆಚ್ಚಗಳು, ಲೆಕ್ಕಪತ್ರದ ಪುಸ್ತಕಗಳು, ಯಾವುದಾದರೂ ಇದ್ದಲ್ಲಿ, ಆ ವಿಷಯಗಳನ್ನೂ ಒಳಗೊಂಡಂತೆ, ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ವಿಚಾರಣೆಗೊಳಪಡಿಸುವುದು;

(ಎಚ್) ಆದಾಯ ಪ್ರಾಪ್ತಿಯಮೇಲೆ (revenue realization) ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲಾದ ತಜ್ಞರ ಸಮಿತಿಯ ವರದಿಯನ್ನು ಪರಿಗಣಿಸುವುದು;

(ಐ) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು."

5. 4ಎ, 4ಬಿ, 4ಸಿ ಮತ್ತು 4ಡಿ ಹೊಸ ಪ್ರಕರಣಗಳ ಸೇರ್ಪಡೆ.– ಮೂಲ ಅಧಿನಿಯಮದ 4ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"4ಎ. ಕಬ್ಬಿನ ಹೆಚ್ಚುವರಿ ಕಬ್ಬು ಬೆಲೆಯ ಘೋಷಣೆ.– (1) ಮಂಡಲಿಯ ನಿರ್ಧಾರದಂತೆ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಅಧಿಸೂಚನೆಯ ಮೂಲಕ, ವರ್ಷಕ್ಕಾಗಿ ನ್ಯಾಯ ಮತ್ತು ಪರಿಶ್ರಮ ಬೆಲೆಗಿಂತ ಮೇಲೆ ಹಾಗೂ ಹೆಚ್ಚಾಗಿ ಹೆಚ್ಚುವರಿ ಕಬ್ಬು ಬೆಲೆಯನ್ನು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ರಾಜ್ಯ ವಿಧಾನ ಮಂಡಲದ ಉಭಯ ಸಧನಗಳ ಮುಂದೆ ಮಂಡಿಸತಕ್ಕದ್ದು.

4ಬಿ. ಮಂಡಲಿಯು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕದ್ದು.– ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿನ ವಿಷಯಗಳಲ್ಲಿ ವಿಚಾರಣೆ ಮಾಡುವ ಸಂದರ್ಭದಲ್ಲಿ, ಸಿವಿಲ್‌ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ರಾಜ್ಯದ ಯಾವೊಬ್ಬ ವ್ಯಕ್ತಿಗೆ ಸಮನು ನೀಡುವುದು ಮತ್ತು ಆತನ ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಆತನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರಿಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ (ಅಫಿದಾವಿಟ್ಟು) ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ದಸ್ತಾವೇಜುಗಳು ಮತ್ತು ಸಾಕ್ಷಿಗಳ ವಿಚಾರಣೆಗಾಗಿ ಅಧಿಕಾರಾದೇಶಗಳನ್ನು(ಛಿಂಟಟಖುಂಟಿ) ಹೊರಡಿಸುವುದು;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

4ಸಿ. ಆದಾಯ ಪ್ರಾಪ್ತಿಯನ್ನು ಲೆಕ್ಕ ಹಾಕುವುದಕ್ಕಾಗಿ ಸಮಿತಿ:– (1) ಸಕ್ಕರೆ ಕಾರ್ಖಾನೆಯಲ್ಲಿ ಆದಾಯ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಲ್ಲಿ ಮಂಡಲಿಗೆ ಸಲಹೆ

ನೀಡಲು ಸರ್ಕಾರವು ಈ ಕೆಳಗಿನವರನ್ನೊಳಗೊಂಡ ತಜ್ಞ ಸಮಿತಿಯೊಂದನ್ನು ರಚಿಸತಕ್ಕದ್ದು,-

(ಎ) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು	- ಅಧ್ಯಕ್ಷರು
(ಬಿ) ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	- ಸದಸ್ಯರು
(ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಕೃಷಿ ಹಣಕಾಸು ತಜ್ಞ	- ಸದಸ್ಯರು
(ಡಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಧಾರವಾಡ ಅಥವಾ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಪ್ರಾಧ್ಯಾಪಕ ವೃಂದದ ಒಬ್ಬ ಸಕ್ಕರೆ ಕೃಷಿ ಶಾಸ್ತ್ರಜ್ಞ	- ಸದಸ್ಯರು
(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಅಥವಾ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಇಲ್ಲಿನ ಒಬ್ಬ ತಂತ್ರಜ್ಞ	- ಸದಸ್ಯರು
(ಎಫ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಕಚೇರಿಯ ಕೇಂದ್ರ ಸ್ಥಾನ ಸಹಾಯಕರು (ಹೆಚ್‌ಕ್ಯೂಎ)	- ಸದಸ್ಯರು ಕಾರ್ಯದರ್ಶಿ

(2) ಸರ್ಕಾರದ ಇಚ್ಛೆಗೊಳಪಟ್ಟು, ಸಮಿತಿಯ ನಾಮನಿರ್ದೇಶಿತ ಸದಸ್ಯರ ಪದಾವಧಿಯು ಎರಡು ವರ್ಷಗಳಾಗಿರತಕ್ಕದ್ದು.

(3) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವರ್ಷದ ಕೊನೆಯಲ್ಲಿ ಮಾಡಿದ ಕಾರ್ಖಾನೆವಾರು ವಸೂಲಾತಿಯ ಪ್ರಕಟಣೆಯ ತರುವಾಯ ಪ್ರತಿಯೊಂದು ಸಕ್ಕರೆ ಕಾರ್ಖಾನೆಯ ಆದಾಯದ ಪ್ರಾಪ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸಕ್ಕರೆ ಕಾರ್ಖಾನೆಯ ತಪಾಸಣೆ ಮಾಡುವ ಮತ್ತು ಹದಿನೈದು ದಿನಗಳೊಳಗಾಗಿ ಮಂಡಲಿಗೆ ವರದಿಯನ್ನು ಸಲ್ಲಿಸುವ ಅಧಿಕಾರವನ್ನು ತಜ್ಞ ಸಮಿತಿಯು ಹೊಂದಿರತಕ್ಕದ್ದು. ಮಂಡಲಿಯು, ವರದಿಯನ್ನು ಪರಿಗಣಿಸಿದ ಮೇಲೆ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಮಾಹಿತಿಯನ್ನು ಸಂಗ್ರಹಿಸಿದ ತರುವಾಯ, ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸತಕ್ಕದ್ದು.

4ಡಿ. ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ ಮಂಡಲಿಯು ಪರಿಗಣಿಸಬೇಕಾದ ಅಂಶಗಳು.– ಮಂಡಲಿಯು ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಾಗ ಈ ಮುಂದಿನ ಅಂಶಗಳನ್ನು ಪರಿಗಣಿಸತಕ್ಕದ್ದು, ಎಂದರೆ :–

(1) ಕಾರ್ಖಾನೆ ದ್ವಾರದಲ್ಲಿ ಒಪ್ಪಿಸಲಾದ ಕಬ್ಬಿನ ದಾಖಲಿಸಲಾದ ತೂಕ, ಅರೆದ ಕಬ್ಬಿನಿಂದ ವಾಸ್ತವವಾಗಿ ಪ್ರಾಪ್ತವಾದ ಆದಾಯದ, ಮತ್ತು ಸಕ್ಕರೆ ಉತ್ಪಾದನೆ ಹಾಗೂ ಅದರ ಉಪ–ಉತ್ಪತ್ತಿ ಎಂದರೆ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ಯಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ;

ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ, ವರ್ಷದಲ್ಲಿ ಅರೆದ ಕಬ್ಬಿನಿಂದ ಪ್ರಾಪ್ತವಾದ ಆದಾಯವು, ಸಕ್ಕರೆಯ ವಾಸ್ತವ ಉತ್ಪಾದನೆ ಮತ್ತು ಅದರ ಉಪ–ಉತ್ಪತ್ತಿಗಳಾದ ಕಬ್ಬಿನ ಸಿಪ್ಪೆ, ಕಾಕಂಬಿ, ಪ್ರೆಸ್–ಮಡ್; ಮತ್ತು ತಾವುದೇ ಇತರ ಉತ್ಪನ್ನದ ಉತ್ಪಾದನೆಗಾಗಿ ನೇರವಾಗಿ ಬಳಸಲಾದ ಕಬ್ಬಿನ ರಸ, ಯಾವುದಾದರೂ ಇದ್ದಲ್ಲಿ, ಅವುಗಳನ್ನು ಮಾರಾಟ ಮಾಡಿರದಿದ್ದಾಗ್ಯೂ, ಮಾರಾಟಗಳು, ಪ್ರಾರಂಭದ ಮತ್ತು ಮುಕ್ತಾಯದ ದಾಸ್ತಾನನ್ನು ಪರಿಗಣಿಸಿ ಸೂಕ್ತವಾಗಿ ಮೌಲ್ಯಮಾಡಿದವುಗಳನ್ನು ಒಳಗೊಳ್ಳುತ್ತದೆ.

(2) ಆದಾಯ ಪ್ರಾಪ್ತಿಯ ಮೇಲೆ ಹೆಚ್ಚುವರಿ ಕಬ್ಬು ಬೆಲೆಯ ನಿರ್ಧರಣೆಗಾಗಿ 4ಸಿ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟ ತಜ್ಞ ಸಮಿತಿಯ ವರದಿ.

(3) ನಿಯಮಿಸಬಹುದಾದ ಅಂಥ ಇತರ ಅಂಶಗಳು."

6. 7ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 7ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"7. ಮೀಸಲು ಪ್ರದೇಶದಿಂದ ಕಬ್ಬಿನ ಖರೀದಿ.– ಮೀಸಲು ಪ್ರದೇಶದಿಂದ ಸಕ್ಕರೆ ಕಾರ್ಖಾನೆಗಳ ಮೂಲಕ ಕಬ್ಬಿನ ಖರೀದಿಯನ್ನು, ಕಾಲಕಾಲಕ್ಕೆ ತಿದ್ದುಪಡಿಯಾಗಿರುವ ಕಬ್ಬು (ನಿಯಂತ್ರಣ) ಆದೇಶ, 1966ರ ಅನ್ವಯ, ನಿಯಂತ್ರಣ ಮಾಡತಕ್ಕದ್ದು."

7. 8ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ದ್ವಾರದ ಹೊರಗಿನ (exgate) ಆಧಾರದ ಮೇಲೆ ಕಾರ್ಖಾನೆಯಲ್ಲಿ ದಾಖಲಿಸಲಾದ ತೂಕದ ಆಧಾರದ ಮೇಲೆ ಕಬ್ಬಿನ ಖರೀದಿ ಮತ್ತು ಸರಬರಾಜಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಮತ್ತು ಗುತ್ತಿಗೆಗಳನ್ನು, ಅಂಕೀಕೃತ (ಡಿಜಿಟಲೈಸ್ಡ್) ಮೆಟ್ರಿಕ್ ಪದ್ಧತಿ ತೂಕಗಳು ಮತ್ತು ಅಳತೆಗಳ ಅನುಸಾರವಾಗಿ ಮಾಡತಕ್ಕದ್ದು ಮತ್ತು ಸಕ್ಕರೆ ಕಾರ್ಖಾನೆಗಳ ಕಬ್ಬು ಪ್ರಾಂಗಣಗಳಲ್ಲಿ ಸ್ವಯಂಚಾಲಿತ ಫಲಕಗಳಲ್ಲಿ ಪ್ರದರ್ಶಿಸತಕ್ಕದ್ದು."

(ಬಿ) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಯಾವುದೇ ನಿಖರವಲ್ಲದ, ಅನಧಿಕೃತವಾದ ಪ್ರಮಾಣೀಕರಿಸಿಲ್ಲದ ತಕ್ಕಡಿಗಳು ಅಥವಾ ತೂಕಗಳು ಅಥವಾ ಯಾಂತ್ರಿಕ

ತೂಕದ ಉಪಕರಣಗಳನ್ನು, ಕಾರ್ಖಾನೆಯ ಅಧಿಭೋಗದಾರನು ಅಥವಾ ಅವನ ಪರವಾಗಿ ವ್ಯಕ್ತಿಯ ಬಳಸತಕ್ಕದ್ದಲ್ಲ, ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ ಅಥವಾ ಕ್ವಿಂಟಾಲ್‌ನ 1/20ರ ಸಮೀಪದ ತೂಕಕ್ಕೆ ಹಾಗೂ ಬಹುವಿಧದ ಹಾಗೂ ಅದರ ಉಪ ವಿಧಗಳ ಮೆಟ್ರಿಕ್ ಪದ್ಧತಿಗೆ ಅನುಸಾರವಾಗಿರದ, ದಾಖಲಿಸಲಾದ ತೂಕವನ್ನು ಕಬ್ಬು ಮಾರಾಟಗಾರರಿಗೆ ಸುಲಭವಾಗಿ ಓದಲು ಸಾಧ್ಯವಾಗುವುದಿಲ್ಲವೋ ಅಂತಹ ತೂಕದ ಯಂತ್ರವನ್ನು ಉಪಯೋಗಿಸತಕ್ಕದ್ದಲ್ಲ:

ಪರಂತು, ಐದು ಕಿಲೋಗ್ರಾಂಗಳವರೆಗೆ ಅಥವಾ ಶೇಕಡಾ ಒಂದರಷ್ಟು ಅಂತರದ ತೂಕದ ವ್ಯತ್ಯಾಸ ಇವೆರಡರಲ್ಲಿ ಯಾವುದು ಕಡಿಮೆಯೋ ಅಂತಹ ವ್ಯತ್ಯಾಸವನ್ನು ಪರಿಗಣಿಸತಕ್ಕದ್ದಲ್ಲ:

ಮತ್ತು ಪರಂತು, ಮತ್ತಷ್ಟು ಸರಿಪಡಿಸಲು ಅಸಾಧ್ಯವಾದ ತೂಕದ ಯಂತ್ರವು ಸರಿಯಾದ ತೂಕದ ಶೇಕಡ ಒಂದರಷ್ಟು ವ್ಯತ್ಯಾಸ ತೂಗುವುದನ್ನು ಸಮರ್ಪಕವಾಗಿಲ್ಲವೆಂದು ಭಾವಿಸತಕ್ಕದ್ದಲ್ಲ."

8. 9ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಕಬ್ಬು ಬೆಳೆಗಾರರಿಗೆ ಪಾವತಿಯನ್ನು ಎರಡು ಹಂತಗಳಲ್ಲಿ ಮಾಡತಕ್ಕದ್ದು. ಮೊದಲ ಹಂತದಲ್ಲಿ, ಕಬ್ಬನ್ನು ಸರಬರಾಜು ಮಾಡಿದ ತಕ್ಷಣ, ಕಾರ್ಖಾನೆಯ ಅಧಿಭೋಗದಾರನು ಸಂಬಂಧಪಟ್ಟ ಕಾರ್ಖಾನೆಯ ಹಿಂದಿನ ವರ್ಷದ ವಸೂಲಾತಿಯ ಆಧಾರದ ಮೇಲೆ ನ್ಯಾಯ ಮತ್ತು ಪರಿಶ್ರಮದ ಬೆಲೆಯನ್ನು ಪಾವತಿಸತಕ್ಕದ್ದು. ಕಬ್ಬು ಪಾವತಿಯ ಇತರ ಎಲ್ಲಾ ಷರತ್ತುಗಳು ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಇರತಕ್ಕದ್ದು.

(1ಎ) ಎರಡನೇ ಹಂತದಲ್ಲಿ, 4ಎ ಪ್ರಕರಣದ ಅಡಿಯಲ್ಲಿ ಘೋಷಣೆಯಾದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಕಾರ್ಖಾನೆಯ ಅಧಿಭೋಗದಾರನು ಹೆಚ್ಚುವರಿ ಕಬ್ಬು ಬೆಲೆಯ ಪಾವತಿಯನ್ನು ಮಾಡತಕ್ಕದ್ದು.

(1ಬಿ) ಈ ಅಧಿನಿಯಮದ ಅಡಿಯಲ್ಲಿ ಕಾರ್ಖಾನೆಯ ಅಧಿಭೋಗದಾರನು ಮಾಡುವ ಪ್ರತಿಯೊಂದು ಪಾವತಿಯನ್ನು, ಕಬ್ಬು ಬೆಳೆಗಾರನಿಗೆ ಆತನ ಬ್ಯಾಂಕ್ ಖಾತೆಯ ಮೂಲಕ ಮಾತ್ರವೇ ಪಾವತಿಸತಕ್ಕದ್ದು.

(1ಸಿ) ನ್ಯಾಯ ಮತ್ತು ಪರಿಶ್ರಮ ಬೆಲೆಯ ಸಂಬಂಧದಲ್ಲಿನ ಕಬ್ಬು (ನಿಯಂತ್ರಣ) ಆದೇಶ, 1966ರ ಬಾಕಿಗಳನ್ನು ವಸೂಲಿ ಮಾಡುವ ಉಪಬಂಧಗಳು ಹೆಚ್ಚುವರಿ ಕಬ್ಬು ಬೆಲೆಯ ಹಿಂಬಾಕಿಯ ವಸೂಲಾತಿಗೂ ಕೂಡಾ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗೆ, ಎಂದರೆ:-

(ಎ) ಈ ಮುಂದಿನ ಪದಗಳನ್ನು ಪರಿಭಾಷಿಸಲು, ಎಂದರೆ:-

(i) ಹೆಚ್ಚುವರಿ ಕಬ್ಬು ಬೆಲೆ;

(ii) ನ್ಯಾಯ ಮತ್ತು ಪರಿಶ್ರಮ ಬೆಲೆ; ಮತ್ತು

(iii) ವರ್ಷ.

(ಬಿ) ರಾಜ್ಯದ ಎಲ್ಲಾ ಕಂದಾಯ ವಿಭಾಗಗಳನ್ನು ಪ್ರತಿನಿಧಿಸುವ ಕಬ್ಬು ಬೆಳೆಗಾರರು ಮತ್ತು ಕಬ್ಬು ಕಾರ್ಖಾನೆಯ ಮಾಲೀಕರಿಗೆ ಸಮನಾದ ಪ್ರಾತಿನಿಧ್ಯವನ್ನು ನೀಡುವುದಕ್ಕಾಗಿ ಕಬ್ಬು ನಿಯಂತ್ರಣ ಮಂಡಲಿಯನ್ನು ಪುನರ್‌ರಚಿಸಲು;

(ಸಿ) ವ್ಯಕ್ತಿಗಳಿಗೆ, ಸಮನು ನೀಡುವುದು, ದಸ್ತಾವೇಜುಗಳು ಇತ್ಯಾದಿಗಳನ್ನು ಹುಡುಕುವಂಥ ತಮ್ಮ ಪ್ರಕಾರ್ಯಗಳನ್ನು ನೆರವೇರಿಸುವ

ವಿಷಯಗಳಲ್ಲಿ ವಿಚಾರಣೆಯನ್ನು ನಡೆಸುವುದಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಕಬ್ಬು ನಿಯಂತ್ರಣ ಮಂಡಲಿಗೆ ನೀಡಲು;

(ಡಿ) ಕಬ್ಬು ನಿಯಂತ್ರಣ ಮಂಡಲಿಯ ತೀರ್ಮಾನದ ಮೇಲೆ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಹೆಚ್ಚುವರಿ ಕಬ್ಬು ಬೆಲೆಯನ್ನು ಘೋಷಿಸಲು;

(ಇ) ಸಕ್ಕರೆ ಕಾರ್ಖಾನೆಯಲ್ಲಿ ವಾಸ್ತವಿಕ ಪ್ರಾಪ್ತಿಯನ್ನು (actual realization) ಲೆಕ್ಕಹಾಕುವುದಕ್ಕಾಗಿ ತಜ್ಞ ಸಮಿತಿಯನ್ನು ರಚಿಸಲು;

(ಎಫ್) ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವುದಕ್ಕಾಗಿ, ಕಬ್ಬಿನ ವಾಸ್ತವಿಕ, ವಸೂಲಾತಿ ಸಕ್ಕರೆಯ ಪ್ರಾಪ್ತಿ ಮತ್ತು ಕಬ್ಬಿನ ಸಿಪ್ಪೆ, ಪ್ರೆಸ್–ಮಡ್ ಮತ್ತು ಕಾಕಂಬಿ ಎಥೆನಾಲ್ ಅಥವಾ ಸಕ್ಕರೆಯನ್ನು ಉತ್ಪಾದಿಸದೇ ಕಬ್ಬಿನ ರಸದಿಂದ ನೇರವಾಗಿ ಉತ್ಪಾದಿಸಲಾದ ಇತರ ಉತ್ಪಾದನೆಗಳನ್ನು ಪರಿಗಣಿಸಲು;

(ಜಿ) ಎರಡು ಹಂತಗಳಲ್ಲಿ ಕಬ್ಬು ಬೆಲೆಯನ್ನು ಪಾವತಿಸಲು, ಎಂದರೆ:–

(i) ಮೊದಲ ಹಂತದಲ್ಲಿ, ಕಬ್ಬಿನ ಸರಬರಾಜಿಗೆ, ಹಿಂದಿನ ವರ್ಷಗಳ ವಸೂಲಾತಿಯ ಆಧಾರದ ಮೇಲೆ ನ್ಯಾಯ ಮತ್ತು ಪರಿಶ್ರಮ ಬೆಲೆಯ ಪಾವತಿಸುವುದು; ಮತ್ತು

(ii) ಎರಡನೇ ಹಂತದಲ್ಲಿ, ಸಕ್ಕರೆ ಕಾರ್ಖಾನೆಯಲ್ಲಿ ವಾಸ್ತವಿಕ ಪ್ರಾಪ್ತಿಯ ಮೇಲೆ ನಿರ್ಧರಿಸಲಾದ ಆದಾಯ ಹಂಚಿಕೆ ಆಧಾರದ ಮೇಲೆ ಕಬ್ಬಿನ ಹೆಚ್ಚುವರಿ ಬೆಲೆಯನ್ನು ಪಾವತಿಸುವುದು.

(ಹೆಚ್) ಹೆಚ್ಚುವರಿ ಕಬ್ಬು ಬೆಲೆಯ ಬಾಕಿಯನ್ನು ಭೂ ಕಂದಾಯದ ಹಿಂಬಾಕಿಯಂತೆ ವಸೂಲಿ ಮಾಡಲು;

(ಐ) ಕೆಲವು ಇತರ ಪ್ರಾಸಂಗಿಕ ತಿದ್ದುಪಡಿಗಳನ್ನೂ ಸಹ ಮಾಡಲು,

–ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ವೆಚ್ಚಗಳನ್ನು ಪಾವತಿ ಮಾಡಲು ವರ್ಷವೊಂದಕ್ಕೆ 30 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಉಂಟಾಗುತ್ತದೆ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ

ಖಂಡ 3:	(iv) ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 3ನೇ ಪ್ರಕರಣದ (11)ನೇ ಉಪಪ್ರಕರಣವು, ಕಬ್ಬು ನಿಯಂತ್ರಣ ಮಂಡಲಿಯ ಸರ್ಕಾರೇತರ ಸದಸ್ಯರಿಗೆ ಸಂದಾಯ ಮಾಡತಕ್ಕ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪವೇಶನ ಶುಲ್ಕಗಳ ದರಗಳ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 4:	ಪ್ರತಿಯೋಜಿಸಲು ಉದ್ದೇಶಿಸಲಾದ 4ನೇ ಪ್ರಕರಣದ (ಐ) ಖಂಡವು, ಮಂಡಲಿಯು ನಿರ್ವಹಿಸಬೇಕಾದ ಇತರ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 5:	(i) ಸೇರಿಸಲು ಉದ್ದೇಶಿಸಲಾದ 4ಬಿ ಪ್ರಕರಣದ (ಎಫ್) ಖಂಡವು, ಮಂಡಲಿಯು ನಿರ್ವಹಿಸಬೇಕಾದ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. (ii) ಸೇರಿಸಲು ಉದ್ದೇಶಿಸಲಾದ 4ಡಿ ಪ್ರಕರಣದ (3)ನೇ ಉಪಪ್ರಕರಣವು, ಹೆಚ್ಚುವರಿ ಕಬ್ಬು ಬೆಲೆಯನ್ನು ನಿರ್ಧರಿಸುವಾಗ ಮಂಡಲಿಯು ಪರಿಗಣಿಸಬೇಕಾದ ಇತರ ಅಂಶಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅದಿಕಾರವನ್ನು ನೀಡುತ್ತದೆ.

ಪ್ರತ್ಯಾಯೋಜಿತ ಶಾಸನಾತ್ಮಕ ಅಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಹೆಚ್.ಎಸ್. ಮಹದೇವ ಪ್ರಸಾದ್
ಸಹಕಾರ ಹಾಗೂ ಸಕ್ಕರೆ ಸಚಿವರು

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 33) ಉದ್ಧೃತ ಭಾಗ

XX XX XX

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭದವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಮಂಡಲಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕಬ್ಬು ನಿಯಂತ್ರಣ ಮಂಡಲಿ;

XX XX XX

(ಎನ್) "ಸಕ್ಕರೆ ಹಂಗಾಮು" ಎಂದರೆ ಅಕ್ಟೋಬರ್ ತಿಂಗಳ ಮೊದಲನೇ ದಿನದಿಂದ ಪ್ರಾರಂಭವಾಗುವ ಮತ್ತು ಮುಂದಿನ ವರ್ಷದ ಸೆಪ್ಟೆಂಬರ್ ತಿಂಗಳ ಮೂವತ್ತನೇ ದಿನದಂದು ಕೊನೆಗೊಳ್ಳುವ ವರ್ಷ.

XX XX XX

3. ಕಬ್ಬು ನಿಯಂತ್ರಣ ಮಂಡಲಿ.– (1) XX XX XX

(2) ಮಂಡಲಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಕ್ಕರೆ ಖಾತೆ ಹೊಂದಿದ ಸಚಿವರು – ಅಧ್ಯಕ್ಷರು

(ಬಿ) ಕೃಷಿ ಖಾತೆ ಹೊಂದಿದ ಸಚಿವರು – ಸಹ ಅಧ್ಯಕ್ಷರು

(ಸಿ) ಕಾರ್ಯದರ್ಶಿ II-, ಆರ್ಥಿಕ ಇಲಾಖೆ (ವೆಚ್ಚ) ಅಥವಾ ಉಪ ಕಾರ್ಯದರ್ಶಿಯವರ ದರ್ಜೆಗೆ ಕಡಿಮೆಯಿರದ ಅವರ ನಾಮನಿರ್ದೇಶಿತರು – ಸದಸ್ಯ

(ಡಿ) ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ – ಸದಸ್ಯ

(ಇ) ಕೃಷಿ ಆಯುಕ್ತರು – ಸದಸ್ಯ

(ಎಫ್) ಕಬ್ಬು ಬೆಳೆಗಾರರಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಐವರಿಗಿಂತ ಹೆಚ್ಚಿಲ್ಲದ ರೈತ ಪ್ರತಿನಿಧಿಗಳು – ಸದಸ್ಯರು

(ಜಿ) ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವವರಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಐವರಿಗಿಂತ ಸದಸ್ಯರು – ಸದಸ್ಯರು

(ಎಚ್) ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ

XX XX XX

(8) ಮಂಡಲಿಯು ಕಬ್ಬು ಅರೆಯುವ ಹಂಗಾಮು ಪ್ರಾರಂಭವಾಗುವ ಮುಂಚೆ, ಕಬ್ಬು ಅರೆಯುವ ಹಂಗಾಮು ಮುಕ್ತಾಯದ ನಂತರ ಮತ್ತು ಸಕ್ಕರೆ ಹಂಗಾಮಿನ ಅಂತ್ಯದಲ್ಲಿ ಕನಿಷ್ಠ ಮೂರು ಸಲ ಸಭೆ ಸೇರತಕ್ಕದ್ದು. ಮಂಡಲಿಯ ಸದಸ್ಯ–ಕಾರ್ಯದರ್ಶಿಯು ಮಂಡಲಿಯ ಅಧ್ಯಕ್ಷರ ನಿಯಂತ್ರಣಕ್ಕೆ ಒಳಪಟ್ಟು ಅವಶ್ಯವಾಗಬಹುದಾದಷ್ಟು ಸಲ ಸಭೆಗಳನ್ನು ಕರೆಯಬಹುದು ಮತ್ತು ಮೂರನೇ ಒಂದರಷ್ಟು ಸದಸ್ಯರು ಅಗತ್ಯ ಪಡಿಸಿದಾಗ ಸಭೆಯನ್ನು ಕರೆಯತಕ್ಕದ್ದು.

XX XX XX

4. ಮಂಡಲಿಯ ಪ್ರಕಾರ್ಯಗಳು.– ಈ ಮುಂದಿನವು ಮಂಡಲಿಯ ಪ್ರಕಾರ್ಯಗಳಾಗಿರತಕ್ಕದ್ದು:–

XX XX XX

(ಎಫ್) ಸಕ್ಕರೆ, ಕಬ್ಬಿನ ಸಿಪ್ಪೆ, ಕಾಕಂಬಿ ಮತ್ತು ಫ್ರೆಸ್‌ಮಡ್‌ಗಳಿಂದ ಬರುವ ಆದಾಯವನ್ನು ಪರಿಗಣನೆಗೆ ತೆಗೆದುಕೊಂಡು ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ಕಬ್ಬಿನ ಬೆಲೆಯನ್ನು ನಿರ್ಧರಿಸುವುದು.

XX XX XX

7. ಮೀಸಲು ಪ್ರದೇಶದಲ್ಲಿ ಕಬ್ಬಿನ ಖರೀದಿ.– (1) ಮೀಸಲು ಪ್ರದೇಶದಲ್ಲಿಯ ಕಬ್ಬು ಬೆಳೆಗಾರನು ಯಾವ ಕಾರ್ಖಾನೆಗೆ ಆ ಪ್ರದೇಶವನ್ನು ಹಾಗೆ ಮೀಸಲಿರಿಸಲಾಗಿದೆಯೋ, ಆ ಕಾರ್ಖಾನೆಯ ಅಧಿಬೋಗದಾರನಿಗೆ ಬೆಳೆದ ಕಬ್ಬನ್ನು ಮಾರಾಟ ಮಾಡಬಹುದು.

(2) ಕಾರ್ಖಾನೆಯು (1)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ಕೊಡಲೊಪ್ಪಿದ ಕಬ್ಬನ್ನು ಖರೀದಿಸುವ ಉದ್ದೇಶಕ್ಕಾಗಿ ಕಬ್ಬು (ನಿಯಂತ್ರಣ) ಆದೇಶ, 1966ರ 6ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತಹ ನಿಬಂಧನೆಗಳು ಹಾಗೂ ಷರತ್ತುಗಳ ಮೇಲೆ, ಅಂತಹ ರೀತಿಯಲ್ಲಿ, ಅಂತಹ ದಿನಾಂಕದೊಳಗೆ ಕಬ್ಬು ಬೆಳೆಗಾರರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

(3) ಮೇಲೆ ಸೂಚಿಸಲಾದ ಕಾರ್ಖಾನೆಯನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯು (2)ನೇ ಉಪ–ಪ್ರಕರಣದ ಮೇರೆಗಿನ ಒಪ್ಪಂದಕ್ಕೆ ಅನುಸಾರವಾಗಿ ಹೊರತು ಕಬ್ಬು ಬೆಳೆಗಾರರು ಬೆಳೆದ ಕಬ್ಬನ್ನು ಖರೀದಿಸತಕ್ಕದ್ದಲ್ಲ ಅಥವಾ ಖರೀದಿಸಲು ಒಪ್ಪಂದವನ್ನು ಮಾಡಿಕೊಳ್ಳತಕ್ಕದಲ್ಲ.

XX XX XX

8. ತೂಕ.– (1) ಕಬ್ಬಿನ ಖರೀದಿ ಹಾಗೂ ಪೂರೈಕೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಹಾಗೂ ಕರಾರುಗಳನ್ನು ತೂಕಗಳು ಹಾಗೂ ಬಹುವಿಧದ ಅಥವಾ ಅದರ ಉಪವಿಧಗಳ ಮೆಟ್ರಿಕ್ ಪದ್ಧತಿಗನುಸಾರವಾಗಿ ಮಾಡತಕ್ಕದ್ದು ಹಾಗೂ ಎಲ್ಲಾ ತೂಕಗಳನ್ನು ತೂಕದ ಯಂತ್ರದ ಸಾಧನಗಳ